ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ

ಸಂಪ್ರಬಂಧ

"ಕನ್ನಡ ಗ್ರಂಥ ಸಂಪಾದನೆಗೆ ಎಂ.ವಿ.ಸೀಯವರ ಕೊಡುಗೆ : ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿ

ರಾಮಚಂದ್ರಪ್ಪ.ಜಿ.ಹೆಚ್

ಮಾರ್ಗದರ್ಶಕರು

ಡಾ||ಆರ್.ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೭-೦೮

523

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ

ಕಿರು ಪ್ರಬಂಧ

"ಕನ್ನಡ ಗ್ರಂಥ ಸಂಪಾದನೆಗೆ ಎಂ.ಎಂ.ಕಲಬುರ್ಗಿಯವರ ಕೊಡುಗೆ : ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿ

ರಾಮಚಂದ್ರಪ್ಪ.ಹೆಚ್.ಟಿ

ಮಾರ್ಗದರ್ಶಕರು

ಡಾ||ವೀರೇಶ್.ಎಸ್.ಬಡಿಗೇರ

ಎಂ.ಫಿಲ್. ಹಸ್ತಪ್ರತಿಶಾಸ್ತ್ರ ಸಂಶೋಧನಾ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

[illegible]

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ

ಸಂಪ್ರಬಂಧ

"ಕನ್ನಡ ಗ್ರಂಥ ಸಂಪಾದನೆಗೆ ಎಂ.ವಿ.ಸೀಯವರ ಕೊಡುಗೆ : ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿ

ರಾಮಚಂದ್ರಪ್ಪ.ಜಿ.ಹೆಚ್

ಮಾರ್ಗದರ್ಶಕರು

ಡಾ॥ಆರ್.ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೭-೦೮

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭–೨೦೦೮ ಸಾಲಿನ ಎಂ.ಫಿಲ್ ಪದವಿಗಾಗಿ ***"ಕನ್ನಡ ಗ್ರಂಥ ಸಂಪಾದನೆಗೆ ಎಂ.ವಿ.ಸೀ ಯವರ ಕೊಡುಗೆ: ಒಂದು ಅಧ್ಯಯನ"*** ಎಂಬ ಸಂಪ್ರಬಂಧವನ್ನು ಡಾ॥ಆರ್.ಲಕ್ಷ್ಮೀನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 03/11/08

ಸ್ಥಳ : ಬೆಂಗಳೂರು.

ಅಭ್ಯರ್ಥಿಯ ಸಹಿ

(ರಾಮಚಂದ್ರಪ್ಪ.ಜಿ.ಹೆಚ್)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭-೨೦೦೮ ಸಾಲಿನ ಎಂ.ಫಿಲ್ ಪದವಿಗಾಗಿ ***"ಕನ್ನಡ ಗ್ರಂಥ ಸಂಪಾದನೆಗೆ ಎಂ.ವಿ.ಸೀ ಯವರ ಕೊಡುಗೆ: ಒಂದು ಅಧ್ಯಯನ"*** ಎಂಬ ಸಂಪ್ರಬಂಧವನ್ನು ರಾಮಚಂದ್ರಪ್ಪ.ಜಿ.ಹೆಚ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈ ವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: **ಮಾರ್ಗದರ್ಶಕರು**

ಸ್ಥಳ : **(ಡಾ॥ಆರ್.ಲಕ್ಷ್ಮೀನಾರಾಯಣ)**



ಪ್ರೊ॥ಎಂ.ಪಿ.ಸೀತಾರಾಮಯ್ಯ

ಪರಿವಿಡಿ:

ಅಧ್ಯಾಯ-೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ:

ಪೀಠಿಕೆ:

ಗ್ರಂಥಸಂಪಾದನಾಶಾಸ್ತ್ರ ಇತ್ತೀಚೆಗೆ ಬೆಳವಣಿಗೆ ಹೊಂದುತ್ತಿರುವ ಶಾಸ್ತ್ರವಾಗಿದೆ. ಇದನ್ನು ಒಂದು ಶಾಸ್ತ್ರವೆಂದು ಮೊದಲು ಒಪ್ಪಿಕೊಂಡವರು ಪಾಶ್ಚಿಮಾತ್ಯರು. ಲ್ಯಾಟಿನ್ ಮತ್ತು ಹಿಬ್ರೂ ಭಾಷೆಗಳಲ್ಲಿ ಬಹಳ ಕಾಲದ ಹಿಂದೆಯೇ ಗ್ರಂಥ ಸಂಪಾದನೆಯ ಕೆಲಸ ಆರಂಭವಾಗಿರುವಂತೆ ತಿಳಿದುಬರುತ್ತದೆ. ಭಾರತೀಯರಲ್ಲಿಯೂ ಕೂಡ ಪ್ರಾಚೀನ ಕವಿಗಳ ಗ್ರಂಥಗಳನ್ನು ಬಹು ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬಂದಿರುವ ಕಲ್ಪನೆ ಹೊಸದೇನಲ್ಲ. ಏಕೆಂದರೆ ವೇದಗಳನ್ನೂ, ಮಹಾಕಾವ್ಯಗಳನ್ನೂ ಕಂಠಪಾಠದ ಮೂಲಕವಾಗಿಯೇ ಶತಮಾನಗಳವರೆಗೆ ಪಾಠ ಕೆಡದಂತೆ ಕಾಪಾಡಿಕೊಂಡು ಬಂದಿರುವ ಪರಂಪರೆಯಿದೆ.

ಗ್ರಂಥ ಸಂಪಾದನೆ ಒಂದು ನಿಯಮಬದ್ದ ಶಾಸ್ತ್ರವಾಗಿದೆ. ಪ್ರಾಚೀನಕಾವ್ಯಗಳನ್ನು, ಇತರ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸುವುದು ಬಹಳ ಕಷ್ಟವೂ, ಕ್ಲಿಷ್ಟವೂ ಆದ ಕಾರ್ಯ. ಏಕೆಂದರೆ ಒಂದು ಗ್ರಂಥವನ್ನು ಸಂಪಾದನೆ ಮಾಡಬೇಕಾದರೆ ಸಂಪಾದಕನಿಗೆ ಹಲವಾರು ಶಾಸ್ತ್ರಗಳ ಪರಿಚಯ ಹಾಗೂ ಆಳವಾದ ಪಾಂಡಿತ್ಯ ಅವಶ್ಯಕ. ಸಾಹಿತ್ಯವೆಂಬ ಗಣಿಯನ್ನು ಪ್ರವೇಶಿಸಿ ಮಣ್ಣಿನಿಂದ ಲೋಹವನ್ನು ಬೇರ್ಪಡಿಸಿ ಸುವರ್ಣವನ್ನು ಹೊರತೆಗೆಯುವಂತಹ ಕಾರ್ಯ ಹೇಗೆ ಕ್ಲಿಷ್ಟವೋ ಹಾಗೆಯೇ ಗ್ರಂಥವನ್ನು ಸಂಪಾದನೆ ಮಾಡುವ ಕಾರ್ಯಕೂಡ.

ಗ್ರಂಥ ಎಂಬ ಶಬ್ದವನ್ನು ಸಾಮಾನ್ಯವಾಗಿ ಪುಸ್ತಕ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಗ್ರಂಥಸಂಪಾದನಾ ಶಾಸ್ತ್ರದ ಹಿನ್ನೆಲೆಯಲ್ಲಿ ಇದಕ್ಕೆ ವಿಶಾಲವಾದ ಅರ್ಥವಿದೆ. ಡಿ.ಎಲ್.ನರಸಿಂಹಾಚಾರ್ "ಸಂಶೋಧಕನಿಗೆ ಪರಿಚಯಮಾಡಿಕೊಳ್ಳಲು ಸಾಧ್ಯವಿರುವ ಮತ್ತು ಅವನಿಗೆ ಹೆಚ್ಚು ಕಡಿಮೆ ತಿಳಿದಿರುವ ಭಾಷೆಯಲ್ಲಿ ಅರ್ಥವಾಗುವಂತಿರುವ ರೀತಿಯಲ್ಲಿ ಬರೆದಿರುವ ಯಾವುದೇ ಲೇಖನವನ್ನಾದರೂ ಗ್ರಂಥ ಎಂದು ಕರೆಯಬಹುದು" ಎಂದಿದ್ದಾರೆ.

ಕವಿಯು ತನ್ನ ಸ್ವಹಸ್ತದಿಂದ ಬರೆದಿರುವ ಮೂಲಪಾಠವನ್ನು ಅದುವರೆವಿಗೂ ದೊರೆತಿರುವ ಹಸ್ತಪ್ರತಿಗಳ ಆಧಾರದ ಮೇಲೆ ಕವಿಯ ಮೂಲ ಪಾಠವನ್ನು ಅಥವಾ ಕವಿಯ ಮೂಲಪಾಠಕ್ಕೆ ಹತ್ತಿರವಾದ ಉತ್ತಮಪಾಠವನ್ನು ನಿರ್ಣಯಿಸುವುದನ್ನು ಗ್ರಂಥ ಸಂಪಾದನೆ ಎನ್ನಬಹುದು. ಇಲ್ಲಿ

ಮುಖ್ಯವಾಗಿ ಸಂಪಾದಕ ಕವಿಯ ಯಾವುದೇ ಬರವಣಿಗೆಯನ್ನು ತಿದ್ದದೆ ಕವಿ ಏನು ಬರೆದಿರಬಹುದೆಂಬುದನ್ನು ಕಂಡು ಹಿಡಿದು ಕವಿಯ ಪಾಠಕ್ಕೆ ಹತ್ತಿರವಾದ ಪಾಠವನ್ನು ನೀಡುವುದು ಅವನ ಮುಖ್ಯ ಗುರಿಯಾಗಿರುತ್ತದೆ. ಈ ಕಾರ್ಯ ಕ್ಲಿಷ್ಟವೂ ತ್ರಾಸದಾಯಕವೂ ಆದದ್ದಾಗಿದೆ.

ಗ್ರಂಥಸಂಪಾದನಾಶಾಸ್ತ್ರ ಇನ್ನೂ ಬೆಳವಣಿಗೆ ಹೊಂದುತ್ತಿರುವ ಶಾಸ್ತ್ರವಾಗಿದೆ. ಇದು ಪಾಶ್ಚಾತ್ಯರಿಂದ ಭಾರತೀಯರಿಗೆ ಪರಿಚಯವಾಯಿತು. ಪಾಶ್ಚಾತ್ಯರಿಂದ ಪ್ರಭಾವಿತರಾದ ಅನೇಕ ಭಾರತೀಯರು ಅಲ್ಲಿಗೆ ಹೋಗಿ ಈ ಶಾಸ್ತ್ರವನ್ನು ಅಧ್ಯಯನ ಮಾಡಿ ಬಂದರು. ಅಂತಹವರಲ್ಲಿ ಮಹಾಭಾರತದ ಸಂಸ್ಕರಣ ಮತ್ತು ಸಂಪಾದನಾ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದ ವಿ.ಎಸ್.ಸುಕ್ಥಂಕರ್ ಪ್ರಮುಖರು.

ಕನ್ನಡ ಗ್ರಂಥಸಂಪಾದನೆಗೆ ಭದ್ರಬುನಾದಿಯನ್ನು ಹಾಕಿದವರು ರೆವರೆಂಡ್ ಜಾರ್ಜ್‌ಫರ್ಡಿನೆಂಡ್ ಕಿಟಲ್ ಮತ್ತು ಬಿ.ಎಲ್.ರೈಸ್. ಕಿಟಲ್, ರೈಸ್ ನಂತರ ಕನ್ನಡ ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಅನೇಕ ಮಹನೀಯರು ತಮ್ಮನ್ನು ತೊಡಗಿಸಿಕೊಂಡರು. ಅಂತಹವರಲ್ಲಿ ಎಸ್.ಜಿ.ನರಸಿಂಹಾಚಾರ್, ವಿ.ಶಾಮಾಚಾರ್, ಟಿ.ಸ್.ವೆಂಕಣ್ಣಯ್ಯ, ಎಲ್.ಬಸವರಾಜು, ಎ.ಆರ್.ಕೃಷ್ಣಶಾಸ್ತ್ರಿ, ಹಳಕಟ್ಟಿ, ಚನ್ನಪ್ಪ ಉತ್ತಂಗಿ, ಎಸ್.ಸಿ ನಂದಿಮಠ, ಆರ್.ಸಿ.ಹಿರೇಮಠ, ಎಂ.ಎಂ.ಕಲ್ಬುರ್ಗಿ, ಎಂ.ವಿ.ಸೀ ಮುಂತಾದವರು. ಪ್ರಸ್ತುತ ಈ ಅಧ್ಯಯದಲ್ಲಿ ಎಂ.ವಿ.ಸೀ ಯವರ ಕೆಲವು ಸಂಪಾದಿತ ಕೃತಿಗಳ ಆಧಾರದ ಮೇಲೆ ಕನ್ನಡ ಗ್ರಂಥ ಸಂಪಾದನೆಗೆ ಎಂ.ವಿ.ಸೀ ಯವರ ಕೊಡುಗೆಯನ್ನು ಕುರಿತು ಅಧ್ಯಯನ ನೆಡಸಲಾಗಿದೆ.

ಉದ್ದೇಶ:

ಕನ್ನಡ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಎಂ.ವಿ.ಸೀಯವರ ಹೆಸರು ಉಲ್ಲೇಖನೀಯ. ಆದರೆ ಇದುವರೆಗೆ ಇವರ ಸಂಪಾದಿತ ಕೃತಿಗಳನ್ನು ಕುರಿತು ಯಾವುದೇ ರೀತಿಯ ಸಮಗ್ರ ಅಥವಾ ವಿಶಿಷ್ಟ ಅಧ್ಯಯನಗಳು ನಡೆದಿಲ್ಲ. ಈ ಹಿನ್ನಲೆಯಲ್ಲಿ ಅವರ ಕೆಲವು ಸಂಪಾದಿತ ಕೃತಿಗಳ ಅಧ್ಯಯನ ಅವಶ್ಯಕ. ಅವರ ಸಾಹಿತ್ಯದ ಬಗೆಗಿನ ಆಸಕ್ತಿ ಈ ಅಧ್ಯಯನ ಕೈಗೊಳ್ಳಲು ಸಾಧ್ಯವಾಯಿತು.

ಎಂ.ವಿ.ಸೀ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಕಷ್ಟು ಕೃಷಿ ಮಾಡಿದ್ದರೂ ಸಹ ಗ್ರಂಥಸಂಪಾದನೆಯಲ್ಲಿನ ಅವರ ವಿಶಿಷ್ಟ ಸಾಧನೆಯನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸಾಹಿತ್ಯರಚನೆಗಿಂತ ಗ್ರಂಥಸಂಪಾದನೆ ಒಂದು ಕ್ಲಿಷ್ಟ ಕಾರ್ಯವಾಗಿದ್ದು ಎಂ.ವಿ.ಸೀ ಯವರ ಗ್ರಂಥಸಂಪಾದನೆಯ ಹಿನ್ನಲೆಯಲ್ಲಿ ಗ್ರಂಥಸಂಪಾದನೆಯ ವೈಶಿಷ್ಟ್ಯಗಳನ್ನು ಅರಿಯುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಸ್ವರೂಪ –ವ್ಯಾಪ್ತಿ

ಪ್ರಸ್ತುತ ಅಧ್ಯಯನವು "ಕನ್ನಡ ಗ್ರಂಥಸಂಪಾದನೆಗೆ ಎಂ.ವಿ.ಸೀ ಯವರ ಕೊಡುಗೆ" ಎಂಬ ವಿಷಯವನ್ನು ಕುರಿತದ್ದಾಗಿದೆ. ಎರಡನೆಯ ಅಧ್ಯಾಯದಲ್ಲಿ ಎಂ.ವಿ.ಸೀ ಯವರ ಜೀವನ ಮತ್ತು ಸಾಹಿತ್ಯವನ್ನು ಕುರಿತು ಹೇಳಲಾಗಿದೆ. ಇಲ್ಲಿ ಮುಖ್ಯವಾಗಿ ಕನ್ನಡ ಸಾಹಿತ್ಯದಲ್ಲಿ ಎಂ.ವಿ.ಸೀ ಯವರ ಸ್ಥಾನ, ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬೆಳೆಯಲು ನೀಡಿದ ಪ್ರೇರಣೆ, ಪ್ರಭಾವಗಳನ್ನು ಚರ್ಚಿಸಲಾಗಿದೆ. ಅವರು ರಚಿಸಿದ ಕೃತಿಗಳ ಬಗ್ಗೆ ಆ ಕೃತಿಗಳನ್ನು ರಚಿಸಲು ನೀಡಿದ ಪ್ರೇರಣೆಗಳನ್ನು ಕುರಿತು ಹೇಳಲಾಗಿದೆ.

ಅಧ್ಯಾಯ ಮೂರರಲ್ಲಿ ಎಂ.ವಿ.ಸೀಯವರ ಸಂಪಾದಿತ ಗ್ರಂಥಗಳನ್ನು ಎರಡು ರೀತಿ ವಿಭಾಗಮಾಡಲಾಗಿದೆ. ಲಕ್ಷಣ ಗ್ರಂಥಗಳು, ಕಾವ್ಯಗ್ರಂಥಗಳು. ಲಕ್ಷಣ ಗ್ರಂಥಗಳಲ್ಲಿ ಕವಿರಾಜಮಾರ್ಗವನ್ನು ಮಾತ್ರ ತೆಗೆದುಕೊಂಡಿದ್ದು ಈ ಅಧ್ಯಾಯದಲ್ಲಿ ಕವಿರಾಜಮಾರ್ಗದ ಗ್ರಂಥಕರ್ತೃವಿನ ಕುರಿತು ಕೆ.ಬಿ.ಪಾಠಕ್‌ರಿಂದ ಇಂದಿನವರೆಗಿನ ಚರ್ಚೆಗಳನ್ನು, ಎಂ.ವಿ.ಸೀ ಇದರ ಕರ್ತೃ ಶ್ರೀವಿಜಯನೆಂದು ಹೇಳಿರುವ ಪ್ರಮಾಣಗಳು ಮತ್ತು ಅದನ್ನು ಸಾಧಿಸಿದ ವಿಷಯಗಳನ್ನು ಚರ್ಚಿಸಲಾಗಿದೆ. ನಂತರ ಕಾವ್ಯಗ್ರಂಥಗಳಲ್ಲಿ ಶ್ರೀಕೃಷ್ಣಬಾಲ ಲೀಲೆ, ಕೀರ್ತನ ಕುಸುಮಾಂಜಲಿ, ಅರ್ಚನ ಗ್ರಂಥಗಳ ಸಂಪಾದನೆ ಅವುಗಳ ಕರ್ತೃ, ಕಾಲ, ಹಸ್ತಪ್ರತಿ, ಕಾವ್ಯಗಳು ಒಳಗೊಂಡಿರುವ ವಿಷಯಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಅಧ್ಯಯನಕ್ಕೆ ತಗೆದುಕೊಂಡಿರುವ ಸಂಪಾದಿತ ಕೃತಿಗಳ ಹಿನ್ನಲೆಯಲ್ಲಿ ಅವರ ಗ್ರಂಥಸಂಪಾದನೆಯ ವೈಶಿಷ್ಟ್ಯಗಳನ್ನು ಪಾಠಪರಿಷ್ಕರಣೆ, ಉನ್ನತವಿಮರ್ಶೆ, ಪಾಠಾಂತರಗಳ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ. ಅಧ್ಯಾಯ ಐದರಲ್ಲಿ ಈ ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳನ್ನು ಹೇಳಲಾಗಿದೆ. ಅನುಬಂಧದಲ್ಲಿ ಎಂ.ವಿ.ಸೀ ಜೀವನಪಥ, ಎಂ.ವಿ.ಸೀ ಕೃತಿಸೂಚಿ ಗ್ರಂಥ ಋಣವನ್ನು ನೀಡಲಾಗಿದೆ.

ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಎಂ.ವಿ.ಸೀಯವರ ಜೀವನಸಾಧನೆ, ಅವರ ಸಂಪಾದಿತ ಗ್ರಂಥಗಳಲ್ಲಿ ಕವಿರಾಜಮಾರ್ಗ, ಶ್ರೀಕೃಷ್ಣ ಬಾಲಲೀಲೆ, ಕೀರ್ತನ ಕುಸುಮಾಂಜಲಿ, ಅರ್ಚನ ಗ್ರಂಥಗಳ ಕರ್ತೃ, ಕಾಲ ಮಹತ್ವ, ಹಸ್ತಪ್ರತಿ ವಿವರ, ಸಂಪಾದನೆ, ಸಂಪಾದನೆಯಲ್ಲಿ ಕಂಡು ಬರುವ ವೈಶಿಷ್ಟ್ಯಗಳನ್ನು ಒಳಗೊಂಡಿರುತ್ತದೆ. ವೈಶಿಷ್ಟ್ಯಗಳಲ್ಲಿ ಪಾಠಪರಿಷ್ಕರಣೆ, ಉನ್ನತವಿಮರ್ಶೆ, ಪಾಠಾಂತರಗಳು ಮಾತ್ರ ಒಳಗೊಂಡಿವೆ.

ಎಂ.ವಿ.ಸೀ ಯವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯರಚನೆಯನ್ನು ಮಾಡಿದ್ದು ಒಂದೊಂದು ಪ್ರಕಾರದಲ್ಲಿನ ಅವರ ಕೃತಿಗಳು ಒಂದೊಂದು ಅಧ್ಯಯನ ವಿಷಯಗಳಾಗುತ್ತವೆ. ಅಲ್ಲದೆ ಗ್ರಂಥಸಂಪಾದನೆಯ ಕ್ಷೇತ್ರದಲ್ಲಿನ ಅವರ ಸಂಪಾದಿತ ಕೃತಿಗಳು ಕೂಡ ವಿವಿಧ ಅಧ್ಯಯನ ಕೈಗೊಳ್ಳಲು ವಿಷಯಗಳಾಗುತ್ತವೆ. ಆದ್ದರಿಂದ ಎಂ.ವಿ.ಸೀ ಯವರ ಎಲ್ಲಾ ಸಂಪಾದಿತ ಗ್ರಂಥಗಳನ್ನು ಒಂದೇ ಅಧ್ಯಯನದಲ್ಲಿ ಅಳವಡಿಸಲು ಸಾಧ್ಯವಿಲ್ಲ ಮತ್ತು ಎಂ.ಫಿಲ್.ಪದವಿಯ ಅಧ್ಯಯನದ ಅವಧಿಯು ಕೂಡ ಕಡಿಮೆಯಿರುವುದರಿಂದ ಅವರ ಸಂಪಾದಿತ ಗ್ರಂಥಗಳನ್ನು ಕಾವ್ಯಗ್ರಂಥಗಳು, ಲಕ್ಷಣಗ್ರಂಥಗಳೆಂದು ವಿಭಾಗಿಸಿ ಲಕ್ಷಣಗ್ರಂಥಗಳಲ್ಲಿ ಕವಿರಾಜಮಾರ್ಗವೊಂದನ್ನು ಹಾಗೂ ಕಾವ್ಯಗ್ರಂಥಗಳಲ್ಲಿ ಶ್ರೀಕೃಷ್ಣಬಾಲಲೀಲೆ, ಅರ್ಚನ, ಕೀರ್ತನ ಕುಸುಮಾಂಜಲಿ ಗ್ರಂಥಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ-೨

ಪ್ರೊ॥ಎಂ.ವಿ.ಸೀತಾರಾಮಯ್ಯನವರ ಜೀವನ-ಸಾಧನೆ

ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಸಾಹಿತ್ಯ ಸೃಷ್ಟಿಗೆ ತೊಡಗಿಸಿಕೊಂಡು ಹಳೆಯ ಸಂಪ್ರದಾಯ ಮತ್ತು ಹೊಸ ಸಂಪ್ರದಾಯದ ಸಾಹಿತ್ಯಕ್ಕೆ ಸೇತುವೆಯಾಗಿ ಕೆಲಸಮಾಡಿದ ಸರಳ ಸಜ್ಜನಿಕೆಯ, ಕನ್ನಡವೇ ಉಸಿರಾಗಿ ಕನ್ನಡಕ್ಕಾಗಿಯೇ ತಮ್ಮ ಬದುಕನ್ನು ಮೀಸಲಿರಿಸಿದ ನಿಸ್ವಾರ್ಥ, ನಿಷ್ಠಾವಂತ ಸಾಹಿತಿ ಎಂ.ವಿ.ಸೀತಾರಾಮಯ್ಯ ನವರು ಕನ್ನಡದ ಅಗ್ರಮಾನ್ಯ ಸಾಹಿತ್ಯಕಾರರಲ್ಲಿ ಒಬ್ಬರಾಗಿ ಸರ್ವತೋಮುಖ ಸಾಹಿತ್ಯ ರಚನೆಯ ನೈಪುಣ್ಯದಿಂದ ವಿದ್ವತ್ತಿನಿಂದ ವಿನಯ-ಸೌಜನ್ಯಗಳಿಂದ ಉದಾರತೆಗಳಿಂದ ಪರಿಶೋಭಿತರಾದವರು ಎಂ.ವಿ. ಸೀತಾರಾಮಯ್ಯ ನವರು.

ಸೀತಾರಾಮಯ್ಯನವರದು ಬಹುಮುಖ ಪ್ರತಿಭೆ. ಅವರ ಒಂದುನೂರು ಪುಸ್ತಕಗಳು ಪ್ರಕಟವಾಗಿವೆ. ಶಿಶುಸಾಹಿತ್ಯದಿಂದ ಹಿಡಿದು ವ್ಯಾಕರಣಮೀಮಾಂಸೆಯವರೆಗೆ ಅವರ ಸಾಹಿತ್ಯದ ಹರವು ಇದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ವಿಚಾರ, ವಿಮರ್ಶೆ, ಜೀವನಚರಿತ್ರೆ, ಸಂಶೊಧನೆ, ಗ್ರಂಥಸಂಪಾದನೆ ಹೀಗೆ ಎಲ್ಲಾ ಪ್ರಕಾರಗಳಲ್ಲಿಯೂ ಕೆಲಸಮಾಡಿದ್ದಾರೆ. ಕೆಲಸಮಾಡಿರುವುದಷ್ಟೇ ಅಲ್ಲ ಪ್ರತಿಯೊಂದು ಪ್ರಕಾರದಲ್ಲೂ ಗಮನಾರ್ಹ ಕೃತಿ ರಚನೆ ಮಾಡಿದ್ದಾರೆ. ಅವರೊಬ್ಬ ಚಿತ್ರಕಾರರು ಹೌದು. ಪ್ರಸಿದ್ಧ ಕಲಾವಿಧ ಕೆ.ವೆಂಕಟಪ್ಪನವರೊಡನೆ ಅಭ್ಯಾಸ ಮಾಡಿ ಶಾಂತಿನಿಕೇತನಕ್ಕೂ ಹೋಗಿಬಂದವರು. ಅವರ ಚಿತ್ರಗಳು ಅನೇಕ ಪ್ರದರ್ಶನಗಳಲ್ಲಿ ಬಹುಮಾನ ಪಡೆದಿವೆ. ಅನೇಕ ಪುಸ್ತಕಗಳಲ್ಲಿ ಅವರ ಚಿತ್ರಗಳನ್ನು ನೋಡಬಹುದು. ಅವರಿಗೆ ಸಂಗೀತದಲ್ಲಿಯೂ ಪ್ರವೇಶವಿತ್ತು. ಅವರದು ತುಂಬಿದವ್ಯಕ್ತಿತ್ವ. ಅವರು ಯಾವ ಕೆಲಸವನ್ನೂ ಸಣ್ಣದೆಂದು ಭಾವಿಸದೆ ಮಾಡುವ, ಮಾಡಬೇಕಾದ ಎಲ್ಲಾ ಕೆಲಸಗಳಲ್ಲೂ ಮಹತ್ವದವೆಂದು ಭಾವಿಸಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಪಾಂಡಿತ್ಯ ತುಂಬಿದವರು ಕೆಲವರಿರುತ್ತಾರೆ ಪ್ರತಿಭೆತುಂಬಿದವರು ಕೆಲವರಿರುತ್ತಾರೆ. ಆದರೆ ಇವೆರಡೂ ಸಮಪ್ರಮಾಣದಲ್ಲಿ ತುಂಬಿದವರು ವಿರಳ. ಈ ವಿರಳರಲ್ಲಿ ಎಂ.ವಿ.ಸೀ ಯವರು ಒಬ್ಬರು. ಅವರ ವ್ಯಾಕರಣ ಛಂದಸ್ಸು ಅಲಂಕಾರಗಳಿಗೆ ಸಂಬಂಧಿಸಿದ ಅವರ ಕೆಲಸವನ್ನು ನೋಡಿದವರಿಗೆ ಈ ವಿಷಯ ಸುಸ್ಪಷ್ಟ.

ಸೀತಾರಾಮಯ್ಯನವರ ಜೀವನಸಾಧನೆ ಒಂದು ಪವಾಡವೆನ್ನಬಹುದು. ಏಕೆಂದರೆ ಅವರ ಆರೋಗ್ಯ ಮೊದಲಿನಿಂದಲೂ ಸರಿಯಾಗಿರಲಿಲ್ಲ ಇದರ ನಡುವೆಯೂ ಅವರು ಮಾಡಿದ ಸಾಧನೆ ಗಮನಿಸಿದಾಗ ಕೆಲಸ ಮಾಡುವ ಮನಸ್ಸು, ನಿಷ್ಠೆ, ಆಸಕ್ತಿಗಳಿದ್ದರೆ ಏನು ಬೇಕಾದರೂ

ಸಾಧಿಸಬಹುದೆಂಬುದು ಅರಿವಾಗುತ್ತದೆ. ಅದನ್ನು ಜೀವನದಲ್ಲಿ ಸಾಧಿಸಿ ತೋರಿಸಿದವರು ಎಂ.ವಿ.ಸೀಯವರು. ಹುಟ್ಟು ಕವಿಯಾಗಿದ್ದರೂ ತಾವು ಕಂಡು ಕೇಳಿದ ಅಭ್ಯಾಸ ಮಾಡಿದ ಜ್ಞಾನವನ್ನೇ ಆಧಾರವಾಗಿಟ್ಟುಕೊಂಡು ಆದರ್ಶ ಸಾಹಿತ್ಯ ವಿದ್ಯಾರ್ಥಿ ಪಂಡಿತ, ವಿದ್ವಾಂಸನಾಗುವ ಕ್ರಮವನ್ನು ತೋರಿಸಿಕೊಟ್ಟವರು ಎಂ.ವಿ.ಸೀ.

"ಸಿದ್ದಂ ಸತ್ಸಂಪ್ರದಾಯೇ ಸ್ಥಿರಧಿಯೇ ಮನಘಂ ಶ್ರೋತ್ರಿಯಂ ಬ್ರಹ್ಮನಿಷ್ಠಂ
ಸತ್ವಸ್ಥಂ ಸತ್ಯವಾಚಂ ಸಮಯನಿಯತಯಾ ಸಾಧು ವೃತ್ಯಾಸ ಮೇತಂ
ಡಂಭಾಸೂಯಾದಿಮುಕ್ತಂ ಜಿತವಿಷಯಗುಣಂ ದೀರ್ಘಬಂಧುದಯಾಳಂ
ಸ್ಖಾಲಿತ್ಯೇ ಶಾಸಿತಾರಂ ಸ್ವಪರಹಿತಿಪರಮ್ ದೇಶಿಕಂ ಭೂಷ್ಣುರೀಪ್ಸೇತ್"

ಸಂಪ್ರದಾಯದಲ್ಲಿ ಸಿದ್ಧನೂ, ದೃಢ ಬುದ್ಧಿಯುಳ್ಳವನೂ, ವಾದರಹಿತನೂ, ಶ್ರೋತ್ರಿಯನೂ, ಬ್ರಹ್ಮನಿಷ್ಠನೂ, ಸತ್ವಶಾಲಿಯೂ, ಸತ್ವವಾಚನೂ, ಎಲ್ಲಾ ಕಾಲದಲ್ಲಿಯೂ ಸಾಧುವೃತ್ತಿಯಿಂದ ಕೂತಿದವನೂ, ಡಂಬಾಸೂಯಾದಿಗಳಿಂದ ಮುಕ್ತನೂ, ಜಿತೇಂದ್ರಿಯನೂ, ದೀರ್ಘಬಂಧುವೂ, ದಯಾಳುವೂ, ಶಿಷ್ಯವಾತ್ಸಲ್ಯವುಳ್ಳವನೂ, ಇತರರ ಹಿತದಲ್ಲಿ ಹೆಚ್ಚು ಆಸಕ್ತಿವುಳ್ಳವನೂ ಆದವನು ಆಚಾರ್ಯ" ಎಂಬ ಡಾ॥ಗೀತಾಚಾರ್ಯರ ಮಾತು ಎಂ.ವಿ.ಸೀ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಬಾಲ್ಯ ವಿಧ್ಯಾಭ್ಯಾಸ:

ವೆಂಕಟದಾಸಪ್ಪನವರಿಗೆ ಎಂಟು ಜನ ಮಕ್ಕಳು ಅವರಲ್ಲಿ ನಾಲ್ಕು ಹೆಣ್ಣು ಮತ್ತು ನಾಲ್ಕು ಗಂಡುಮಕ್ಕಳು. ಎಂ.ವೀ.ಸೀಯವರು ಮೂರನೆಯವರು. ಇವರು ಹುಟ್ಟಿದ್ದು ಸಾಧಾರಣ ಸಂವತ್ಸರದ ಭಾದ್ರಪದ ಶುದ್ಧಷಷ್ಟಿಯಂದು. ಅಂದರೆ ೯-೯-೧೯೧೦ ಇವರು ಹುಟ್ಟಿದ್ದು ಮೈಸೂರಿನಲ್ಲಿ. ದೈವ, ವಿಧಿ, ಅದೃಷ್ಟ, ಮೊದಲಾದ ವಿಚಾರಗಳಲ್ಲಿ ನಂಬಿಕೆಯಿಟ್ಟಿದ್ದ ತಂದೆ ಇವರಿಗೆ 'ಸೀತಾರಾಮ' ಎಂದು ಹೆಸರಿಟ್ಟರು. ಈ ಹೆಸರಿಡಲು ಕಾರಣ ಒಂದು ದೈವದ ಬಗೆಗಿನ ನಂಬಿಕೆ ಮತ್ತೊಂದು ಹಿರಿಯರ ಹೆಸರಿಡಬೇಕೆಂಬ ಸಂಪ್ರದಾಯ. ಸೀತಾರಾಮಯ್ಯನವರ ತಂದೆ ಗುಮಾಸ್ತರಾಗಿದ್ದುಕೊಂಡು ತನ್ನ ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸುವುದು ಅಂದಿನ ಕಾಲಕ್ಕೆ ಸುಲಭದ ಮಾತಾಗಿರಲಿಲ್ಲ. ಆದರೂ ಎಲ್ಲರಿಗೂ ವಿದ್ಯಾಭ್ಯಾಸ ಮಾಡಿಸಿದರು. ಅಲ್ಲದೆ ಇವರದು ಅವಿಭಕ್ತ ಕುಟುಂಬವಾಗಿತ್ತು.

ಸೀತಾರಾಮಯ್ಯನವರು ಬೆಳೆದದ್ದು ಅವಿಭಕ್ತ ಕುಟುಂಬದಲ್ಲೇ, ನೆಲೆಸಿದ್ದು ಕೂಡ ಬಡವರ ನೆಲೆವೀಡಾದ ಮೈಸೂರಿನ ರಾಮಚಂದ್ರ ಅಗ್ರಹಾರದಲ್ಲಿ. ಸೀತಾರಾಮಯ್ಯನವರು ತಮ್ಮ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಬನುಮಯ್ಯನವರ ವಿದ್ಯಾಶಾಲಾ ಮೈಸೂರು ಇಲ್ಲಿ ಮುಗಿಸಿದರು. ಮುಂದೆ ಕಾಲೇಜು ಶಿಕ್ಷಣವನ್ನು ಇಂಟರ್‌ಮೀಡಿಯಟ್ ಹಾಗೂ ಮಹಾರಾಜ ಕಾಲೇಜಿನಲ್ಲಿ ಪಡೆದರು. ಇಲ್ಲಿಗೆ ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಿ ಕುಟುಂಬಕ್ಕೆ ನೆರವಾಗುವುದು ಅವರ ಉದ್ದೇಶವಾಗಿತ್ತು. ಆದರೆ ತಂದೆಯವರ ಆಸಕ್ತಿ, ಫ್ರೀಷಿಪ್ ಕೊಡಿಸುವುದಾಗಿತ್ತು ಪ್ರೊ. ವೆಂಕಣ್ಣಯ್ಯನವರು ನೀಡಿದ ಭರವಸೆ, ಉತ್ತೇಜನ ಹಾಗೂ ತೀ.ನಂ.ಶ್ರೀಯವರ ಒತ್ತಾಯದಿಂದ ಕನ್ನಡ ಎಂ.ಎ ಪದವಿ ಮುಗಿಸುವುದು ಅವರಿಗೆ ಸಾಧ್ಯವಾಯಿತು. ಸೀತಾರಾಮಯ್ಯನವರ ಜೀವನ ಚರಿತ್ರೆಯನ್ನು ಆರ್.ಎಸ್.ರಾವ್ ರವರು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಆದನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಕಾಲೇಜು ವಿದ್ಯಾಭ್ಯಾಸದವರೆಗೂ ತಮಗೆ ದೊರೆತ ಸೌಲಭ್ಯಗಳನ್ನೆಲ್ಲ ಸೀತಾರಾಮಯ್ಯನವರು ಸದುಪಯೋಗಪಡಿಸಿಕೊಂಡು ತಮ್ಮ ಮುಂದಿನ ವಿದ್ವತ್ ಸಂಪಾದನೆಗೆ ಗಟ್ಟಿಯಾದ ತಳಪಾಯ ಹಾಕಿಕೊಂಡರು. ಶಾಲಾ ಕಾಲೇಜುಗಳ ಕ್ರಮಬದ್ಧ ಅಭ್ಯಾಸಗಳ ಜೊತೆ ಜೊತೆಯಲ್ಲಿಯೇ ಇತರ ಕಲೆಗಳ ಅಭ್ಯಾಸವನ್ನು ಸೀತಾರಾಮಯ್ಯನವರು ಕೈಗೊಂಡಿದ್ದರು. ಆದ್ದರಿಂದಲೇ ಅನೇಕ ಕಲೆಗಳಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು.

ಸಾಹಿತ್ಯಾಸಕ್ತಿ:

ಎಂ.ವಿ.ಸೀಯವರ ದೊಡ್ಡಪ್ಪನ ಮಗ ಅವರ ಮನೆಯಲ್ಲಿ ಓದುತ್ತಿದ್ದ ವಿಕಟವಿನೋದಿನಿ, ಎಂ.ಎಸ್.ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ, ಮನೆಯಲ್ಲಿ ನಡೆಯುತ್ತಿದ್ದ ಅಳಸಿಂಗಾಚಾರ್ಯರ ರಾಮಾಯಣದ ಪಾರಾಯಣ ಹಾಗೂ ಕಾಲೇಜು ವಿದ್ಯಾಭ್ಯಾಸದ ಅವಧಿಯಲ್ಲಿ ಅವರಿಗೆ ದೊರೆತ ಸಾಹಿತಿಗಳ ಕವಿಗಳ ಮಾರ್ಗದರ್ಶನ ಪ್ರೋತ್ಸಾಹ ಪ್ರೇರಣೆಗಳು ಇವರಿಗೆ ಸಾಹಿತ್ಯದಲ್ಲಿ ಆಸಕ್ತಿ ಮೂಡಿಸಿದವು.

ಲಾಯರ್ ಕೃಷ್ಣರಾಯರ ಮನೆಯಲ್ಲಿದ್ದಾಗ ಅವರ ಬಂಧು ಚಿತ್ರಗಾರರ ಪರಿಚಯ ಇವರಿಗಾಯಿತು. ಆತ ಪ್ರಾಚೀನ ಕರ್ನಾಟಕ (ಮೈಸೂರಿನ) ಶೈಲಿಯಲ್ಲಿ ಚಿತ್ರಗಳನ್ನು ಬರೆಯುತ್ತಿದ್ದರು. ಇದು ಸೀತಾರಾಮಯ್ಯನವರ ಮನಸ್ಸನ್ನು ಚಿತ್ರಕಲೆಯತ್ತ ಗಮನ ಸೆಳೆಯಿತು.

ಮುಂದೆ ಎಂ.ವಿ.ಸೀ ತಮ್ಮ ಮನೆಯ ಪಕ್ಕದಲ್ಲಿದ್ದ ಅರಮನೆಯ 'ಆನೆಕರೋಟಿ' ಎಂದರೆ ಗಜಶಾಲೆಯಲ್ಲಿನ ಹನುಮಂತನ ಚಿತ್ರ ಆನೆಯ ಚಿತ್ರಗಳನ್ನು ಬರೆಯುವುದರೊಂದಿಗೆ ಎಂ.ವಿ.ಸೀಯವರ ಚಿತ್ರಲೇಖನ ಆರಂಭವಾಯಿತು. ನಂತರ ಚಿತ್ರಕಲಾವಿದ ವೆಂಕಣ್ಣಯ್ಯನವರ ಮೆಚ್ಚುಗೆ, ಕೆ.ವೆಂಕಟಪ್ಪನವರ ಆಶೀರ್ವಾದದಿಂದ ಆಸಕ್ತಿ ಇನ್ನೂ ಹೆಚ್ಚಾಯಿತು. ಮುಂದೆ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟ್ಯೂಟ್‌ಗೆ ಸೇರಿ ಚಿತ್ರಕಲೆಯಲ್ಲಿ ಪ್ರಾವೀಣ್ಯತೆಗಳಿಸಿ ಶಾಂತಿನಿಕೇತನಕ್ಕೆ ಹೋಗಿ ಶಾಸ್ತ್ರೀಯವಾಗಿ ಚಿತ್ರಕಲೆಯಲ್ಲಿ ಪ್ರೌಢಿಮೆಯನ್ನು ಗಳಿಸಿಕೊಳ್ಳಲು ಬಯಸಿದರು. ಆದರೆ ಮನೆಯ ಆರ್ಥಿಕ ಪರಿಸ್ಥಿತಿ ಅದಕ್ಕೆ ಅವಕಾಶ ಕೊಡಲಿಲ್ಲ. ನಂತರ ಇವರು ರಚಿಸಿದ ಚಿತ್ರಗಳಿಗೆ ಮೈಸೂರು ದಸರ ವಸ್ತುಪ್ರದರ್ಶನದಲ್ಲಿ ಹಾಗೂ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ವಸ್ತು ಪ್ರದರ್ಶನಗಳಲ್ಲಿ ಬಹುಮಾನ ದೊರೆತಾಗ ಆಸಕ್ತಿ ಮತ್ತಷ್ಟು ಹೆಚ್ಚಿತು. ನಂತರ ಅವರ ಮೊದಲ ಕವನಸಂಕಲನ "ಬೀದಿಯೊಳಗಲೆಯುತಿಹಳಾರಿವಳು ಚೆಲುವೆ" ಕವನಕ್ಕೆ ಇವರೇ ಚಿತ್ರ ರಚಿಸಿದರು.

ಸೀತಾರಾಮಯ್ಯನವರ ಮನೆಯಲ್ಲಿ ಅವರ ದೊಡ್ಡಪ್ಪನ ಮಗ ಅಜ್ಜಿಯ ಮುಂದೆ ಓದುತ್ತಿದ್ದ ಗಳಗನಾಥರ, ಬಿ.ವೆಂಕಟಾಚಾರ್ಯರ ಕಾದಂಬರಿಗಳು ಇವರ ಆಸಕ್ತಿಯನ್ನು ಕಾದಂಬರಿಗಳತ್ತ ಸೆಳೆದವು.

ಉದಾ:- ವೆಂಕಟಾಚಾರ್ಯರ ಅಡವಿಯ ಹುಡುಗಿ, ಆನಂದಮಠ, ದೇವೀಚೌಧುರಾಣಿ, ದುರ್ಗೇಶನಂದಿನಿ ಅಲ್ಲದೆ ಇದೇ ಕಾಲದಲ್ಲಿ ಹಲವಾರು ಇಂಗ್ಲೀಷ್ ಕಾದಂಬರಿಗಳನ್ನು ಓದಿದ್ದರು. ಉದಾ: ಕ್ಯಾಪ್ಟನ್ ಮ್ಯಾರಿಯಟ್, ಚಾರ್ಲ್ಸ್‌ಕಿಂಗ್‌ಸ್ಲಿಂ, ಡ್ಯಾನಿಯಲ್‌ಡೀಪೋ, ಸರ್.ವಾಲ್ಟರ್ ಸ್ಕಾಂಟ್, ಥಾಮಸ್‌ಹಾರ್ಡಿ, ಚಾರ್ಲ್ಸ್ ಡಿಕನ್ಸ್‌ರ ಕಾದಂಬರಿಗಳು ಪ್ರಭಾವಬೀರಿವೆ. ಇವರಲ್ಲಿ ಡಿಕೆನ್ಸ್ ಮತ್ತು ಹಾರ್ಡಿಯವರ ಜೀವನದರ್ಶನಗಳು ಇವರಿಗೆ ಕಾದಂಬರಿ ರಚನೆಯಲ್ಲಿ ಆಸಕ್ತಿ ಕೆರಳಲು ಹೆಚ್ಚು ಪ್ರೇರಣೆನೀಡಿವೆ.

ಪದ್ಯರಚನೆಯಲ್ಲಿ ಆಸಕ್ತಿ ಕೆರಳಿಸಿದವರು ತೀ.ನಂ.ಶ್ರೀಯವರು. ೧೯೨೬ರಲ್ಲಿ ಅವರೊಮ್ಮೆ ಎಂ.ವೀ.ಸೀ ಮನೆಗೆ ಬಂದಾಗ ಎಂ.ವೀ.ಸೀ ಹುಟ್ಟುಹಬ್ಬವೆಂದು ತಿಳಿದಾಗ ಇವರನ್ನು ಮನೆಗೆ ಕರೆದು ಬಿ.ಎಂ.ಶ್ರೀ ಯವರ "ಇಂಗ್ಲೀಷ್ ಗೀತೆಗಳು" ಪ್ರತಿಯನ್ನು ನೀಡಿ ಪದ್ಯರಚನೆಯಲ್ಲಿ ಆಸಕ್ತಿ ಮೂಡಿಸಲು ಕಾರಣರಾದರು. ನಂತರ ಇಂಗ್ಲೀಷ್ ಗೀತೆಗಳು ಸಂಕಲನದಲ್ಲಿಯ ಕೆಲವು ಗೀತೆಗಳನ್ನು

ಕನ್ನಡಕ್ಕೆ ಅನುವಾದ ಮಾಡಿ ಅಲ್ಲದೆ ಕೆಲವು ಸ್ವತಂತ್ರ ಕವನಗಳನ್ನು ಬರೆದು ತೀ.ನಂ.ಶ್ರೀಯವರಿಗೆ ತೋರಿಸುತ್ತಿದ್ದರು. ಅವುಗಳನ್ನು ತಿದ್ದಿ ಹೇಳುತ್ತಿದ್ದರು ಅಂತಹ ಒಂದು ಉದಾಹರಣೆಯನ್ನು ಎಂ.ವಿ.ಸೀ. ಹೇಳಿದ್ದಾರೆ.

ಉದಾ: "ಜರ್ಮನ್ ಕವಿ ಗಯಟೆಯವರ ಎರಡೇ ಸಾಲಿನ ಮುಕ್ತಕದ ಅನುವಾದ.

ಮಾಲೆಯನು ಕಟ್ಟುವುದು ಬಲು ಸುಲಭವಹುದು

ಬಲು ಕಷ್ಟ ಸರಿಯಾದ ಮುಡಿವವರನರಸುವುದು"

ಎರಡನೆಯ ಸಾಲನ್ನು ತೀ.ನಂ.ಶ್ರೀ. ಬಲುಕಷ್ಟ ಮುಡಿವುದಕೆ ತಕ್ಕವರನರಸುವುದು ಎಂದು ತಿದ್ದಿದರು"[೨] ಇದರಿಂದ ಎಂ.ವಿ.ಸೀ ಯವರ ಪದ್ಯರಚನೆ ಹದಗೊಂಡಿತು. ಮುಂದೆ ಇವರ ಎರಡು ಪ್ರಾರಂಭದ ಕವನಗಳು ೧೯೩೦ರಲ್ಲಿ ಮಹಾರಾಜಕಾಲೇಜಿನ ಕರ್ನಾಟಕ ಸಂಘ ಪ್ರಕಟಿಸಿದ 'ತಳಿರು' ಕವನ ಸಂಕಲನದಲ್ಲಿ ಸೇರಲು ತೀ.ನಂ.ಶ್ರೀಯವರೇ ಕಾರಣರು. ಇವರ ಜೊತೆಗೆ ವೆಂಕಣ್ಣಯ್ಯನವರ ಉತ್ತೇಜನವೂ ಕಡಿಮೆಯದಲ್ಲ ಅಲ್ಲದೆ ತೀ.ನಂ.ಶ್ರೀ ಯವರ ಮಾರ್ಗದರ್ಶನದಿಂದ ಬಿ.ಎಂ.ಶ್ರೀ ಯವರು ಮೈಸೂರಿನಲ್ಲಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆಸಿದ ರಜತ ಮಹೋತ್ಸವದಲ್ಲಿ ಸ್ವರ್ಣಪದಕ ಕವಿತಾ ಸ್ಪರ್ಧೆಯಲ್ಲಿ ಇವರು ರಚಿಸಿದ 'ಆ ಚಿತ್ರಗಳು' ಕವನಕ್ಕೆ ಸ್ವರ್ಣಪದಕ ಕೂಡ ಲಭಿಸಿತು. ಈ ಎಲ್ಲಾ ಪ್ರೇರಣೆ ಪ್ರೋತ್ಸಾಹಗಳಿಂದ ವಿದ್ವತ್ ಕವಿಯಾಗಿ ಬೆಳೆಯಲು ಹಾಗೂ ಉತ್ತಮ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಲು ಸಾಧ್ಯವಾಯಿತು. ಈ ಮಾತನ್ನು "ಕವಿಗಳು ಯಾವಗಲೂ ಹಳೆಯದನ್ನು ಚೆನ್ನಾಗಿ ನೋಡಿ ಸಮಕಾಲೀನವನ್ನು ಕೂಡಿ ಹೊಸತನ್ನು ಮಾಡುವರು ಎಂಬುದನ್ನು ಎಂ.ವಿ.ಸೀ ಅವರು ತಮ್ಮ ಕಾವ್ಯ ರಚನೆಯಿಂದ ತೋರಿಸಿಕೊಟ್ಟಿದ್ದಾರೆ. ಚನ್ನವೀರಕಣವಿಯವರ ಮಾತು ಇಲ್ಲಿ ಉಲ್ಲೇಖನೀಯ"[೩] ಕಾವ್ಯ ರಚನೆಯ ಜೊತೆ ಜೊತೆಯಲ್ಲೇ ಲಲಿತಪ್ರಬಂಧ, ಸಣ್ಣಕಥೆ, ನಾಟಕ, ಸಾಹಿತ್ಯ ಪ್ರಕಾರಗಳಲ್ಲೂ ಪ್ರಾರಂಭದ ಕೃತಿರಚನೆ ಸಾಗಿತು. ಸಣ್ಣ ಕತೆಗೆ ಪ್ರೇರಣೆ ನೀಡಿದ್ದು ಎಸ್.ಎಸ್.ಎಲ್.ಸಿಯಲ್ಲಿ ಪಠ್ಯ ಪುಸ್ತಕವಾಗಿ ಎಂ.ವಿ.ಸೀ ಓದಿದ್ದ ಶ್ರೀನಿವಾಸರ ಮೊದಲ ಕಥಾ ಸಂಕಲನ "ಕೆಲವು ಸಣ್ಣ ಕತೆಗಳು" ಹಾಗೂ ಆಂಗ್ಲ ಕತೆಗಾರರ ಕಥಾ ತಂತ್ರಗಳು ಅಮೇರಿಕಾದ ಕಥೆಗಾರ ನಥೆನಿಯಲ್ ಹಾತಾರ್ನನ Reappccinic's Daughter; The Great Stone Face; Prophetic Picturesಎಂಬೀ ಮೂರು ಕಥೆಗಳನ್ನು ರೂಪಾಂತರ ಮಾಡಿದ್ದು. ಮುಂದೆ ಈ ಕತೆಗಳು ಮತ್ತು ಸ್ವತಂತ್ರ ಅನುವಾದಗೊಂಡ ನಾಲ್ಕು ಕಥೆಗಳು ಸೇರಿ

೧೯೩೬ರಲ್ಲಿ ಶಿಲಾಮುಖಿ ಎಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ಮುಂದೆ ಸ್ವತಂತ್ರ ಕಥೆಗಳ ಸಂಕಲನ 'ಮಾರ್ಗದರ್ಶಕ' ೧೯೪೦ರಲ್ಲಿ ಪ್ರಕಟವಾಯಿತು. ಹೀಗೆ ಎಂ.ವಿ.ಸೀ ಯವರ ಕಥಾಸಾಹಿತ್ಯ ಮುಂದುವರೆದು ಸಾಹಿತ್ಯಕ್ಷೇತ್ರದಲ್ಲಿ ತಮ್ಮನ್ನು ಗುರ್ತಿಸಿಕೊಳ್ಳಲು ಸಾದ್ಯವಾಯಿತು.

ಲಲಿತಪ್ರಬಂದಗಳನ್ನು ಬಿ.ಎ.ತರಗತಿ ಓದುತ್ತಿದ್ದಾಗಲೇ ಎಂ.ವಿ.ಸೀ ಬರೆಯುತ್ತಿದ್ದರು. ಆಗ ಬರೆದ "ಹೆಸರುಗಳು ಮತ್ತು ಮುಗಿಲುಗಳು" ಎಂಬೆರೆಡು ಪ್ರಬಂಧಗಳು ಕಾಲೇಜ್‌ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದವು. ಈ ಪ್ರಬಂಧಗಳು ಹೆಚ್ಚು ಸಹೃದಯರ ಮೆಚ್ಚುಗೆಗೆ ಪಾತ್ರವಾಗಿವೆ. ಇವು ಅನೇಕ ಲಲಿತ ಪ್ರಬಂಧಗಳ ಸಂಕಲನದಲ್ಲಿ ಪ್ರಕಟವಾಗಿವೆ. ವಜ್ರಮಹೋತ್ಸವದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಪ್ರಬಂಧಗಳ ಇಂಗ್ಲೀಷ್ ಅನುವಾದದ ಸಂಕಲನದಲ್ಲಿ ಸೇರ್ಪಡೆಯಾಗಿವೆ. ಈ ಪ್ರಬಂಧಗಳ ಹೆಚ್ಚುಗಾರಿಕೆಯನ್ನು ಕೆಳಗಿನ ಮಾತುಗಳು ಸ್ಪಷ್ಟಪಡಿಸುತ್ತವೆ. "ಕೃತಿಯ ಗುಣ ಮುಖ್ಯವೇ ಹೊರತು ಅದನ್ನು ಕೃತಿಕಾರ ಯಾವ ವಯಸ್ಸಿನಲ್ಲಿ ಬರೆದ ಎನ್ನುವುದು ಅಷ್ಟು ಮುಖ್ಯವಲ್ಲ"[೪] ಎಂಬ ಎಂ.ವಿ.ಸೀ ಅವರ ಅಭಿಪ್ರಾಯ ಪ್ರಬಂಧವನ್ನು ಓದಿದಾಗ ಖಚಿತವಾಗುತ್ತದೆ.

ಎಂ.ವಿ.ಸೀಯವರು ಸಂಗೀತದಲ್ಲೂ ಪ್ರಾವಿಣ್ಯಹೊಂದಿದ್ದವರು. ಸಂಗೀತದಲ್ಲಿ ಅಬಿರುಚಿಮೂಡಿಸಿದ್ದು ಅನುವಂಶಿಕತೆ, ಮನೆಯವಾತಾವರಣ, ಹಾಗೂ ತಂದೆ ಬೇರೆ ಬೇರೆ ನಾಟಕಗಳಿಗೆ ಇವರನ್ನು ಕರೆದುಕೊಂಡು ಹೋಗುತ್ತಿದ್ದುದು, ಹರಿಕಥೆಗಳಿಗೆ ತಬಲ, ಮೃದಂಗವಾದನ ಮಾಡುತ್ತಿದ್ದುದು, ಪ್ರಸಿದ್ಧ ಸಂಗೀತಕಾರರ ಪರಿಚಯ ಹಾಗೂ ಸಭೆ ಸಮಾರಂಭಗಳಿಗೆ ಹೋಗುತ್ತಿದುದು, ಕಾಲೇಜಿನ ನಾಟಕಗಳಲಿ ಸ್ತ್ರೀ ಪಾತ್ರದಾರಿಯಾಗಿ ನಟನೆಮಾಡುತ್ತಿದುದು, ಸಂಗೀತಾಸಕ್ತಿ ಮತ್ತು ಸಾಹಿತ್ಯಭ್ಯಾಸಕ್ಕೆ ಪುಷ್ಟಿ ನೀಡಿತು.

ಎಂ.ವಿ.ಸೀ ವಿದ್ಯಾರ್ಥಿ ದೆಸೆಯಲ್ಲಿಯೇ ನಾಟಕ ರಚನೆಯಲ್ಲಿ ತೊಡಗಿದ್ದರು. ಆಗ ಬರೆದ "ಹೂವಿನ ಆಸೆ" ೧೯೩೬ರಲ್ಲಿ ಪ್ರಕಟವಾಯಿತು ಹಳೆಮೈಸೂರು ರಾಜ್ಯದಲ್ಲಿ ಸುಮಾರು ೨೦–೩೦ ಬಾರಿ ಪ್ರದರ್ಶಿತವಾಯಿತೆಂದು ಅವರೇ ಹೇಳಿದ್ದಾರೆ. ನಾಟಕ ರಚನೆಗೆ ಪ್ರೇರಣೆ ನೀಡಿದ್ದು ಆಂಗ್ಲನಾಟಕಗಳ ಓದು ಶಾಲಾಕಾಲೇಜಿನಲ್ಲಿ ನಾಟಕ ಪ್ರದರ್ಶನಗಳಲ್ಲಿ ಅಭಿನಯಿಸಿದ ಅನುಭವಗಳು. ಅವರು ವರಪರೀಕ್ಷೆ (ನಾ ಕಸ್ತೂರಿ) ನಾಟಕದಲ್ಲಿ ವಧುವಿನ ಪಾತ್ರ ಕೈಲಾಸಂರ ಪೋಲಿಕಿಟ್ಟಿ ನಾಟಕದಲ್ಲಿ ಮಗುವಿನ ಪಾತ್ರ (ಹೈಸ್ಕೂಲಿನಲ್ಲಿದ್ದಾಗ) ಕಾಲೇಜಿನಲ್ಲಿದ್ದಾಗ ವಧುವಿನ ಪಾತ್ರ, ಆಷಾಡ

ಭೂತಿ ನಾಟಕದಲ್ಲಿ ಲಲಿತನ ಪಾತ್ರ ಇವರ ನಾಟಕ ರಚನೆಗೆ ತಮ್ಮದೇ ಆದ ಪ್ರಭಾವ ಬೀರಿವೆ. ಎಂ.ಎ.ತರಗತಿಯಲ್ಲಿ ರಾಜರತ್ನಂ ರವರ ಶಿಶುಗೀತೆಗಳಿಗೆ ಚಿತ್ರಬರೆದುಕೊಟ್ಟ ಮೇಲೆ ಶಿಶುಪದ್ಯಗಳ ರಚನೆಯ ಕಡೆಗೆ ಗಮನಹರಿಯಿತೆಂದು ಎಂ.ವಿ.ಸೀ ಅವರೇ ಆಸ್ವಾದ ಗ್ರಂಥದಲ್ಲಿ ಹೇಳಿಕೊಂಡಿದ್ದಾರೆ.

"ಒಳ್ಳೆಯಪುಸ್ತಕ ಓದಿ ಎಲ್ಲರೂ ಪ್ರಭಾವಿತರಾಗಬಹುದು ಆದರೆ ಎಲ್ಲರೂ ಬರಹಗಾರರಾಗಲು ಸಾಧ್ಯವಿಲ್ಲ." "ಪ್ರತಿಭಾನಂ ಕಾವ್ಯ ವಿದ್ಯಾಪ್ರಚಯ ಪರಿಚಯಂ ವೃದ್ಧ ಸೇವಾನುರಾಗಂ ಸತತಾಭ್ಯಾಸ ಪ್ರಯತ್ನಂ." ಇವು ನಿಯತಂ ಕವಿತೆಗೆ ಕಾರಣಂ ಪ್ರತಿಭೆವ್ಯಕ್ತವಾಗುವುದು ಅಸಾಧಾರಣವಾದ ಬರಹ ಶಕ್ತಿಯಲ್ಲಿ ಪ್ರತಿಭೆ ಎನ್ನುವುದು ಸಹಜವಾದ ಸೃಷ್ಟಿ ಕಾರ್ಯ. ಸಾಮರ್ಥ್ಯ, ಕೆಲವರಲ್ಲಿ ತೀವ್ರ ಕೆಲವರಲ್ಲಿ ಮಂದ"[೫] ಪ್ರತಿಭೆಯ ಬಗ್ಗೆ ಎಂ.ವಿ.ಸೀಯವರ ಮಾತುಗಳಿವು.

ಉದ್ಯೋಗ:

೧೯೩೩ರಲ್ಲಿ ಕನ್ನಡ ಎಂ.ಎ ಪದವಿ ಪಡೆದು ಗುರುವೆಂಕಣ್ಣಯ್ಯನವರ ಶಿಫಾರಸ್ಸಿನಿಂದ ೧೯೩೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡರು. ಸಾಹಿತ್ಯಿಕವಾಗಿ ಪರಿಷತ್ ಪತ್ರಿಕೆಯ ಸಂಪಾದನಾಕಾರ್ಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸಿದ ನಂತರ ಇವರಿಗೆ ಸಂಪಾದನಾ ಕಾರ್ಯದಲ್ಲಿ ಹೆಚ್ಚಿನ ಅನುಭವ ಬಂದಿತು. ಇದರಿಂದ ವಿಮರ್ಶೆ ಮತ್ತು ಸಂಶೋಧನಾ ದೃಷ್ಟಿ ಬೆಳೆದವು. ಮುಂದೆ ಪರಿಷತ್ತಿನ ಸಭೆ ಸಮಾರಂಭಗಳ ವರದಿಗಳು ವಾರ್ಷಿಕವರದಿ, ಸಾಹಿತ್ಯಸಮ್ಮೇಳನ, ಸಕಲಸದಸ್ಯರ ಸಭೆ, ಕಾರ್ಯಸಮಿತಿ ಉಪಸಮಿತಿಗಳ ಗೊತ್ತುವಳಿಗಳನ್ನು, ಸಾಹಿತ್ಯಮಟ್ಟದಲ್ಲಿ ಬರೆಯುವುದನ್ನು ಗುಂಡಪ್ಪನವರಿಂದ ಕಲಿತರು. ನಂತರ ಪರಿಷತ್ತಿನ ಕಾರ್ಯಗಳಲ್ಲಿ ಇವರು ಪಾಲ್ಗೊಳ್ಳುತ್ತಿದುದ್ದರಿಂದ ಕವಿಗಳ, ಸಾಹಿತಿಗಳ ವಿದ್ವಾಂಸರ ಪರಿಚಯ ಸ್ನೇಹ ಹಾಗೂ ಅವರಿಂದ ಸಾಹಿತ್ಯ ಸೃಷ್ಟಿ ಕಾರ್ಯಕ್ಕೆ ದೊರೆತ ಪ್ರೋತ್ಸಾಹಗಳಿಂದ ಇವರ ಸಾಹಿತ್ಯ ಕೃಷಿ ವಿಪುಲವಾಗಿ ಬೆಳೆಯಲು ಸಾಧ್ಯವಾಯಿತು.

ಪರಿಷತ್ತಿನಲ್ಲಿ ಕನ್ನಡ ಹಾಗೂ ಸಾಹಿತ್ಯದ ಬಗೆಗೆ ಅನೇಕ ವಾದ-ವಿವಾದಗಳು ನಡೆಯುತ್ತಿದ್ದವು. ಆದರೆ ಇವರು ಅಲ್ಲಿ ಕಾರ್ಯನಿರ್ವಹಿಸುತ್ತಿದುದರಿಂದ ಅವುಗಳಲ್ಲಿ ಭಾಗವಹಿಸುವಂತಿರಲಿಲ್ಲ. ಮುಂದೆ ಪ್ರಗತಿಶೀಲ ಸಾಹಿತ್ಯದ ವಾದ ಬಂದಾಗ ಇವರು ಪರಿಷತ್ತಿನ

ಹುದ್ದೆಬಿಟ್ಟು ಮೈಸೂರು ವಿಶ್ವವಿದ್ಯಾಲಯ ಕೈಗೊಂಡಿದ್ದ ಇಂಗ್ಲೀಷ್ – ಕನ್ನಡ ನಿಘಂಟು ನಿರ್ಮಾಣದ ಕಛೇರಿಯಲ್ಲಿ ಸಂಪಾದಕ ಸಹಾಯಕರಲ್ಲಿ ಒಬ್ಬರಾದರು. ಇದರ ಪ್ರಧಾನ ಸಂಪಾದಕರು ಬೆಳ್ಳಾವೆ ವೆಂಕಟನಾರಣಪ್ಪನವರು. ಇಲ್ಲಿ ಕೆಲಸಮಾಡಿಕೊಂಡೇ ಸಾಹಿತ್ಯರಚನೆ ಮಾಡಿದರು. ಬಿಡುವಿಲ್ಲದ ಕೆಲಸದ ನಡುವೆಯೂ ರಾತ್ರಿಯಿಡೀ ಸಾಹಿತ್ಯ ರಚನೆಯ ಕಾರ್ಯ ಮಾಡುತ್ತಿದ್ದರು. ಶಿಲಾಮುಖಿ, ಮಾರ್ಗದರ್ಶಕ ರತಿದೇವಿ (ಕಥಾಸಂಕಲನಗಳು) ಹಕ್ಕಿಹಾಡು, ಆ ಚಿತ್ರಗಳು, ಕಾವ್ಯಾಲಾಪ ಹೂವಾಡಗಿತ್ತಿ, ರಾಜ (ಪದ್ಯದ ಪುಸ್ತಕಗಳು) ಹೂವಿನ ಆಸೆ ತೆರೆಮರೆಯ ಚಿತ್ರಗಳು (ನಾಟಕಗಳು) ಹಿಡಿಹೂವು (ವಿವಿದ ಬರಹಗಳ ಸಂಕಲನ) ಭಾಗ್ಯಲಕ್ಷ್ಮಿ (ಕಾದಂಬರಿ) ಕೃತಿಗಳನ್ನು ಸಾಹಿತ್ಯಪರಿಷತ್ತು ಮತ್ತು ನಿಘಂಟು ಕಛೇರಿಯಲ್ಲಿ ಕಾರ್ಯನಿರ್ವಹಿಸಿಕೊಂಡೇ ೧೦–೧೨ ವರ್ಷಗಳಲ್ಲಿ ಬರೆದು ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ್ದಾರೆ.

೧೯೪೬ರಲ್ಲಿ ನಿಘಂಟುವಿನ ಕಾರ್ಯ ಮುಗಿಯಿತು ಮುಂದೆ ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಉಪನ್ಯಾಸಕರಾದರು. ೧೯೪೬ರಿಂದ ನಿವೃತ್ತಿಯಾಗುವವರೆಗೂ ಅಂದರೆ ೧೯೬೭ರ ವರೆಗೂ ಅಲ್ಲೇ ಕಾರ್ಯನಿರ್ವಹಿಸಿದರು. ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ನಂತರ ೧೯೪೮ರಲ್ಲಿ ಗಾಂಧೀಜಿ ಹತ್ಯೆ ಅವರ ಮನಸ್ಸಿನ ಮೇಲೆ ಅಗಾದ ಪರಿಣಾಮ ಬೀರಿತು. ಇಲ್ಲಿಂದ ಮುಂದೆ ಇವರ ಬರಹಗಳಲ್ಲಿ ನಾವು ರಾಷ್ಟ್ರೀಯ ಭಾವನೆಯ ಅಂಶಗಳನ್ನು ಗುರ್ತಿಸಬಹುದು. ಈ ಹಿನ್ನೆಲೆಯಲ್ಲಿ ರಚನೆಯಾದುದು ಅಶೋಕಚಕ್ರ, ವಿಶ್ವವಿದ್ಯಾಲಯದ ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಇಪ್ಪತ್ತೊಂದು ವರ್ಷಗಳ ನಿಷ್ಕಳಂಕ ಸೇವೆ ಸಲ್ಲಿಸಿ ನಿವೃತ್ತರಾದಾಗ ಯಾವ ನಿವೃತ್ತ ಅಧ್ಯಾಪಕನಿಗೆ ಸಿಗದ ಬೀಳ್ಕೊಡುಗೆ ಸಮಾರಂಭವನ್ನು ಪ್ರಿನ್ಸಿಪಾಲರೂ, ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಕೂಡಿ ಕರ್ನಾಟಕ ಸಂಘದ ಆಶ್ರಯದಲ್ಲಿ ಏರ್ಪಡಿಸಿ ಗೌರವ ಸೂಚಿಸಿದರು. ಅಧ್ಯಕ್ಷತೆಯನ್ನು ಮಾಸ್ತಿಯವರು ವಹಿಸಿದ್ದರು. ಜಿ.ಪಿ.ರಾಜರತ್ನಂ, ಬಿ.ಶಿವಮೂರ್ತಿ ಶಾಸ್ತ್ರಿ, ಜಿ.ವೆಂಕಟಸುಬ್ಬಯ್ಯ, ಕೆ.ಎಸ್.ಶ್ರೀಹರಿ ಯವರು ಎಂ.ವಿ.ಸೀ ಯವರನ್ನು ಕುರಿತು ಗುಣಗಾನಮಾಡಿದರು.

ಸಾಹಿತ್ಯಸೃಷ್ಟಿಗೂ ಬರಹಗಾರನ ಬದುಕಿಗೂ ಇರುವ ಸಂಬಂಧ ಎಂಥದು? ಬದುಕು ಅವನ ಕೃತಿಯಲ್ಲಿ ಪ್ರತಿಬಿಂಬಿಸುತ್ತದೆಯೆ? ಅಥವಾ ಕವಿ ಬದುಕಿನಿಂದ ದೂರ ನಿಂತು ತನ್ನ ಸೃಷ್ಟಿಯನ್ನು ನಿರ್ಮಿಸುತ್ತಾನೆಯೇ? ಕವಿಗೂ ಕಾವ್ಯಕ್ಕೂ ಇರುವ ಅವಿನಾಭಾವಸಂಬಂಧ ಯಾವ ಮಟ್ಟದ್ದು? ಮೊದಲಾದ ಪ್ರಶ್ನೆಗಳು ಸಾಹಿತ್ಯ ಪ್ರಪಂಚದಲ್ಲಿ ವಿವಾದಾತ್ಮಕ ಚರ್ಚೆಗಳಿಗೆ ದಾರಿಮಾಡಿಕೊಟ್ಟಿವೆ.

ಸೀತಾರಾಮಯ್ಯನವರ ದೃಷ್ಟಿಯಲ್ಲಿ "ಪರಿಸರದ ಪ್ರಭಾವದಿಂದ ವ್ಯತ್ಯಾಸ ಹೊಂದುತ್ತಾ, ಬೆಳೆಯುತ್ತಾ, ಹೋಗುವ ಅವನ ವ್ಯಕ್ತಿತ್ವ, ಅವನ ನಿತ್ಯದ ಬದುಕು ಇವು ಅವನ ಸಾಹಿತ್ಯ ಜೀವನದ ಮೇಲೆ ಮುದ್ರೆಯೊತ್ತುತ್ತವೆ. ನಿತ್ಯದ ಬದುಕೇ ಬರಹದ ಬದುಕು"[೬] ಎಂಬ ಆರ್.ಎಸ್.ರಾಮರಾವ್ ಮಾತುಗಳು ಎಂ.ವಿ.ಸೀ ಸಾಹಿತ್ಯರಚನೆಯನ್ನ ಗಮನಿಸಿದಾಗ ಅದು ನಿಜವಾಗಿದೆ.

ನಾಡು-ನುಡಿ ಸಂಘಟನೆ:

ನಿವೃತ್ತಿಯ ನಂತರ ತಮ್ಮ ಬದುಕಿನ ಅಷ್ಟು ವರ್ಷಗಳನ್ನು ಎಂ.ವಿ.ಸೀ ಅವರು ನಾಡು-ನುಡಿ ಸಂಘಟನೆಗೇ ಮೀಸಲಿರಿಸಿದರು. ೧೯೭೯ರಲ್ಲಿ ತಮ್ಮ ಗುರುಗಳೂ, ಕನ್ನಡದ ಕಣ್ವರೂ ಆಗಿದ್ದ ಅಚ್ಚರ್ಯ ಬಿ.ಎಂ.ಶ್ರೀಕಂಠಯ್ಯರವರ ಹೆಸರನ್ನು ಶಾಶ್ವತಗೊಳಿಸುವುದಕ್ಕಾಗಿ ಕನ್ನಡದ ಪಂಡಿತ ಕೆಲಸಗಳಿಗೆ ಒಂದು ನೆಲೆಯನ್ನು ಕಲ್ಪಿಸುವ ಮಹತ್ವಾಕಾಂಕ್ಷೆಯ ದೂರದೃಷ್ಟಿಯ ಫಲದಿಂದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿದರು. "ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ಒಬ್ಬ ಒಳ್ಳೆಯ ಶಿಷ್ಯನು ತನ್ನ ಗುರುವಿಗೆ ನೀಡಬೇಕಾದ ಗೌರವದ ಶಾಶ್ವತ ಸ್ಪೂರ್ತಿ ನೆಲೆ ಅದನ್ನು ನೀಡಿದ ಪ್ರೊ॥ಎಂ.ವಿ.ಸೀ ಇಡಿ ಕನ್ನಡ ಜನಾಂಗಕ್ಕೆ ಎಂದೆಂದಿಗೂ ಪ್ರೇರಣೆ."[೭] ಪ್ರೊ॥ ವಸಂತಕುಷ್ಟಗಿ ಯವರ ಮಾತು ಇಲ್ಲಿ ಉಲ್ಲೇಖನೀಯ.

ಸೀತಾರಾಮಯ್ಯನವರ ಕನ್ನಡ ಪ್ರೀತಿ ಬೀ.ಎಂ.ಶ್ರೀ ರೀತಿಯದು ಕನ್ನಡದ ಸ್ಥಾನಮಾನಕ್ಕಾಗಿ ನಡೆದ ಎಲ್ಲಾ ಚಳುವಳಿಗಳಲ್ಲಿಯೂ ಭಾಗವಹಿಸಿದ್ದಾರೆ. ಕನ್ನಡ ಸಾಹಿತಿ ಕಾಲಾವಿದರ ಬಳಗದ ಕನ್ನಡ ಕ್ರಿಯಾ ಸಮಿತಿಯ ಎಲ್ಲಾ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಕನ್ನಡದ ಬಗೆಗಿನ ಚಳುವಳಿಗೆ ಒಂದು ನೈತಿಕ ಬಲವಾಗಿದ್ದರು. ಅದು ಸಭೆಯಾಗಿರಬಹುದು, ಧರಣಿ, ವಿಚಾರ ಗೋಷ್ಟಿ, ಮುಷ್ಕರ, ಮೆರವಣಿಗೆ, ಸತ್ಯಾಗ್ರಹ ಅಧಿಕಾರಿ ಮಂತ್ರಿಗಳೊಂದಿಗೆ ಚರ್ಚೆ-ಬೇಟಿಯಾಗಿರ ಬಹುದು ಅಲ್ಲೆಲ್ಲ ಎಂ.ವಿ.ಸೀತಾರಾಮಯ್ಯನವರು ಮುಂಚೂಣಿಯಲ್ಲಿರುತ್ತಿದ್ದರು. "ಇಳಿ ವಯಸ್ಸಿನಲ್ಲಿ ಅನಾರೋಗ್ಯದ ಸ್ಥಿತಿಯಲ್ಲಿಯೂ ಕನ್ನಡ ನಾಡು ನುಡಿಯ ಬಗ್ಗೆ ಸದಾ ಚಿಂತನಶೀಲರಾಗಿ ಚಳುವಳಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದ ಅವರ ಇಚ್ಛಾಶಕ್ತಿ ತರುಣರನ್ನು ನಾಚಿಸುವಂತಿತ್ತು"[೮] ಎಂಬ ಚನ್ನವೀರಕಣವಿಯವರ ಮಾತುಗಳು ಎಂ.ವಿ.ಸೀಯವರ ನಾಡು-ನುಡಿ

ಪ್ರೀತಿ ಅಭಿಮಾನ ಮತ್ತು ಆಸಕ್ತಿಯನ್ನು ಧ್ವನಿಸುವಂತಿದ್ದು ಇಂದಿಗೂ ಕನ್ನಡ ಜನತೆಗೆ ಆದರ್ಶಪ್ರಾಯವಾಗಿದೆ.

ನಿಜವಾದ ಬರಹಗಾರನಿಗೆ ಅವನು ಬರೆದ ಎಲ್ಲಾ ಬರಹಗಳು ತೃಪ್ತಿಯನ್ನು ಕೊಡುತ್ತವೆ ಏಕೆಂದರೆ ಬರಹಗಾರ ಬರೆಯುವುದೇ ಆತ್ಮಸಂತೋಷಕ್ಕಾಗಿ ಆತ್ಮತೃಪ್ತಿಗಾಗಿ ಎಂದಿದ್ದಾರೆ. ಎಂ.ವಿ.ಸೀ ಲೋಕೋಬಿನ್ನರುಚಿ ಎಂಬ ಮಾತಿನಂತೆ ಎಲ್ಲರಿಗೂ ಪ್ರಿಯವಾಗುವ ಅಡುಗೆ ಮಾಡಲು ಹೇಗೆ ಸಾದ್ಯವಿಲ್ಲವೊ ಹಾಗೆಯೇ ಒಂದು ಸಾಹಿತ್ಯ ಕೃತಿಯನ್ನು ಎಲ್ಲರಿಗೂ ಮೆಚ್ಚುಗೆಯಾಗುವ ರೀತಿ ಬರೆಯುವುದು ಅಷ್ಟೇ ಕಷ್ಟ ಎಂದಿದ್ದಾರೆ. ಶೈಲಿಯ ಬಗ್ಗೆ ಕೃತಿಯ ವಸ್ತು ಅಥವಾ ವಿಷಯ ಶೈಲಿಯನ್ನು ಗೊತ್ತುಮಾಡಿಕೊಳ್ಳುತ್ತದೆ ಎಂದಿದ್ದಾರೆ. ಎಂ.ವಿ.ಸೀ ಹತ್ತು ಸಂಪುಟಗಳ "ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ"ಯಲ್ಲಿ ನಾನು ಬರೆದು "ಶಾಸ್ತ್ರ ಸಾಹಿತ್ಯ ಸಂಪುಟವನ್ನು ಉದ್ದೇಶಪೂರ್ವಕವಾಗಿ ಕೂಡಿದ ಮಟ್ಟಿಗೂ ಸರಳವಾದ ಭಾಷೆಯಲ್ಲಿ ಬರೆದಿದ್ದೇನೆ. ಈ ಜಾತಿಯ ಗ್ರಂಥರಚನೆಯಲ್ಲಿ ಈ ದೃಷ್ಟಿಯಿರಬೇಕು. ಈ ಗ್ರಂಥ ನನಗೆ ಪೂರ್ಣ ತೃಪ್ತಿಯನ್ನು ಕೊಟ್ಟಿದೆ"[6] ಎಂದು ಎಂ.ವಿ.ಸೀ ಹೇಳಿದ್ದಾರೆ.

ನವೋದಯ ಯುಗದ ಕವಿಗಳಲ್ಲಿ ಕಂಡುಬರುವ ಯುಗಲಕ್ಷಣಗಳು ಎಂ.ವಿ.ಸೀ ಕೃತಿಗಳಲ್ಲಿ ಹೆಚ್ಚು ಕಡಿಮೆ ಕಂಡುಬಂದಿವೆ. ಇಂಗ್ಲೀಷ್ ಕವಿಗಳಲ್ಲಿ ಎಂ.ವಿ.ಸೀ ಯವರಿಗೆ ವರ್ಡ್ಸ್‌ವರ್ತ್ ಹೆಚ್ಚು ಪ್ರಿಯವಾಗುತ್ತಾನೆ. ಇವರು ಹುಟ್ಟಿ ಬೆಳೆದ ಮೈಸೂರಿನ ಹಳೆಯ ಅಗ್ರಹಾರದ ಬಡತನ ಗಾಂದೀಜಿ, ರಾಮಕೃಷ್ಣ ಪರಮಹಂಸರ ಆದರ್ಶ, ಫ್ರಾನ್ಸಿನ ಮಹಾಕ್ರಾಂತಿಯ ವಿಚಾರಗಳು, ರಷ್ಯಾಕ್ರಾಂತಿಯ ವಿಚಾರಗಳು, ಇದರಿಗೆ ಧರ್ಮ, ಜಾತಿ, ಸಂಪ್ರದಾಯ, ಆಚಾರ ವಿಚಾರಗಳಲ್ಲಿದ್ದ ನಂಬಿಕೆ ದೂರವಾಗಿ ಸರ್ವಸಮಾನತೆಯ ಸಮಾಜ, ಮತಾತೀತವಾದ ವಿಶಾಲಮನೋಭಾವನೆ ಬೆಳೆಯಲು ಕಾರಣವಾದವು. ಈ ಚಿಂತನೆಗಳನ್ನು 'ಬೀದಿಯೊಳಗಲೆಯುತಿಹಳಾರಿವಳು ಚೆಲುವೆ', 'ಬಗೆದಂತೆ ಬಾಳು', 'ಕವಳ ತಾಯಿ', 'ಕಾವ್ಯಾಲಾಪ' ಮುಂತಾದ ಕೃತಿಗಳಲ್ಲಿ ನಾವು ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಕಲಾರಾಘವ ಎಂ.ವಿ.ಸೀ ಸಂಸ್ಮರಣ ಸಂಚಿಕೆ : (ಸಂ) ಜಿ.ಎಸ್.ವೆಂಕಟರಾಜು, ನಾ.ಗೀತಾಚಾರ್ಯ, ಪು.ಸಂ:೧೩.

೨. ಆಸ್ವಾದ : (ಸಂ.) ಶ್ರೀವತ್ಸ ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ, ಪು.ಸಂ:೫.

೩. ಎಂ.ವಿ.ಸೀ ವ್ಯಕ್ತಿಚಿತ್ರ ಮತ್ತು ಸೂಕ್ತಿಗಳು : (ಸಂ.) ಎಸ್.ವಿ. ಶ್ರೀನಿವಾಸರಾವ್, ಪು.ಸಂ:೨.

೪. ಆಸ್ವಾದ : (ಸಂ.) ಶ್ರೀವತ್ಸ ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ, ಪು.ಸಂ:೭.

೫. ಆಸ್ವಾದ : (ಸಂ.) ಶ್ರೀವತ್ಸ ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ, ಪು.ಸಂ:೮.

೬. ಆಸ್ವಾದ : (ಸಂ.) ಶ್ರೀವತ್ಸ ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ, ಪು.ಸಂ:೪೭.

೭. ಕಲಾರಾಘವ ಎಂ.ವಿ.ಸೀ ಸಂಸ್ಮರಣ ಸಂಚಿಕೆ : (ಸಂ) ಜಿ.ಎಸ್.ವೆಂಕಟರಾಜು, ನಾ.ಗೀತಾಚಾರ್ಯ, ಪು.ಸಂ:೧೬.

೮. ಕಲಾರಾಘವ ಎಂ.ವಿ.ಸೀ ಸಂಸ್ಮರಣ ಸಂಚಿಕೆ : (ಸಂ) ಜಿ.ಎಸ್.ವೆಂಕಟರಾಜು, ನಾ.ಗೀತಾಚಾರ್ಯ, ಪು.ಸಂ:೧೦.

೯. ಆಸ್ವಾದ : (ಸಂ.) ಶ್ರೀವತ್ಸ ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ, ಪು.ಸಂ:೨೩.

ಅಧ್ಯಾಯ–೩

ಎಂ.ವಿ.ಸೀ ಯವರ ಸಂಪಾದಿತ ಗ್ರಂಥಗಳು

ಎಂ.ವಿ.ಸೀ ಸಂಪಾದಿತ ಗ್ರಂಥಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಲಕ್ಷಣ ಗ್ರಂಥಗಳು, ಕಾವ್ಯಗ್ರಂಥಗಳೆಂದು ವಿಭಾಗಿಸಿ ಕೆಲವು ಗ್ರಂಥಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಎಂ.ವಿ.ಸೀ ಅವರದು ಬಹುಮುಖ ಪ್ರತಿಭೆಯಾಗಿದ್ದು ಅವರ ಎಲ್ಲಾ ಸಾಹಿತ್ಯ ಕೃತಿಗಳನ್ನು ಒಂದೇ ಅಧ್ಯಯನದಲ್ಲಿ ಅಳವಡಿಸಲು ಸಾಧ್ಯವಿಲ್ಲದಿರುವುದರಿಂದ ಈ ಅಧ್ಯಯನವು ಅವರ ಸಂಪಾದಿತ ಗ್ರಂಥಗಳನ್ನು ಮಾತ್ರ ಒಳಗೊಂಡಿದೆ. ಎಂ.ವಿ.ಸೀ ಅವರ ಸಂಪಾದಿತ ಗ್ರಂಥಗಳು ಅದಿನಾಲ್ಕು ಇದ್ದು ಇವು ಸಹ ಒಂದೇ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಿಲ್ಲದ್ದರಿಂದ ಅವುಗಳನ್ನು ಲಕ್ಷಣಗ್ರಂಥಗಳು, ಕಾವ್ಯಗ್ರಂಥಗಳಲ್ಲಿ ಕೆಲವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

I. ಲಕ್ಷಣ ಗ್ರಂಥಗಳ ಸಂಪಾದನೆ:

ಅ) ಕವಿರಾಜಮಾರ್ಗ

ಕವಿರಾಜಮಾರ್ಗ ಕನ್ನಡದ ಬಹುಮುಖ್ಯ ಶಾಸ್ತ್ರಗ್ರಂಥ ಹಾಗೂ ನಮಗೆ ಇದುವರೆಗೂ ದೊರೆತಿರುವ ಕನ್ನಡ ಪ್ರಾಚೀನ ಗ್ರಂಥಗಳಲ್ಲಿ ಮೊದಲನೆಯದು. ಇದು ಕ್ರಿ.ಶ.೮೧೪ ರಿಂದ ೮೭೭ ರ ಕಾಲದ ನಡುವೆ ರಚಿತವಾಗಿದೆ. ಈ ಕಾವ್ಯ ರಚಿತವಾಗುವ ವೇಳೆಗೆ ಕನ್ನಡ ಸಾಹಿತ್ಯ ಒಂದು ಪ್ರೌಢಾವಸ್ಥೆಯನ್ನು ಮುಟ್ಟಿತ್ತು ಎಂದು ಗ್ರಂಥದ ಆಧಾರಗಳಿಂದಲೇ ಊಹಿಸಬಹುದು. ಕವಿರಾಜಮಾರ್ಗ ಮೂರು ಪರಿಚ್ಛೇಧಗಳನ್ನು ಒಳಗೊಂಡ ಲಕ್ಷಣ ಗ್ರಂಥ. ಪ್ರಥಮ ಪರಿಚ್ಛೇದ ಒಳಗೊಂಡ ದೋಷಾದೋಷಾನುವರ್ಣನನಿರ್ಣಯಂ, ದ್ವಿತೀಯ ಪರಿಚ್ಛೇದ ಶಬ್ದಾಲಂಕಾರವರ್ಣನನಿರ್ಣಯಂ ಮೂರನೆಯ ಪರಿಚ್ಛೇದ ಅಲಂಕಾರವರ್ಣನ ನಿರ್ಣಯಂ ಮೊದಲಪರಿಚ್ಛೇಧದಲ್ಲಿ ಕಾವ್ಯದೋಷ, ಕನ್ನಡನಾಡಿನ ವಿಸ್ತಾರ ಕನ್ನಡಿಗರ ವರ್ಣನೆ, ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ತಿಳಿಸಿದರೆ ಎರಡನೆಯ ಪರಿಚ್ಛೇದದಲ್ಲಿ ಶಬ್ದಾಲಂಕಾರಗಳ ಬಗ್ಗೆಯೂ ಮೂರನೇ ಪರಿಚ್ಛೇದದಲ್ಲಿ ಅರ್ಥಾಲಂಕಾರಗಳ ಬಗ್ಗೆ ತಿಳಿಸುತ್ತದೆ. ದಂಡಿಯ ಕಾವ್ಯಾದರ್ಶ ಮತ್ತು ಭಾಮಹನ ಕಾವ್ಯಾಲಂಕಾರ ಕೃತಿಗಳು ಕವಿರಾಜಮಾರ್ಗ ಕೃತಿಗೆ ಆಕರ ಗ್ರಂಥಗಳಾಗಿವೆ.

ಕನ್ನಡ ಸಾಹಿತ್ಯ ಚರಿತ್ರೆಯ ಕತ್ತಲು ಯುಗಕ್ಕೆ ಪ್ರವೇಶಪಡೆಯಲು ದಾರಿದೀಪವಾಗಿದೆ ಕವಿರಾಜಮಾರ್ಗ. ಆಚಾರ್ಯ ಬಿ.ಎಂ.ಶ್ರೀ ಹೇಳುವಂತೆ ಚಾಲುಕ್ಯರ ಕಾಲಾನಂತರ ಆನೆಯ

ಹಿಂದಿನಂತೆ ಕನ್ನಡ ಕೃತಿಗಳು ಸಾಗಿ ಹೋಗಿದ್ದರೂ ಅವುಗಳ ನೆನಪಾಗಿ ಅಲ್ಲಲ್ಲಿ ಕೆಲವು ಸೂಚನೆಗಳು ದೊರಕುತ್ತವೆಯೇ ಹೊರತು ಯಾವ ಕೃತಿಯೂ ನಮಗೆ ಲಬ್ದವಾಗಿಲ್ಲ. ಆನೆಹೆಜ್ಜೆಗಳಂತೆ ಕಲಸಿಕೊಂಡಿರುವ ಆ ಗುರುತುಗಳನ್ನು ವಿಂಗಡಿಸಿ ತಗೆಯಲು ಕವಿರಾಜಮಾರ್ಗ ಸಹಕಾರಿಯಾಗಿದೆ. ಕವಿರಾಜಮಾರ್ಗ ರಚನೆಯಾದ ಕಾಲಕ್ಕೆ ಕನ್ನಡ ಸಾಹಿತ್ಯ ಒಂದು ಮೇಲ್ಮಟ್ಟವನ್ನು ಮುಟ್ಟಿತ್ತು ಎಂಬುದಕ್ಕೆ ಗ್ರಂಥಸ್ಥ ಆಧಾರಗಳ ಜೊತೆಗೆ ಇತರೆ ಚಾರಿತ್ರಿಕ ಆಧಾರಗಳು ದೊರೆಯುತ್ತವೆ ಎಂಬುದನ್ನು ೧೮೯೮ರಲ್ಲಿ ಮೊದಲು ಸಂಪಾದನೆ ಮಾಡಿದ ಕೆ.ಬಿ.ಪಾಠಕರಿಂದ ಹಿಡಿದು ಈವರೆಗಿನ ವಿದ್ವನ್ಮಣಿಗಳು ಆಧಾರ ಸಮೇತವಾಗಿ ಸ್ಪಷ್ಟ ಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವೂ ಮಹತ್ವಪೂರ್ಣವೂ ಆದ ಸ್ಥಾನವನ್ನು ಪಡೆದಿರುವ ಕವಿರಾಜಮಾರ್ಗ ಕೃತಿಯ ಕರ್ತೃ ಯಾರು? ನೃಪತುಂಗನೆ? ಅವನ ಸಭಾಸದರಲ್ಲಿ ಒಬ್ಬನಾಗಿರುವ ಶ್ರೀ ವಿಜಯನೇ? ಕವೀಶ್ವರನೇ ಎಂಬ ವಾದವಿವಾದಗಳು ಕೃತಿದೊರೆತ ಕಾಲದಿಂದ ಇತ್ತೀಚಿನವರೆಗೂ ಚರ್ಚೆಗಳು ಒಂದಿಲ್ಲೊಂದು ರೀತಿಯಲ್ಲಿ ಸಾಗಿಬಂದಿವೆ. ಬಿ.ಎಲ್.ರೈಸ್, ಕೆ.ಬಿ.ಪಾಠಕ್, ಆರ್.ನರಸಿಂಹಚಾರ್, ನಾಶ್ರೀರಾಜಪುರೋಹಿತ, ಬಿ.ಎಂ.ಶ್ರೀ, ಎಸ್.ಸಿ.ನಂದೀಮಠ, ಡಾ।ಕೃಷ್ಣಮೂರ್ತಿ, ಬೀಮರಾವ್ ಚಿಟಿಗುಪ್ಪಿ, ಮೊದಲಾದವರು ನೃಪತುಂಗ ರಚಿಸಿದನೆಂದೂ, ಡಾ।ಪ್ಲೀಟ್, ಎಂ.ವೆಂಕಟರಾವ್, ಎಚ್.ಶೇಷಯ್ಯಂಗರ್ ಅವರು ಕವೀಶ್ವರ ರಚಿಸಿದನೆಂದೂ, ಟಿ.ಎನ್.ವೆಂಕಣ್ಣಯ್ಯ, ಎಂ.ಅರ್.ಕೃಷ್ಣಶಾಸ್ತ್ರಿ, ರಂ.ಶ್ರೀಮುಗಳಿ, ಮುಳಿಯತಿಮ್ಮಪ್ಪಯ್ಯ, ತೀನಂಶ್ರೀ, ಕೆ.ವೆಂಕಟರಾಯಾಚಾರ್, ಡಾ।ಚಿದಾನಂದಮೂರ್ತಿ, ಡಾ॥ಎಂ.ಎಂ.ಕಲ್ಬುರ್ಗಿ, ಎಂ.ವಿ.ಸೀ ನೃಪತುಂಗನ ಸಭಾಸದನಾದ ಶ್ರೀ ವಿಜಯ ರಚಿಸಿದನೆಂದು ಪ್ರತಿಪಾದಿಸಿದ್ದಾರೆ. "ಶ್ರೀ ವಿಜಯಕರ್ತೃತ್ವ ವಾದಗಳನ್ನು ಮಂಡಿಸುವುದರಲ್ಲಿ ಪ್ರಮುಖರಾದ ಎಂ.ವಿ.ಸೀ ೧೯೬೮ರಲ್ಲಿ ಸಂಪಾದಿಸಿ ಸುದೀರ್ಘ ಮುನ್ನುಡಿಯೊಡನೆ ಪ್ರಕಟಿಸಿದ ಕೃತಿ ಕವಿರಾಜಮಾರ್ಗ ಈ ದೆಸೆಯಲ್ಲಿ ಮೈಲುಗಲ್ಲಾಗಿದೆ"[೧] ಈಗ ಬಹುಮಂದಿ ವಿದ್ವಾಂಸರು ಈ ವಾದವನ್ನೇ ಒಪ್ಪಿಕೊಂಡಿದ್ದಾರೆ.

ಕವಿರಾಜಮಾರ್ಗ ಕರ್ತೃವಿನ ಬಗೆಗಿನ ಮೇಲಿನ ಮೂರುವಾದಗಳನ್ನು ಗಮದಲ್ಲಿಟ್ಟುಕೊಂಡು ಅವರು ತಮ್ಮ ವಾದದ ಬಗೆಗೆ ಕೊಡುವ ಅಂತರಿಕ ಮತ್ತು ಬಾಹ್ಯ ಪ್ರಮಾಣಗಳನ್ನು ಎಂ.ವಿ.ಸೀ ತಮ್ಮ ಗ್ರಂಥದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಅದನ್ನು ಈ ಕೆಳಗೆ ಸಂಗ್ರಹಿಸಲಾಗಿದೆ.

ಅ) ನೃಪತುಂಗ ಪಕ್ಷ:

ಆಂತರಿಕ ಪ್ರಮಾಣಗಳು:

೧. ಮೊದಲ ಪರಿಚ್ಛೇದದ ಮೂರುಮಂಗಳ ಶ್ಲೋಕಗಳು

೨. ಪರಿಚ್ಛೇದ ಒಂದರ ಕೆಲವು ಉಕ್ತಿಗಳು

ನರಲೋಕಚಂದ್ರ ಮತದಿಂದ (ಪದ್ಯ ೨೩) ಅತಿಶಯಧವಳೊಕ್ತ ಕ್ರಮದೆ (ಪ ೨೪) ಉದಾರನೃಪತುಂಗದೇವವಿದಿತ ಕ್ರಮದಿಂ (ಪ ೪೪) ಕೃತಕೃತ್ಯಮಲ್ಲ ವಲ್ಲಭ ಮತದಿಂ (ಪ ೬೨) ನೃಪತುಂಗದೇವಮಾರ್ಗಕ್ರಮ (ಪ ೧೫೭) ಅತಿಶಯಧವಳೋರ್ವಿಪೋದಿತಾಳಂಕೃತಿ (ಪ ೧೪೮) ನೀತಿನಿರಂತರ ಕ್ರಮಂ (ಪ ೧೪೬).

ಪರಿಚ್ಛೇದ ೨ರ ಉಕ್ತಿಗಳು

ನ್ರುಪತುಂಗ ವಿಚಾರ ಕ್ರಮಗಣನ ಮಾರ್ಗದೊಳ್ (ಪ೨); ಮಾರ್ಗಂ ಕೃತಕೃತ್ಯ ಮಲ್ಲವಲ್ಲಭಮತದಿಂ (ಪ೧೧); ಎಂದನತಿಶಯಧವಳಂ (ಪ೨೯) ಅತಿಶಯಧವಳೋಕ್ತ ಕ್ರಮದಿನರಿ ಪುವೆಂ (ಪ ೫೫); ನೃಪತುಂಗದೇವಮಾರ್ಗೋತ್ಸವಂ (ಪ೧೦೦); ಮಹಾನೃಪತುಂಗದೇವ ನಾದರದೊಳ್ ಪೇಳ್ದ ಮಾರ್ಗಗತಿಯಿಂ (ಪ ೧೦೭); ಅತಿಶಯಧವಳೋರ್ವಿಪೋಕ್ತ ಮಾರ್ಗೋಚಿತಗತಿ (ಪ ೧೫೩).

ಪರಿಚ್ಛೇದ ೩ ರ ಉಕ್ತಿಗಳು:

ಬೆಸಸಿದನಖಿಳಧರಾವಲ್ಲಭನಿಂತಮೋಘವರ್ಷ ನೃಪೇಂದ್ರಂ (ಪ.೧); ಅತಿಶಯದವಳಧರಾಧಿಪಮತದಿಂ (ಪ೧೧); ನೃಪತುಂಗ ದೇವಮತದಿಂ (ಪ೯೮); ನೃಪತುಂಗದೇವ ಮಾರ್ಗದೊಳ್ (ಪ ೧೦೭) ನೃತಸರಸ್ವತೀ ತೀರ್ಥಾವತಾರ ಮಾರ್ಗನೆಸಕಂ (ಪ ೨೨೫); ನೃಪತುಂಗದೇವ ಮಾರ್ಗಾಂತರ ಗತಭೋಧ ವಿಶೇಷಯಾನ ಪಾತ್ರಂ (ಪ ೨೩೦).

ಪ್ರತಿ ಪರಿಚ್ಛೇದಾಂತ ಗದ್ಯದಲ್ಲಿ ಬರುವ ಶ್ರೀ ಪರಮ ಶ್ರೀನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್ ಎಂಬ ಮಾತು.

ಈ ಮೆಲಿನ ಅಂಶಗಳನ್ನು ನೃಪತುಂಗ ಕೃತ ಕವಿರಾಜಮಾರ್ಗವೆಂದು ಹೇಳಲು ನೃಪತುಂಗಪಕ್ಷದವರು ಆಂತರಿಕ ಪ್ರಮಾಣಗಳಾಗಿ ಬಳಸಿಕೊಂಡಿದ್ದಾರೆ. ಇವುಗಳನ್ನು ಎಂ.ವಿ.ಸೀ ತಮ್ಮ ವಾದವನ್ನು ನಿರೂಪಿಸುವತ್ತ ಇವರ ಆಂತರಿಕ ಪ್ರಮಾಣಗಳು ಹೇಗೆ ತಪ್ಪು ಗ್ರಹಿಕೆಯಾಗಿವೆಯೆಂಬುದನ್ನು ವಿವರಿಸುತ್ತಾ ತಮ್ಮವಾದದ ಸಮರ್ಥನೆಯನ್ನು ಮಾಡಿದ್ದಾರೆ.

ಮೊದಲ ಪರಿಚ್ಛೇದದ ಮಂಗಳ ಶ್ಲೋಕಗಳು ವಿಷ್ಣುಪರವಾದ ಸ್ತುತಿಗಳೆಂಬುದು ಸ್ಪಷ್ಟ ಆದರೆ ಪಾಠಕ್‌ರವರು ನೃಪತುಂಗನನ್ನು ಜೈನನೆಂದು ಭಾವಿಸಿದ್ದಾರೆ. ಜೈನರು ವಿಷ್ಣುಸ್ತುತಿಯನ್ನು ಮಾಡುವ ಸಂಭವ ಹೇಗೆ? ಎಂದಿದ್ದಾರೆ ನೃಪತುಂಗ ಜೈನನೆಂದು ಭಾವಿಸಿದರೆ ಅದರ ಕರ್ತೃ ನೃಪತುಂಗನೆಂದು ವಾದಿಸಲು ಈ ಪದ್ಯಗಳು ವಿರುದ್ಧವಾಗಿವೆ. ಈ ವಾದದವರ ಪ್ರಕಾರ ಮಂಗಳ ಪದ್ಯಗಳಿಂದ ವಿಷ್ಣುಭಕ್ತನೆಂದೂ ಗ್ರಂಥದ ಉಳಿದ ಉಲ್ಲೇಖಗಳಿಂದ ಜೈನನೆಂದೂ ಹೇಳಬೇಕಾಗಿರುವುದರಿಂದ ದ್ವಂದ್ವತೆಯುಂಟಾಗಿದೆ ಎಂದಿದ್ದಾರೆ. ಮಂಗಳ ಶ್ಲೋಕದ ಕನ್ನಡ ಅನುವಾದ ಮೂಲಶ್ಲೋಕ ವೈದಿಕ ಕಲ್ಪನೆಯನ್ನು ಇಲ್ಲಿ ಉದ್ದೇಶ ಪೂರ್ವಕವಾಗಿ ಕೃತಿಕಾರ ಕೈಬಿಟ್ಟಿದ್ದಾನೆ ವಿಷ್ಣುಭಕ್ತನಾದ ನೃಪತುಂಗ ಗ್ರಂಥಕಾರನಾಗಿದ್ದರೆ ಹೀಗೆ ಮಾಡುತ್ತಿದ್ದನೆ? ಎಂದು ವಾದಿಸಿದ್ದಾರೆ.

೨ನೇ ಪರಿಚ್ಛೇದದ ಉಕ್ತಿಗಳು ನೃಪತುಂಗನೆ ಗ್ರಂಥಕಾರನೆಂಬುದನ್ನು ಸಂದೇಹಕ್ಕೆಡೆಯಿಲ್ಲದೆ ನಿರೂಪಿಸುತ್ತವೆ ಎಂದು ಈ ಪಕ್ಷದವರವಾದ. ಇಂತಹ ಉಕ್ತಿಗಳು ಪ್ರಥಮ ಪುರುಷದಲ್ಲಿರುವುದರಿಂದ ಫ್ಲೀಟರು ಕವಿರಾಜಮಾರ್ಗದ ಕರ್ತೃ ನೃಪತುಂಗನಲ್ಲವೆಂದು ವಾದಿಸಿದ್ದಾರೆ. ಇದಕ್ಕೆ ಈ ಪಕ್ಷದವರು ಇವರ ಮುಂದಿನ ಗ್ರಂಥವಾದ ನಾಗವರ್ಮನ ಛಂದೋಂಬುಧಿಯ ಪ್ರಯೋಗಗಳನ್ನು ಸಮರ್ಥಿಸಿದ್ದಾರೆ. ಆದರೆ ಈ ಕ್ರಮ ಸರಿಯಲ್ಲವೆಂದು ಶ್ರೀವಿಜಯನ ಪಕ್ಷದವರು ಪ್ರತಿವಾದಿಸಿದ್ದಾರೆ. ಈ ಅಂಶವನ್ನು ನೃಪತುಂಗ ಕರ್ತೃತ್ವವನ್ನು ಪ್ರತಿಪಾದಿಸಿದ ಪಾಠಕರು ಕೂಡ ನೃಪತುಂಗನೇ ಗ್ರಂಥಕರ್ತನೆಂಬ ತಮ್ಮ ಸಿದ್ಧಾಂತಕ್ಕೆ ವಿರೋಧವಾಗದಂತೆ ಅದಕ್ಕೆ ತೃಪ್ತಿಕರವಾದ ವ್ಯಾಖ್ಯಾನವನ್ನು ಬರೆಯುವುದು ಸುಲಭಸಾಧ್ಯವಲ್ಲವೆಂದು ಒಪ್ಪಿಕೊಂಡಿದ್ದಾರೆ.

ನೃಪತುಂಗಪಕ್ಷದವರು ಪ್ರಥಮ ಮತ್ತು ಉತ್ತಮ ಪುರುಷ ಪ್ರಯೋಗಗಳು ಕವಿಕಾಮನ 'ಶೃಂಗಾರ ರತ್ನಾಕರದಲ್ಲಿಯೂ ನಾಗವರ್ಮನ ಛಂದೋಂಬುಧಿಯಲ್ಲಿಯೂ ಜೊತೆಜೊತೆಯಾಗಿ ಪ್ರಯೋಗವಾಗಿರುವುದನ್ನು ಆಧಾರವಾಗಿಟ್ಟುಕೊಂಡು ನೃಪತುಂಗನೇ ಕರ್ತೃವೆಂದು ವಾದಿಸಿದ್ದಾರೆ. ಆದರೆ ಈ ಪ್ರಯೋಗಗಳು ಮೇಲಿನ ಕೃತಿಗಳಲ್ಲಿ ಒಂದೇ ಪದ್ಯದಲ್ಲಿ ಪ್ರಯೋಗವಾಗಿಲ್ಲ. ಬೇರೆ ಬೇರೆ ಪದ್ಯಗಳಲ್ಲಿ ಪ್ರಯೋಗವಾಗಿವೆ ಆದರೆ ಕವಿರಾಜಮಾರ್ಗದಲ್ಲಿ ಒಂದೇ ಪದ್ಯದಲ್ಲಿ ಪ್ರಯೋಗವಾಗಿರುವುದನ್ನು ಗಮನಿಸಿ ಡಾ||ರಂ.ಶ್ರೀ ಮುಗಳಿಯವರು ಎರಡೂ ಪುರುಷಗಳ ಪ್ರಯೋಗವಾಗಿರುವುದರಿಂದ ನೃಪತುಂಗನಲ್ಲದ ಬೇರೆವ್ಯಕ್ತಿ ಗ್ರಂಥರಚನೆಮಾಡಿದ್ದಾನೆಂಬುದು

ಸ್ಪಷ್ಟವಾಗಿ ಗೋಚರವಾಗುತ್ತದೆಂದು ವಾದಿಸಿದ್ದಾರೆ. ಅಲ್ಲದೆ ನೃಪತುಂಗ ಮತದಂತೆ ನಾನು ಹೇಳುತ್ತೇನೆ, ಬೆಸಸಿದನಖಿಳದರಾವಲ್ಲಭನಿಂತಮೊಘವರ್ಷನೃಪೇಂದ್ರಂ ಎಂಬ ಉಕ್ತಿಗಳಿಂದ ಮುಗಳಿಯವರು ನೃಪತುಂಗನ ಆಶ್ರಯದಲ್ಲಿ ಅವನಿಂದ ಬೆಳಕಿಗೆ ಬಂದ ಗ್ರಂಥವೆಂದು ಹೇಳುವುದು ಹೆಚ್ಚು ಸೂಕ್ತವೆಂದಿದ್ದಾರೆ.

ಪ್ರತಿಪರಿಚ್ಛೇದದ ಗದ್ಯವೂ ಕೂಡ ನೃಪತುಂಗನಿಂದ ರಚಿತವಾದುದಲ್ಲವೆಂದು ಹೇಳಲು ಕಾರಣವಾಗಿದೆ. "ಪರಮಶ್ರೀ ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್" ಎಂದು ಹೇಳಿರುವುದರಿಂದ ಡಾ॥ಫ್ಲೀಟ್ ಮತ್ತು ನರಸಿಂಹಾಚಾರ್ ಸಂದೇಹ ವ್ಯಕ್ತಪಡಿಸಿ ನೃಪತುಂಗ ರಚಿಸಿದನೆಂದು ಹೇಳಲು ಸಕಾರಣಗಳಿಲ್ಲವೆಂದಿದ್ದಾರೆ.

ನೃಪತುಂಗ ಪಕ್ಷದ ವಾದ ಪ್ರತಿವಾದಗಳನ್ನು ಗಮನಿಸಿ ಎಂ.ವಿ.ಸೀ ಕವಿರಾಜಮಾರ್ಗದ ಕರ್ತೃ ಶ್ರೀ ವಿಜಯನೆಂಬುದಕ್ಕೆ ಆಂತರಿಕ ಪ್ರಮಾಣಗಳನ್ನು ಉಲ್ಲೇಖಿಸಿದ್ದಾರೆ.

ಪರಿಚ್ಛೇದಾಂತಗದ್ಯವೊಂದರ ಮೇಲೆ ನೃಪತುಂಗ ಕರ್ತೃತ್ವವನ್ನು ಸ್ಥಾಪಿಸಲಾಗುವುದಿಲ್ಲ ಬದಲಾಗಿ ಕರ್ತೃ ಬೇರೆಯಿರಬಹುದೆಂಬ ಅನುಮಾನಕ್ಕೆ ಈ ಗದ್ಯ ಆಸ್ಪದವೀಯುತ್ತದೆ.

ಪರಿಚ್ಛೇದಾಂತ್ಯದ ಮೂರು ಪದ್ಯಗಳಲ್ಲಿಯೂ ಕ್ರಮವಾಗಿ ಶ್ರೀ ವಿಜಯ ಪ್ರಭೂತಮ, ಶ್ರೀ ವಿಜಯ ಪ್ರಭೂತ, ಶ್ರೀ ವಿಜಯಭೂತಿ ಎಂಬ ಪ್ರಯೋಗಗಳು ಶ್ರೀ ವಿಜಯನೇ ಗ್ರಂಥಕರ್ತೃವೆಂದು ನಿರೂಪಿಸುತ್ತದೆ ಎಂದಿದ್ದಾರೆ. ಅಲ್ಲದೆ ಗ್ರಂಥದಲ್ಲಿ ಉಕ್ತವಾಗಿರುವ ನೃಪತುಂಗನ ಬಿರುದುಗಳಲ್ಲಿ (ಅತಿಶಯದವಳ) ಯಾವುದೂ ಎಲ್ಲಿಯಾ ಅಕ್ಷರಮಾತ್ರದಿಂದ ಕೂಡ ವ್ಯತ್ಯಾಸವನ್ನು ಹೊಂದಿಲ್ಲ ಆದರೆ ಶ್ರೀ ವಿಜಯ ಪ್ರಭೂತಮ, ಪ್ರಭೂತ, ಪ್ರಭೂತಿ ಎಂಬ ಪದಗಳಲ್ಲಿ ಕಾಣಬರುವ ಅಕ್ಷರವ್ಯತ್ಯಾಸಗಳು ಇವು ಬಿರುದುಗಳಲ್ಲವೆಂಬುದನ್ನು ಸ್ಪಷ್ಟ ಪಡಿಸುತ್ತವೆಂದು ತಿಳಿಸಿದ್ದಾರೆ.

ಕವಿರಾಜಮಾರ್ಗವು ನೃಪತುಂಗರಚಿತವಲ್ಲ ಎಂದು ನಿರ್ಧರಿಸಲು ಅದು ಅನ್ಯಕರ್ತೃತ್ವವೆಂದು ತಿಳಿಯಲು ಗ್ರಂಥದಲ್ಲಿನ ಪ್ರಭಲ ಪ್ರಮಾಣವೆಂದರೆ ಗ್ರಂಥದಲ್ಲಿ ಮೂಡಿ ನಿಂತಿರುವ ವ್ಯಕ್ತಿದ್ವಯ ಚಿತ್ರಣ ಮತ್ತು ಎರಡು ವ್ಯಕ್ತಿಗಳಿಗೆ ನಾವು ಆರೋಪಿಸಬಹುದಾದ ಮತ ಧರ್ಮೀಯ ಭಾವನೆ. ಗ್ರಂಥದ ಮಂಗಳ ಶ್ಲೋಕ ಹಾಗೂ ರಾಜವರ್ಣನೆಯಲ್ಲಿಯಾ ನೃಪತುಂಗ ವರ್ಣನೆಯನ್ನು ನಾವು ಪರ್ಯಾಯವಾಗಿ ಗುರ್ತಿಸಬಹುದೇ ಹೊರತು ಎಲ್ಲಿಯೂ ಜೈನಧರ್ಮದ ಸೋಂಕೂ ಇಲ್ಲ ಎಂದಿದ್ದಾರೆ. ನೃಪತುಂಗನ ವ್ಯಕ್ತಿತ್ವ ಚಿತ್ರಣದೊಂದಿಗೆ ನೃಪತುಂಗನ ಸಭಾಸದನ ಚಿತ್ರಣವೂ ಸಾಗಿದೆ.

ಅಲ್ಲದೆ ಸಭಾಸದನ ವರ್ಣನೆಯನ್ನ ೧೫ ಪದ್ಯಗಳಲ್ಲಿ ಮಾಡಲಾಗಿದೆ ಇದು ಕವಿರಾಜಮಾರ್ಗದ ಕರ್ತೃ ನೃಪತುಂಗನಲ್ಲ ಬೇರೊಬ್ಬನಿರಬಹುದೆಂಬ ಸಂದೇಹಕ್ಕೆ ಆಸ್ಪದ ನೀಡಿದೆ ಕಾರಣ ಗ್ರಂಥಕಾರನೆ ಅವನಾಗಿದ್ದರೆ ಏಕೆ ಸಭಾಸದನನ್ನು ಇಷ್ಟು ಹೊಗಳುವ ಔಚಿತ್ಯವೇನಿತ್ತು? ಅಲ್ಲದೆ ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗವೆಂಬ ಉಕ್ತಿಯೂ ಕೂಡ ಕವಿರಾಜಮಾರ್ಗದ ಕರ್ತೃ ನೃಪತುಂಗನಲ್ಲ ಅವನ ಸಭಾಸದನನಿರಬೇಕೆಂದು ಮೊದಲ ಬಾರಿಗೆ ಎಂ.ವಿ.ಸೀ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಾಹ್ಯಪ್ರಮಾಣಗಳು:

ಎಂ.ವಿ.ಸೀ ಯವರು ಕವಿರಾಜಮಾರ್ಗವು ನೃಪತುಂಗ ರಚಿಸಿದ್ದೆಂದು ಹೇಳಲು ನೃಪತುಂಗ ಪಕ್ಷದವರು ಕೊಟ್ಟಿರುವ ಬಾಹ್ಯ ಪ್ರಮಾಣಗಳನ್ನು ತಮ್ಮ ಶ್ರೀ ವಿಜಯ ಕರ್ತೃತ್ವದ ಹಿನ್ನೆಲೆಯಲ್ಲಿ ಚರ್ಚೆ ನೆಡೆಸಿದ್ದಾರೆ.

ನಾಗವರ್ಮನ ಛಂದೋಂಬುಧಿಯಲ್ಲಿ ಕವಿರಾಜಮಾರ್ಗದ ಕೆಲವು ಪದ್ಯಗಳು ಕೆಲವು ವ್ಯತ್ಯಾಸಗಳೊಂದಿಗೆ ಉಲ್ಲೇಖಿತವಾಗಿವೆ. ಕವಿರಾಜಮಾರ್ಗದ ಎರಡು ಪದ್ಯಗಳ ಪಾಠಗಳಲ್ಲಿನ 'ನೃಪತುಂಗ' ಎಂಬ ಹೆಸರು ಛಂದೋಂಬುಧಿಯ ಪಾಠದಲ್ಲಿ ಕಂಡುಬರುವುದಿಲ್ಲ ಆದ್ದರಿಂದ ಇದು ನೃಪತುಂಗ ರಚಿತವಲ್ಲ ಶ್ರೀ ವಿಜಯ ರಚಿತವಾದುದೆಂದು ವಾದಿಸಿದ್ದಾರೆ.

ಶಬ್ದಮಣಿದರ್ಪಣದಲ್ಲಿ ಕೇಶಿರಾಜನು ಪ್ರಮಾಣಗ್ರಂಥಕಾರರ ಗುಂಪಿನಲ್ಲಿ ಶ್ರೀ ವಿಜಯನ ಹೆಸರನ್ನು ಸೇರಿಸಿದ್ದಾನೆ ಅಲ್ಲದೆ ವ್ಯಾಕರಣ ವಿಷಯಕ್ಕೆ ಸಂಬಂಧಿಸಿದ ಎರಡು ಪದ್ಯಗಳನ್ನು ಕೂಡ ಉದಾಹರಿಸಿದ್ದಾನೆ ಆದರೆ ನೃಪತುಂಗನ ಹೆಸರನ್ನು ಹೇಳಿಲ್ಲ ಇದರಿಂದ ಕವಿರಾಜಮಾರ್ಗಕಾರ ಶ್ರೀ ವಿಜಯನೆಂದು ಹೇಳಲು ಸಾಧ್ಯವಿಲ್ಲವೆಂದು ನೃಪತುಂಗ ಪಕ್ಷದವರ ವಾದವಾಗಿದೆ.

ಭಟ್ಟಾಕಳಂಕನ ಶಬ್ದಾನುಶಾಸನದ ೨೮೮ನೆಯ ಸೂತ್ರದ ವ್ಯಾಖ್ಯಾನದಲ್ಲಿ ದಕ್ಷಿಣೋತ್ತರ ಮಾರ್ಗಪ್ರಯೋಗ ಭೇದವನ್ನು ಪ್ರಸ್ತಾಪಿಸಿ ಇದರ ವಿಚಾರವನ್ನು ನೃಪತುಂಗ ಗ್ರಂಥದಲ್ಲಿ ನೋಡತಕ್ಕದ್ದು ಎಂದು ಹೇಳಿರುವುದರಿಂದ ನೃಪತುಂಗ ಗ್ರಂಥವೆಂದರೆ ಕವಿರಾಜಮಾರ್ಗವೆಂದೇ ತಿಳಿಯಬೇಕಾಗಿರುವುದರಿಂದ ಇಲ್ಲಿ ಸಂದೇಹಕ್ಕೆ ಆಸ್ಪದವಿಲ್ಲ ಎಂದಿದ್ದಾರೆ. ಕವಿರಾಜಮಾರ್ಗದಲ್ಲಿ ನೃಪತುಂಗನ ಹೆಸರು ಮತ್ತು ಆತನ ಬಿರುದುಗಳು ಮೇಲಿಂದ ಮೇಲೆ ಉಕ್ತವಾಗಿರುವುದರಿಂದಲೂ ಪರಿಚ್ಛೇದಾಂತ ಗದ್ಯದ 'ನೃಪತುಂಗ ದೇವಾನುಮತಮಪ್ಪ' ಎಂಬ ಉಲ್ಲೇಖವೊಂದೇ ಎದ್ದು

ಕಾಣುವುದರಿಂದಲೂ ನೃಪತುಂಗನೇ ಗ್ರಂಥಕರ್ತನೆಂಬ ಪ್ರತೀತಿ ಬಲವಾಗಿ ಬೇರೂರಿರಬೇಕು. ಆದ್ದರಿಂದ ಈಗಲೂ ಕೂಡ ಕವಿರಾಜ ಮಾರ್ಗ ನೃಪತುಂಗ ಕೃತವಲ್ಲ ಎಂದು ದೃಢವಾಗಿ ನಂಬಿರುವವರೂ ಅದರ ಪ್ರಸ್ತಾಪಬಂದಾಗ ನೃಪತುಂಗನ ಕವಿರಾಜಮಾರ್ಗ ಎಂದು ಹೇಳುವಷ್ಟು ರೂಢಿಯಾಗಿದೆಯೆಂದು ಹೇಳೀದ್ದಾರೆ.

"ಒಟ್ಟಿನಲ್ಲಿ ಬಾಹ್ಯ ಪ್ರಮಾಣಗಳು ಶ್ರೀವಿಜಯನ ಪಕ್ಷದವರಿಗೆ ತಕ್ಕಮಟ್ಟಿಗೆ ಸಹಕಾರಿಗಳಾಗಿರುವಂತೆ ತೋರುತ್ತದೆ. ದುರ್ಗಸಿಂಹ ಕೇಶಿರಾಜರು ಭಟ್ಟಾಕಳಂಕನಿಗಿಂತಲೂ ಕವಿರಾಜಮಾರ್ಗವು ಹುಟ್ಟಿದ ಕಾಲಕ್ಕೆ ಹೆಚ್ಚು ಸಮೀಪದವರು. ದುರ್ಗಸಿಂಹನು ೧೨ನೆಯ ಶತಮಾನದವನು ಭಟ್ಟಾಕಳಂಕನಾದರೂ ೧೭ನೇ ಶತಮಾನದವನು ಆದುದರಿಂದ ಕವಿರಾಜ ಮಾರ್ಗದ ಗ್ರಂಥಕರ್ತೃವು ಯಾರು ಎಂಬ ಸಂದೇಹ ಹುಟ್ಟಿದಾಗ ಭಟ್ಟಾಕಳಂಕನ ಸಾಕ್ಷ್ಯಕ್ಕಿಂತಲೂ ದುರ್ಗಸಿಂಹ ಕೇಳಿರಾಜರ ಸಾಕ್ಷವು ಹೆಚ್ಚು ವಿಶ್ವಾಸಾರ್ಹವಾಗುವುದು ಸ್ವಾಭಾವಿಕವಾಗಿದೆ" ಎಂಬ ವೆಂಕಣ್ಣಯ್ಯನವರ ಮಾತನ್ನು ಹಾಗೂ ಶಬ್ದಾನುಶಾಸನದ ಸೂತ್ರಕಾರ, ವೃತ್ತಿಕಾರನೇ ಬೇರೆ"[೨] ಎಂಬುದಾಗಿ ಹೇಳಿದ ಕಾನಕಾನಹಳ್ಳಿ ವರದಾಚಾರ್ಯರ ಮಾತನ್ನು ಉಲ್ಲೇಖಿಸಿ ಎಂ.ವಿ.ಸೀ ಈ ಬಾಹ್ಯ ಅಂಶಗಳು ಕವಿರಾಜಮಾರ್ಗವು ನೃಪತುಂಗ ಕೃತವಲ್ಲ ಎಂಬ ತೀರ್ಮಾನಕ್ಕೆ ಬರಬಹುದೆಂದು ಹೇಳಿದ್ದಾರೆ.

"ಪ್ರಥಮ ಪರಿಚ್ಛೇದದ ೫,೬ ನೆಯ ಪದ್ಯದಲ್ಲಿಯೂ, ತೃತೀಯ ಪರಿಚ್ಛೇದದ ೨೧೮ ರಿಂದ ೨೩೦ ರ ಪದ್ಯಗಳಲ್ಲಿಯೂ" ಆಶ್ರಿತನೃಪತುಂಗಸಭಾಸದನ" ಪ್ರಶಂಸಾತ್ಮಕ ವರ್ಣನೆಯಿದೆ. ಇದು ಯಾವನೋ ನೃಪತುಂಗ ಸಭಾಸದನ ವರ್ಣನೆ ಎನ್ನುವುದರಲ್ಲಿ ಅರ್ಥವಿಲ್ಲ. "ಆಶ್ರಿತನೃಪತುಂಗ ಸಭಾಸದಂ....... ಕೂಡೆಪೇಳ್ದನುತಕಾವ್ಯಮುಂ" ಎಂದು ಸ್ಪಷ್ಟವಾಗಿ ಹೇಳಿರುವುದರಿಂದ (೨೨೩) ಕವಿರಾಜಮಾರ್ಗವನ್ನು ಆಶ್ರಿತ ನೃಪತುಂಗ ಸಭಾಸದನೊಬ್ಬನು ಆಶ್ರಯದಾತನಾದ ನೃಪತುಂಗನ ಅಂಕಿತದಲ್ಲಿ ರಚಿಸಿದ್ದಾನೆಂದು ಕೃತಿಯೇ ಹೇಳುತ್ತಿದೆ. ಇದಕ್ಕೆ ಅನ್ಯ ಪ್ರಮಾಣ ಅನಗತ್ಯ. ಬೇಕಾದರೆ ಒಂದು ಹೆಜ್ಜೆ ಮುಂದೆ ಹೋಗಿ ಕವಿರಾಜಮಾರ್ಗರಚನೆಗೆ ಪ್ರೇರಕ ಶಕ್ತಿಯಾಗಿದ್ದುದು ಮಾತ್ರವಲ್ಲದೆ, ಅಲಂಕಾರಶಾಸ್ತ್ರವಿಚಾರದಲ್ಲಿ ತನ್ನ ಅಭಿಪ್ರಾಯ ಭೇದಗಳನ್ನು ಸ್ಪಷ್ಟವಾಗಿ ತಿಳಿಯಹೇಳಿತದುನುಗುಣವಾಗಿ ತನ್ನ ಆಶ್ರಿತಕವಿಯಿಂದ ಗ್ರಂಥರಚನೆ ಮಾಡಿಸಿದನು ಎಂಬ ಅರ್ಥವನ್ನು "ಬೆಸಸಿದನಖಿಳಧರಾವಲ್ಲಭನಾತನಮೋಘ ವರ್ಷನೃಪೇಂದ್ರಂ" ಎಂಬ ವಾಕ್ಯಕ್ಕೆ

ಕಲ್ಪಿಸಬಹುದು. ಆದರೆ ಡಾ॥ಫ್ಲೀಟರು ಸೂಚಿಸಿರುವಂತೆ ಬೆಸಸಿದನ್ ಎನ್ನುವುದಕ್ಕೆ ಹೇಳಿ ಬರೆಯಿಸಿದನು ಎಂಬ ಅರ್ಥವನ್ನು ಹಿಂಜುವುದು ಕಷ್ಟ"[೩] ಆಶ್ರಿತ ಕವಿಯೇ ಶ್ರೀವಿಜಯನೆಂಬ ಅಭಿಪ್ರಾಯ ಎಂ.ವಿ.ಸೀ ಯವರದು.

ಆ) ಕವೀಶ್ವರಪಕ್ಷ:

ಕವೀಶ್ವರನ ಕವಿರಾಜಮಾರ್ಗವೆಂದು ವಾದಿಸಿದವರಲ್ಲಿ ಡಾ॥ಫ್ಲೀಟ್ ಮತ್ತು ಇವರನ್ನು ಅನುಸರಿಸಿದ ಮದ್ರಾಸು ಮುದ್ರಣದ ಸಂಪಾದಕದ್ವಯರು ಮುಖ್ಯರು. ಇವರು ಹೇಳುವ ಮುಖ್ಯ ಆಧಾರಗಳೆಂದರೆ ಕವಿರಾಜಮಾರ್ಗದ ಪರಿಚ್ಛೇದಾಂತ ಮೂರು ಪದ್ಯಗಳು ಮತ್ತು ದುರ್ಗಸಿಂಹನು ತನ್ನ ಪಂಚತಂತ್ರದಲ್ಲಿ 'ಶ್ರೀ ವಿಜಯರ ಕವಿರಾಜಮಾರ್ಗಂ" ಎಂದು ಹೇಳಿರುವ ಉಕ್ತಿ.

ದುರ್ಗಸಿಂಹ ಹೇಳಿರುವಂತೆ ಕವಿರಾಜಮಾರ್ಗವನ್ನು ಶ್ರೀವಿಜಯನೆಂಬುವನು ಬರೆದಿರುವನೆಂದು ತಿಳಿಯೋಣ ಆದರೆ ಆ ಕೃತಿ ನಮಗೆ ಸಿಕ್ಕಿಲ್ಲ ಆದ್ದರಿಂದ ಕೇವಲ ಈ ಹೇಳಿಕೆಯಿಂದ ಕವೀಶ್ವರನೆಂಬುವನು ಕವಿರಾಜಮಾರ್ಗವನ್ನು ಬರೆದನೆಂದು ಹೇಳಲು ಸಾಧ್ಯವಿಲ್ಲವೆಂದಿದ್ದಾರೆ. ಕವೀಶ್ವರ ಪಕ್ಷದವರು ಕೊಡುವ ಆಧಾರಗಳು ನಾಗವರ್ಮನ ಛಂದೋಂಬುಧಿಯಲ್ಲಿಯೂ ಕೇಶಿರಾಜನ ಶಬ್ದಮಣಿದರ್ಪಣದಲ್ಲಿಯೂ ಪಾಠವ್ಯತ್ಯಾಸದೊಡನೆ ಉದ್ಧೃತವಾಗಿರುವ ಕವಿರಾಜಮಾರ್ಗದ ಕೆಲವು ಉದಾಹರಣ ಪದ್ಯಗಳು.

ಪರಿಚ್ಛೇದ ೨ರ ೪೪ನೆಯ ಪದ್ಯದ ನಾಲ್ಕನೆಯ ಸಾಲು 'ಶತಮುಖ ಸದೃಶಾನುಭಾವ ನೊಲವಿಂ ಪೆತ್ತಂ' ಎಂದಿದೆ ಛಂದೋಂಬುದಿಯಲ್ಲಿಯೂ ಇದೇ ರೀತಿಯಿದೆ. ಪಾಠಕರ ಮುದ್ರಣದಲ್ಲಿ 'ಸತತಂ ನೃಪತುಂಗನೊಲವಿಂ ಪೆತ್ತಂ' ಎಂದಿದೆ. ಆದರೆ ಪಾಠಕರು ಶತಮುಖ ಪೆತ್ತಂ ಎಂಬ ಪಾಠವನ್ನು ಪಾಠಾಂತರವಾಗಿ ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಇದನ್ನು ಫ್ಲೀಟರು ಗಮನಿಸಿಲ್ಲವೆಂದಿದ್ದಾರೆ. ಆದ್ದರಿಂದ ಪಾಠವ್ಯತ್ಯಾಸದ ಆಧಾರದಿಂದ ಕವೀಶ್ವರನೂ, ನಾಗವರ್ಮನೂ ಒಂದೇ ಮೂಲದಿಂದ ಪದ್ಯಗಳನ್ನು ಸ್ವೀಕರಿಸಿರುವರೆಂದೂ ಕವಿರಾಜಮಾರ್ಗಕಾರನು ಸ್ವೀಕೃತ ಪದ್ಯಗಳನ್ನು ಮಾರ್ಪಡಿಸಿರುವನೆಂದು ಹೇಳಲು ಸಾಧ್ಯವಿಲ್ಲವೆಂದಿದ್ದಾರೆ.

ಪರಿಚ್ಛೇದ ೨ರ ೪೫ರ ೪ನೆಯ ಪಂಕ್ತಿಖಂಡ: ನೃಪತುಂಗದೇವ ವಿದಿತ 'ಕ್ರಮದಿಂ' ಹಾಗೂ ಛಂದೋಂಬುಧಿಯಲ್ಲಿ 'ಕಂಜಾಯತಾಕ್ಷೀ ಕೇಳದನೊರೆವೆಂ' ನೃಪತುಂಗದೇವ ವಿದಿತಕ್ರಮದಿಂ ಎಂಬ

ವಾಕ್ಯ ಗ್ರಂಥದಲ್ಲಿ ದೊರಕುವ ಇಂತಹ ಅನೇಕ ಉಕ್ತಿಗಳಿಗೆ ಅನುಗುಣವಾಗಿಯೆ ಇದೆ. ಇದನ್ನು ಯಾವುದೋ ಮೂಲಗ್ರಂಥವೊಂದರ ವ್ಯತ್ಯಸ್ತಪಾಠ ಎಂದು ಅನುಮಾನಿಸುವುದಾದರೆ ತತ್ಸದೃಶಗಳಾದ ಇತರ ಉಕ್ತಿಗಳ ವಿಷಯದಲ್ಲಿಯೂ ಹಾಗೆ ಮಾಡಬೇಕಾಗುತ್ತದೆ. ಅಂದರೆ ತನ್ನ ಆಶ್ರಯದಾತನಾದ ನೃಪತುಂಗನನ್ನು ಮೆಚ್ಚಿಸುವ ಇಂಥ ಉಕ್ತಿಗಳನ್ನು ಮಾತ್ರ ಅಳವಡಿಸಿಕೊಂಡು ಮೂಲ ಗ್ರಂಥವನ್ನು ತನ್ನದಾಗಿಸಿಕೊಂಡ ಕವಿಚೋರನೇ ಹೊರತು ಕವೀಶ್ವರನಲ್ಲ ಎನ್ನಬೇಕಾಗುತ್ತದೆ ಇದಕ್ಕೆ ೨ರ ೩೦ನೆಯ ಪದ್ಯದ ಕೃತಕೃತ್ಯಮಲ್ಲವಲ್ಲಭ ಎಂಬ ಮಾತು ಅನ್ವಯಿಸುತ್ತದೆ.

ಈ ಮೇಲ್ಕಂಡ ಕವಿರಾಜಮಾರ್ಗದ ಮೂರು ಪದ್ಯಗಳಿಗೂ ಛಂದೋಂಬುಧಿಯಲ್ಲಿ ಅನುವಾದಗೊಂಡಿರುವ ಅವೇ ಪದ್ಯಗಳಿಗೂ ಇರುವ ಪಾಠವ್ಯತ್ಯಾಸಗಳ ಆದಾರದ ಮೇಲೆ ಶ್ರೀ ವಿಜಯ ವಿರಚಿತ ಪ್ರಾಚೀನ ಕವಿರಾಜಮಾರ್ಗವೊಂದು ಇತ್ತೆಂದು ಊಹಿಸುವುದು ಕಲ್ಪನೆಯಾಗುತ್ತದೆಂದಿದ್ದಾರೆ. ಇದೇ ಅಭಿಪ್ರಾಯವನ್ನು ಶಬ್ದಮಣಿದರ್ಪಣದಲ್ಲಿ ಅನುವಾದಗೊಂಡಿರುವ ಕವಿರಾಜಮಾರ್ಗದ ಪದ್ಯಗಳ ವಿಚಾರದಲ್ಲೂ ವ್ಯಕ್ತಪಡಿಸಿದ್ದಾರೆ.

ಛಂದೋಂಬುಧಿಯಲ್ಲಿಯೂ, ಶಬ್ದಮಣಿದರ್ಪಣದಲ್ಲಿಯೂ ಅನುವಾದಗೊಂಡಿರುವ ಕವಿರಾಜಮಾರ್ಗದ ಪದ್ಯಗಳಲ್ಲಿ ಕಂಡುಬರುವ ಪಾಠವ್ಯತ್ಯಾಸಗಳಿಗೆ ಕಾರಣ ನಾಗವರ್ಮ ಮತ್ತು ಕೇಶಿರಾಜರು ಉದ್ದೇಶ ಪೂರ್ವಕವಾಗಿಯೇ ವ್ಯತ್ಯಾಸಗಳನ್ನು ಮಾಡಿರಬೇಕು. ಇಲ್ಲವೆ ಪಾಠವ್ಯತ್ಯಾಸಗಳಿರುವ ಬೇರೆಬೇರೆ ಪ್ರತಿಗಳಿಂದ ಪದ್ಯಗಳನ್ನು ಸ್ವೀಕರಿಸಿರಬೇಕು ಅಥವಾ ಇವೆರಡೂ ನೆಡೆದಿರಬಹುದು ಇಲ್ಲವೆ ಹಸ್ತಪ್ರತಿಗಳಿಂದ ಪದ್ಯಗಳನ್ನು ಸ್ವೀಕರಿಸಿ ತಮ್ಮ ಉದ್ದೇಶಕ್ಕನುಗುಣವಾಗಿ ಬದಲಾವಣೆ ಮಾಡಿಕೊಂಡಿರಬೇಕೆಂದಿದ್ದಾರೆ.

"ದುರ್ಗಸಿಂಹ ಹೇಳಿದ ಶ್ರೀ ವಿಜಯರ ಮಾರ್ಗಂ ಉಕ್ತಿಯಲ್ಲಿ ಕವಿಮಾರ್ಗ ಎಂದರೆ ಗ್ರಂಥ ಎಂದೇ ತಿಳಿಯಬೇಕಾಗಿಲ್ಲ ಕಾರಣ ರಚನಾ ಪದ್ದತಿ ಎಂಬ ಅರ್ಥದಲ್ಲಿ ಕವಿಮಾರ್ಗ, ಕಾವ್ಯಮಾರ್ಗ ಎಂಬ ಪದಗಳನ್ನು ಅನೇಕ ಕವಿಗಳೂ ಬಳಸಿಕೊಂಡು ಬಂದಿದ್ದಾರೆ. ಕವಿರಾಜಮಾರ್ಗದಲ್ಲಿಯೇ ಈ ಸಾಮಾನ್ಯಾರ್ಥದಲ್ಲಿ ಈ ಶಬ್ದದ ಪ್ರಯೋಗವಾಗಿದೆ"[೪] ಎಂದಿದ್ದಾರೆ.

ಕವಿರಾಜಮಾರ್ಗ ಕವೀಶ್ವರ ರಚಿಸಿದ್ದೆಂದು ವಾದಿಸಲು ಈ ಪಕ್ಷದವರು ಕವಿರಾಜಮಾರ್ಗದ "ಸವಿಶೇಷಗುಣಮನತಿಶಯಧವಳೋಕ್ತಿ ಕ್ರಮದಿನರಿಪುವೆಂ ತದ್ಭವದೊಳ್" (ಆ ಕವಿಮಾರ್ಗದಿಂದ

ಹುಟ್ಟಿದ ಈ ಕವಿ ರಾಜಮಾರ್ಗದಲ್ಲಿ) ತತ್+ಭವದೊಳ್ ಎಂದು ತಮ್ಮದೇ ಆದ ಅರ್ಥವಿವರಣೆ ನೀಡಿದ್ದಾರೆ ಈ ವಾದ "ಗಾಂಪರಕುದುರೆಯ ಮೊಟ್ಟೆ" ಎಂದಿದ್ದಾರೆ.

ಕವಿರಾಜಮಾರ್ಗದ ತರುವಾಯದ ಕವಿಗಳಲ್ಲಿ ಯಾರೂ ಕವೀಶ್ವರನೆಂಬ ಕವಿಯನ್ನು ಸ್ಮರಿಸಿಲ್ಲ. ಆದರೆ ಛಂದೋಂಬುಧಿಯಲ್ಲಿ ಔಪಚ್ಛಾಂದಸಿಕ ಛಂದಸ್ಸನ್ನು ಕವೀಶ್ವರೋಕ್ತಂ ಎಂದು ಉಲ್ಲೇಖಿಸಿದೆ ಇದನ್ನು ಇಲ್ಲಿ ಕವೀಶ್ವರನೆಂದರೆ ಕವೀಶ್ವರ ಬಿರುದುಳ್ಳ ಶ್ರೀ ವಿಜಯನೆಂದು ಫ್ಲೀಟ್ ಅಭಿಪ್ರಾಯಪಟ್ಟಿದ್ದಾರೆ ಆದರೆ ಕವಿರಾಜಮಾರ್ಗದಲ್ಲಿ ಛಂದಸ್ಸಿನ ವಿಚಾರವಿಲ್ಲ. ಕವಿರಾಜಮಾರ್ಗವು ಶ್ರೀ ವಿಜಯಕೃತ ಕವಿರಾಜ ಮಾರ್ಗದಿಂದ ಹುಟ್ಟಿದ್ದು ಎಂದು ವಾದಿಸಲು ಫ್ಲೀಟ್ ಮುಂತಾದವರು ಪರಿಚ್ಛೇದಾಂತ ಪದ್ಯಗಳ "ಕವಿಪ್ರಕರಂ ಶ್ರೀ ವಿಜಯ ಪ್ರಭೂತಮನಿದಂ ಕೈ ಕೊಳ್ವುದೀ ಮಾಳ್ಕೆಯಿಂ", ಅವರಿಂ ಸಮೆದೊಂದು ಕಾವ್ಯದಿಂ ಶ್ರೀವಿಜಯ ಪ್ರಭೂತ ಮುದಮಂ ತನಗಾಗಿಸಿದೊಂ ಕವೀಶ್ವರಂ", ಪರಮಶ್ರೀವಿಜಯ ಪ್ರಭೂತಿಜಯಶಂ____ ನೆಲೆಗೊಳ್ಗಾಚಂದ್ರತಾರಂ ಬರಂ___" ಉಕ್ತಿಗಳನ್ನು ಅವಲಂಬಿಸಿದ್ದಾರೆ. ಮೊದಲ ಮತ್ತು ಮೂರನೇ ಉಕ್ತಿಗಳಲ್ಲಿ ಈ ಕೃತಿ ಶ್ರೀ ವಿಜಯನಿಂದ ಹುಟ್ಟಿದ್ದು ಎಂಬ ಅರ್ಥಉಂಟಾಗುತ್ತದೆಯೇ ಹೊರತು ಆ ಕೃತಿಗೂ ಕವೀಶ್ವರನೆಂಬ ಇನ್ನೊಬ್ಬ ಕವಿಗೂ ಸಂಬಂದ ಕಲ್ಪಿಸಲು ಆಧಾರಗಳಿಲ್ಲ ಎರಡನೆಯ ವಾಕ್ಯಕ್ಕೆ ಶ್ರೀವಿಜಯ ಕೃತವಾದ ಕವಿರಾಜಮಾರ್ಗದಿಂದ ಒದಗುವ ಮುದವನ್ನು ಯಾವನು ತನಗೆ ದೊರಕಿಸಿಕೊಳ್ಳುವನೋ ಅವನೇ ಕವಿಶ್ರೇಷ್ಠ ಎಂಬ ಅರ್ಥದಲ್ಲಿಯೂ ಶ್ರೀ ವಿಜಯನಿಂದ ಉಂಟಾದಮುದವನ್ನು ಕವೀಶ್ವರನು ತನಗೆ ದೊರಕಿಸಿಕೊಂಡನು ಎಂದಾಗಲಿ, ಕವಿಶ್ವರನೆಂಬುದಕ್ಕಾಗಿ ಉಪಯೋಗಿಸಿಕೊಂಡನು ಎಂದಾಗಲಿ ಅರ್ಥಮಾಡಲು ಸಾಧ್ಯವಿಲ್ಲ ಈ ಎಲ್ಲಾ ಅಂಶಗಳ ಆಧಾರದ ಮೇಲೆ ಕವೀಶ್ವರನು ಕವಿರಾಜಮಾರ್ಗವನ್ನು ಬರೆದನೆನ್ನುವುದು ಬುಡವಿಲ್ಲದ ವಾದ ಎಂದಿದ್ದಾರೆ.

೩) ಶ್ರೀ ವಿಜಯ ಪಕ್ಷ:

ನೃಪತುಂಗ ಮತ್ತು ಕವೀಶ್ವರ ಪಕ್ಷದವರ ವಾದಾಂಶಗಳ ಚರ್ಚೆಯಲ್ಲಿಯೇ ಈಗಾಗಲೇ ಕವಿರಾಜಮಾರ್ಗದ ಕರ್ತೃ ಶ್ರೀವಿಜಯನೆಂದು ಪರೋಕ್ಷವಾಗಿ ಪ್ರತಿವಾದಿತವಾಗಿದೆ. ಅದರ ಕೆಲವು ವಾದಾಂಶಗಳ ಉಲ್ಲೇಖವನ್ನು ಮುಂದಿನಂತೆ ಮಾಡಲಾಗಿದೆ.

ಸುಮಾರು ೧೫೦೮ರ ಮಂಗರಸನು ತನ್ನ ನೇಮಿಜಿನೇಶ ಸಂಗತಿಯಲ್ಲಿ "ದೇವಚಂದ್ರಪ್ರಭರನು ಕೊಂಡಾಡಿದ ಶ್ರೀವಿಜಯರ ಎಂದು ಚಂಪೂಕಾವ್ಯಕರ್ತರ ವೃಂದದಲ್ಲಿ ಶ್ರೀ ವಿಜಯನ ಹೆಸರನ್ನು ಸ್ಮರಿಸಿದ್ದಾನೆ. ಸುಮಾರು ೧೫೫೦ರ ಪಿರಿಯಪಟ್ಟಣದ ದೊಡ್ಡಯ್ಯ ತನ್ನ ಚಂದ್ರಪ್ರಭಾ ಸಾಂಗತ್ಯದಲ್ಲಿ "ಚಂದ್ರಪ್ರಭಪುರಾಣವ ಪೇಳ್ದ ವಿಜಯ ಕವೀಂದ್ರ" ಎಂದು ಉಲ್ಲೇಖಿಸಿದ್ದಾನೆ. ದುರ್ಗಸಿಂಹನು ತನ್ನ ಪಂಚತಂತ್ರದಲ್ಲಿ ಶ್ರೀವಿಜಯರ ಕವಿಮಾರ್ಗಂ। ಬಾವಿಪಕವಿಜನದ ಮನಕೆ ಕನ್ನಡಿಯುಂ ಕೈ।ಯ್ದಿವಿಗೆಯು ಮಾದುದರಿಂ। ಶ್ರೀ ವಿಜಯರ್ ದೇವನವರನೇ ವಣ್ಣಿಪುದೋ॥ ಎಂದಿದ್ದಾನೆ. ಕೇಶಿರಾಜ ಶಬ್ದಮಣಿದರ್ಪಣದಲ್ಲಿ 'ಗಜಗನ ಗುಣನಂದಿಯ ಮಗ। ನಿಜನಸಗನ ಚಂದ್ರಭಟ್ಟಗುಣವರ್ಮ ಶ್ರೀ।ವಿಜಯರ ಪೊನ್ನನ ಪಂಪನ ಸುಜನೋತ್ತಂಸನ ಸುಮಾರ್ಗಮಿದರೊಳೆ ಲಕ್ಷ್ಯಂ ಎಂದಿದ್ದಾನೆ.

ದುರ್ಗಸಿಂಹನ ಹೇಳಿಕೆಯಿಂದ ಶ್ರೀವಿಜಯನು ಕವಿರಾಜ ಮಾರ್ಗದ ಕರ್ತೃ ಎಂದು ಗೊತ್ತಾಗುತ್ತದೆ. ಕವಿಮಾರ್ಗ ಎನ್ನುವುದಕ್ಕೆ ಕಾವ್ಯ ರಚನಾಪದ್ಧತಿ ಎಂದು ಹೇಳುವುದಕ್ಕಿಂತ ಒಂದು ಶ್ರೇಷ್ಠ ಗ್ರಂಥವೆಂದು ಹೇಳುವುದು ಸೂಕ್ತವೆಂದಿದ್ದಾರೆ. 'ಕವಿರಾಜಮಾರ್ಗವೆಂಬ ಸಮಸ್ತಪದವನ್ನು ಮುಖ್ಯವಾಗಿ ಕವಿಗಳ+ರಾಜಮಾರ್ಗ ಎಂದು ವಿಭಾಗಿಸಬಹುದು. ಕೇಶಿರಾಜನೂ ಶ್ರೀವಿಜಯನ ಹೆಸರನ್ನು ಹೇಳಿ ಕವಿರಾಜಮಾರ್ಗದ ಪದ್ಯಗಳನ್ನು ಉದಾಹರಿಸಿರುವುದರಿಂದಲೂ ಆಂತರಿಕ ಪ್ರಮಾಣಗಳಿಂದಲೂ ದುರ್ಗಸಿಂಹನು ಹೇಳುವ ಶ್ರೀವಿಜಯಕೃತ ಎಂದು ಸ್ಥಿರಪಡುವುದರಿಂದಲೂ, ದುರ್ಗಸಿಂಹನು ಹೇಳುವ ಶ್ರೀವಿಜಯನ ಕವಿಮಾರ್ಗವು ಕವಿರಾಜಮಾರ್ಗವೇ ಎಂಬಲ್ಲಿ ಸಂದೇಹವಿಲ್ಲ ಎಂದಿದ್ದಾರೆ. ಅಲ್ಲದೆ ಆಂತರಿಕ ಪ್ರಮಾಣಗಳಾದ ಪರಿಚ್ಛೇದಾಂತ್ಯ ಪದ್ಯಗಳಲ್ಲಿನ ಶ್ರೀವಿಜಯನಿಂದ ಉಂಟಾದುದು. ನಿರ್ಮಾಣವಾದುದ್ದು, ಜನಿಸಿದ್ದು, ಉತ್ಪನ್ನವಾದದ್ದು, ಶ್ರೀವಿಜಯಮೂಲದ್ದು ಎಂದು ಅರ್ಥಕೊಡುವ 'ಶ್ರೀ ವಿಜಯ ಪ್ರಭೂತ' 'ಶ್ರೀವಿಜಯ ಪ್ರಭೂತಿ' ಎಂಬ ಪದಗಳು ಇಲ್ಲಿ ಬಹುಮುಖ್ಯವಾಗಿವೆ ಎಂದಿದ್ದಾರೆ.

ಈ ಎಲ್ಲಾ ಅಂಶಗಳಿಂದ ಚಂದ್ರಪ್ರಭ ಪುರಾಣದ ಕರ್ತೃ ಶ್ರೀವಿಜಯನೂ ಮಾರ್ಗಕಾರ ಶ್ರೀವಿಜಯನೂ ಒಬ್ಬನೇ ಎಂದು ಪದ್ಯದ ಮಟ್ಟಿಗೆ ತೀರ್ಮಾನಿಸುವುದು ಸೂಕ್ತವಾಗಿದೆ ಅಲ್ಲದೆ ಈಗ ಬಹುಮಂದಿ ವಿದ್ವಾಂಸರು ಈ ವಾದವನ್ನು ಒಪ್ಪಿಕೊಂಡಿದ್ದಾರೆ.

ii. ಕಾವ್ಯಗ್ರಂಥಗಳ ಸಂಪಾದನೆ:

ಎಂ.ವಿ.ಸೀ ಅವರ ಸಂಪಾದಿತ ಗ್ರಂಥಗಳಲ್ಲಿ ಹೆಚ್ಚು ಕಾವ್ಯಗ್ರಂಥಗಳಿದ್ದು ಅವನ್ನೆಲ್ಲ ಒಂದೇ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಿಲ್ಲ. ಅದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಅವರ ಕೆಲವು ಕಾವ್ಯಗ್ರಂಥಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಅ) ಶ್ರೀ ಕೃಷ್ಣ ಬಾಲಲೀಲೆ

ಶ್ರೀ ಕೃಷ್ಣ ಬಾಲಲೀಲೆ ಕನ್ನಡಸಾಹಿತ್ಯದಲ್ಲೇ ಒಂದು ವಿಶಿಷ್ಟವಾದ ಕೃತಿಯಾಗಿದೆ. ಇದುವರೆಗಿನ ಕನ್ನಡ ಸಾಹಿತ್ಯದಲ್ಲಿ ಕೀರ್ತನೆ, ವಚನ, ತ್ರಿಪದಿಗಳಲ್ಲಿ ಸಾಹಿತ್ಯ ನಿರ್ಮಾಣವಾಗಿದ್ದರೂ ಕಂದ, ವೃತ್ತ, ಷಟ್ಪದಿ ಸಾಹಿತ್ಯ ಮುಂತಾದ ಪದ್ಯಜಾತಿಗಳಂತೆ ಒಂದು ಪ್ರಕಾರವಾಗಿ ಇಡೀ ಕೃತಿಯೊಂದರ ರೂಪವಾಗಿ ಯಾವ ಕೃತಿಯೂ ಬಳಕೆಯಾಗಿಲ್ಲ. ಇದಕ್ಕೆ ಅಪವಾದವಾಗಿ ಶ್ರೀ ಕೃಷ್ಣ ಬಾಲಲೀಲೆ, ಈ ಗುಂಪಿನಿಂದ ಪ್ರತ್ಯೇಕಿಸಿ ಸಾಹಿತ್ಯಪ್ರಕಾರ ಸಾಹಿತ್ಯ ಕೃತಿಯೊಂದರ ರೂಪವನ್ನಾಗಿಸುವುದರ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀ ಕೃಷ್ಣಬಾಲಲೀಲೆ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನುಗಳಿಸಿಕೊಂಡಿದೆ. ಒಂದು ಕೃತಿಗೆ ಛಂದೋಪ್ರಕಾರವಾಗಿಸುವ ಉದಾಹರಣೆ ಈವರೆಗೆ ಕನ್ನಡ ಸಾಹಿತ್ಯದಲ್ಲಿರಲಿಲ್ಲ ಅದು ಈ ಕೃತಿಯ ಮೂಲಕ ಸಾಧ್ಯವಾದಂತಾಗಿದೆ ಎಂಬ ಮಾತಿನ ಮೂಲಕ ಈ ಕೃತಿಯ ಮಹತ್ವ ಅರಿವಾಗುತ್ತದೆ.

ಶ್ರೀ ಕೃಷ್ಣ ಬಾಲಲೀಲೆಯ ಕರ್ತೃ ಶ್ರೀ ತಿಮ್ಮಪ್ಪದಾಸರು ಈ ಕೃತಿಗೆ ವೇದವ್ಯಾಸರ ಶ್ರೀ ಮಹದ್ಭಾಗವತ ಮಹಾಪುರಾಣದ ದಶಮಸ್ಕಂದದ ಕನ್ನಡಾನುವಾದವಾಗಿದ್ದು ಕೀರ್ತನ ರೂಪದಲ್ಲಿದೆ. ಇದು ಕೃತಿಕಾರರೇ ಹೇಳಿರುವಂತೆ ಅಂತೂ ಕೀರ್ತನೆ ೨೪೬ಕ್ಕೆ ಪದವು ೬೦೫೧ಕ್ಕೆ ಇತಿ ಶ್ರೀಮದ್ಭಗವದ್ಗೀತೇ ಮಹಾಪುರಾಣೇ ದಶಮಸ್ಕಂದೇ ಬಾಲಲೀಲಾ ಪ್ರಕರಣ ಸಂಪೂರ್ಣ ೫ ಎಂಬುದು ಆಧಾರವಾಗಿದೆ.

ತಿಮ್ಮಪ್ಪದಾಸರ ಸ್ಥಳ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ. ಇವರ ಕಾಲವನ್ನು ಕ್ರಿ.ಶ ೧೭೭೦–೧೮೬೦ ಎಂದು ಎಂ.ವಿ.ಸೀ ಕೆಲವು ಆಧಾರಗಳಿಂದ ಊಹಿಸಿದ್ದಾರೆ. ತಿಮ್ಮಪ್ಪದಾಸರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕ್ರಿ.ಶ ೧೭೯೯–೧೮೬೮ ವರೆಗೆ ಜೀವಿಸಿದ್ದರೆಂದು ಅವರ ವಂಶಜರ ಹೇಳಿಕೆ ಮತ್ತು ಲಿಖಿತ ಆಧಾರಗಳಿಂದ ಎಂ.ವಿ.ಸೀ ಊಹಿಸಿದ್ದಾರೆ. ಕಾರಣ “ಇವರ ಯಾವ ಹಸ್ತ ಪ್ರತಿಯಲ್ಲಿಯೂ ಕೃತಿರಚನೆ ಸ್ವಂತವಿಚಾರ, ಪ್ರತಿ ಮಾಡಿದ ಕಾಲದ ವಿಚಾರವಾಗಿ

ಏನೂ ಹೇಳಿಲ್ಲ. "ಇವರ ಮನೆತನದರ ಬಳಿಯಿದ್ದ ಹಳೆಯ ಹಸ್ತಪ್ರತಿ ಸಂಗ್ರಹದಲ್ಲಿ ಜಾತಕದ ಕುಂಡಲಿ ಬರೆದಿದ್ದು ಒಂಟಿ ಓಲೆಗರಿಯೊಂದು ಕೇವಲ ಆಕಸ್ಮಿಕವಾಗಿ ಸಿಕ್ಕಿದ್ದು ಅದರಲ್ಲಿ "ಜೇಷ್ಠ ಪುತ್ರ ನಾರಾಯಣನ ಜಾತಕ ಬರೆದಿದ್ದುದು ವ್ಯಕ್ತವಾಗಿದೆ. ಶಾಲಿವಾಹನ ಶಕಾಬ್ದಂಗಳಲ್ಲಿ ೧೭೮೮ನೇ ಸಂದ ಚಿತ್ರಭಾನು ಸಂವತ್ಸರದ ಮಾಘ ಬಹುಳ ೩೦ ಮಂಗಳವಾರ ಚಿರಂಜೀವಿ ತಿಮ್ಮಪ್ಪಯ್ಯನ ಜೇಷ್ಟಪುತ್ರನಾರಾಯಣನ ಜನನ".[೬] ಈ ಆಧಾರಗಳಿಂದ ತಿಮ್ಮಪ್ಪದಾಸರ ಕಾಲವನ್ನು ಎಂ.ವಿ.ಸೀ ಊಹಿಸಿದ್ದಾರೆ.

ತಿಮ್ಮಪ್ಪದಾಸರು ತಮ್ಮ ಯಾವುದೇ ಕೃತಿಗಳಲ್ಲಿ ತಮ್ಮ ಸ್ವವಿಷಯಗಳ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲವಾದ್ದರಿಂದ ಅವರ ತಂದೆ ತಾಯಿಗಳ ಹೆಸರು ಸ್ಪಷ್ಟವಾಗಿ ಎಲ್ಲಿಯೂ ಗೋಚರಿಸುವುದಿಲ್ಲ. "ತಂದೆಯ ಹೆಸರು ನಾರಾಯಣ (ನಾರಾಯಣಾರಾರ್ಯ) ತಾಯಿಯ ಹೆಸರು ಚೆನ್ನಮ್ಮ (ಚೆನ್ನಾಂಬೆ) ಎಂದು ಆರ್ಚನದ ಒಂದು ಕೀರ್ತನೆಯಿಂದ ತಿಳಿದುಬರುತ್ತದೆ. ತಿಮ್ಮಪ್ಪದಾಸರ ಪ್ರಪೌತ್ರರು ಕೊಡುವ ತರ್ಪಣಗಳಲ್ಲಿ ಪಿತಾಮಹ ಮತ್ತು ಪ್ರಪಿತಾಮಹೀ ಇವರ ಹೆಸರುಗಳು ತಿಮ್ಮಪ್ಪಯ್ಯ ಮತ್ತು ವೆಂಕಮ್ಮ ಎಂದು ಉಕ್ತವಾಗಿರುವುದರಿಂದ ತಿಮ್ಮಪ್ಪದಾಸರ ಹೆಂಡತಿಯ ಹೆಸರು ವೆಂಕಮ್ಮ ಎಂಬುದು ಸ್ಪಷ್ಟ ತಮ್ಮ ಕೀರ್ತನೆಗಳಲ್ಲಿ ಮೇಲಿಂದ ಮೇಲೆ ಗುರುವಾಸುದೇವಾರ್ಯರನ್ನು ಸ್ಮರಿಸಿರುವ ರೀತಿಯನ್ನು ಪರಿಭಾವಿಸಿದರೆ ಗುರುಶಿಷ್ಯ ಸಂಬಂಧವನ್ನು ಮೀರಿ ದಾಸರ ಪಾಲಿಗೆ ಅವರು ಸಾಕ್ಷಾತ್ ವೆಂಕಟರಮಣನೇ. ಒಂದು ಕೀರ್ತನೆಯಲ್ಲಿ "ಜನಿಸಿದ ಮೂರು ವರ್ಷಕೆ ನಿನ್ನಯ ದಾಸನೆನ್ನುತ ಮಾತುಗಳಿಂದ ನುಡಿಸಿದ" ಎಂದಿರುವ ಮಾತಿನಿಂದ ಸೋದರಮಾವನಿಂದ ದಾಸದೀಕ್ಷೆ ಪಡೆದಹಾಗೆ ಭಾಸವಾಗುತ್ತದೆ ಎಂದೂ, ಮತ್ತೊಂದು ಕೀರ್ತನೆಯಲ್ಲಿ "ವಾಸುದೇವಾಚಾರ್ಯ ಚಿಕ್ಕನಾಗಪುರದಿ ಪರತತ್ತ್ವವರುಹಿ ವೆಂಕಟವಾಸವೇಷದಿಂ ಮರಳಿ ನಿಜದೊಳುನಿಂದೆ" ಎಂದೂ ಇನ್ನೂ ಒಂದೆರಡು ಕೀರ್ತನೆಗಳಲ್ಲಿ ವೆಂಕಟದಾಸರನ್ನೂ ಕೊಂಡಾಡಿರುವುದು, ಈ ವೆಂಕಟದಾಸ ಮಾತುಳನೆಂದು ಊಹಿಸಿರುವುದು ತನ್ನ ತಂದೆಯನ್ನೇ ಈ ರೀತಿ ಗುರುಭಾವನೆಯಿಂದ ಕೊಂಡಾಡಿರುವ ಕೀರ್ತನೆ ಸದ್ಯಕ್ಕೆ ಇಲ್ಲಿಯವರೆಗೆ ಗಮನಕ್ಕೆ ಬಂದಿಲ್ಲ. ಈ ಕೆಲವು ಅಂಶಗಳಿಂದ ಎಂ.ವಿ.ಸೀ ತಿರ್ಮಾನಿಸಿದ್ದಾರೆ. ಅಲ್ಲದೆ ತಿಮ್ಮದಾಸ ಹೇಳಿದ ಧ್ರುವಚರಿತೆ ಎಂಬ ಸಾಂಗತ್ಯ ಕಾವ್ಯದ ಕೊನೆಯ ಪದ್ಯಗಳಿಂದ ಅದರ ಕರ್ತೃತ್ವವೂ, ಹಸ್ತಪ್ರತಿಯ ೩೬ನೆಯ ಮತ್ತು ೪೧ನೆಯ ಗರಿಗಳಲ್ಲಿ ಸೇರಿಕೊಂಡಿರುವ (ಕಾವ್ಯಕ್ಕೆ ಸಂಬಂಧಪಡದ) ಲಿಪಿಕಾರ ಲಿಖಿತದಿಂದ ತಿಮ್ಮಪ್ಪದಾಸರು ವಾಸುದೇವಾರ್ಯರ ಮೊಂಮ

(ಮೊಮ್ಮಗ) ವಾಸುದೇವ ಪಉತ್ರ(ಪವುತ್ರ<ಪೌತ್ರ) ಎಂಬ ಅಂಶ ಅಲ್ಲದೆ ದಾಸರ ವಂಶಸ್ಥರು ತಮ್ಮ ವಂಶದ ಮೂಲಪುರುಷರು ವಾಸುದೇವಾರ್ಯರು ತಮ್ಮ ಪೂರ್ವಿಕರು ಚಿಕ್ಕನಾಯಕನಹಳ್ಳಿಯಿಂದ ಬಂದವರು"[೨] ಎಂದು ಹೇಳಿರುವುದು ತಿಮ್ಮಪ್ಪದಾಸರ ತಂದೆಯೆ ನಾರಾಯಣಾರ್ಯರು ಎಂದು ಊಹಿಸಲು ಸಾಧ್ಯವಿದೆಯೆಂದು ಎಂ.ವಿ.ಸೀ ಅಭಿಪ್ರಾಯ ಪಟ್ಟಿದ್ದಾರೆ.

ವಾಸುದೇವಾರ್ಯರಲ್ಲದೆ ತಿಪ್ಪಪ್ಪದಾಸರ ಗುರುಗಳು ರಾಮಕೃಷ್ಣಾರ್ಯರು, ನೀಲಕಂಠಾರ್ಯರು, ವೆಂಕಟದಾಸಾರ್ಯ, ಕೃಷ್ಣಯೋಗೀಂದ್ರ, ನರಸಾರ್ಯ, ನಾರಾಯಣಾರ್ಯ, ಗೋಪಾಲಾರ್ಯ ಎಂದು ಅವರ ಕೀರ್ತನೆಗಳಿಂದ ತಿಳಿದುಬರುತ್ತದೆ.

ಶ್ರೀಕೃಷ್ಣಬಾಲಲೀಲೆಯನ್ನು ತಿಮ್ಮಪ್ಪದಾಸರು ಒಟ್ಟು ೨೬೮ (ಮೊದಲಸಂಪುಟ ೧೮೮ ಎರಡನೆ ಸಂಪುಟ ೮೦) ಕೀರ್ತನೆಗಳಲ್ಲಿ ಪೂರ್ಣಗೊಳಿಸಿದ್ದಾರೆ. ಶ್ರೀಕೃಷ್ಣಬಾಲಲೀಲೆ ಎರಡು ಹಸ್ತಪ್ರತಿಗಳಲ್ಲಿದ್ದೂ ಎರಡೂ ತಾಡವೋಲೆ ಕಟ್ಟುಗಳಲ್ಲಿ ಲಿಖಿತವಾಗಿದೆ. ಎರಡರ ಬರವಣಿಗೆ ಲಿಪಿ ಲೇಖನಸ್ವರೂಪದಲ್ಲಿ ಸಾಮ್ಯವಿದೆ. "ಮೊದಲಕಟ್ಟಿನಲ್ಲಿ ಕೃಷ್ಣನ ಬಾಲಲೀಲೆಯ ಪೂರ್ವವೃತ್ತಾಂತ, ಆಕ್ರೂರ ಪ್ರಕರಣದ ಎಂಟು ಕೀರ್ತನೆಗಳಿವೆ ಸಮಾಪ್ತಿವಾಕ್ಯವಿಲ್ಲ. ಎರಡನೇ ಕಟ್ಟಿನ ಸಮಾಪ್ತಿ ವಾಕ್ಯ ಇಡೀ ಶ್ರೀಮಧ್ಭಾಗವತೇ ಮಹಾಪುರಾಣೇ ದಶಮಸ್ಕಂದೇ ಬಾಲಲೀಲಾ ಕಲ್ಯಾಣ ಮಹೋತ್ಸವಂ ಸಂಪೂರ್ಣಂ" ಎರಡನೆಯ ಕಟ್ಟಿನ ಮೊದಲ ಗರಿಯ ವಾಕ್ಯಗಳು ಶ್ರೀ ಗುರುಭ್ಯೋ ನಮಃ, ಬಾಲಲೀಲೆಯಲ್ಲಿ ಅಕ್ರೂರ ಪ್ರಕರಣದಿಂದ ಚುಂಗಡಿ ಒಂಭತ್ತನೇ ಕೀರ್ತನೆ" ಎಂದ ಮೇಲೆ ಈ ಎರಡೂ ಕಟ್ಟುಗಳಲ್ಲಿ ಬರೆದಿರುವುದು ಒಂದೇ ಕೃತಿ ಶ್ರೀ ಕೃಷ್ಣಬಾಲಲೀಲೆ ಎಂಬ ಶೀರ್ಷಿಕೆಯ ಶ್ರೀಮದ್ ಭಾಗವತ ಮಹಾಪುರಾಣದಲ್ಲಿ ಸವಿಸ್ತಾರವಾಗಿ ಹೇಳಿದ ಶ್ರೀ ಕೃಷ್ಣಚರಿತೆ ಈ ಸಂಪುಟದ ೪ನೆಯ ಕೀರ್ತನೆಯಲ್ಲಿ ಬಾಲಲೀಲೆಯ ಪೇಳ್ವೆನು ಎಂದು ಸ್ಪಷ್ಟವಾಗಿರುವುದರಿಂದ "ಶ್ರೀ ಕೃಷ್ಣಬಾಲಲೀಲೆ" ಎಂಬುದೇ ಕೃತಿಯ ಪೂರ್ಣನಾಮ ಎಂಬುದು ಸುನಿಶ್ಚಿತ."[೮] ಎಂದು ಕೃತಿಯ ಹೆಸರನ್ನು ಎಂ.ವಿ.ಸೀ ಅವರು ನಿರೂಪಿಸಿದ್ದಾರೆ.

ಶ್ರೀಕೃಷ್ಣಬಾಲಲೀಲೆಯ ಕರ್ತೃ ಯಾರೆಂಬುದನ್ನು ನಿರ್ಧರಿಸಲು ಎಂ.ವಿ.ಸೀ ಅವರ ಇತರ ಕೃತಿಗಳು ಹಾಗೂ ಮತಧರ್ಮದ ಆಧಾರಗಳಿಂದ ಅಧ್ಯಯನಗಳಿಂದ ಸ್ಪಷ್ಟಪಡಿಸಿದ್ದಾರೆ. ಅದನ್ನು ಈ ಕೆಲವು ಪ್ರಮಾಣಗಳ ಮೂಲಕ ನಿರೂಪಿಸಿದ್ದಾರೆ.

೧. ತಿಮ್ಮಪ್ಪದಾಸರು ಭಾಗವತಧರ್ಮದ ಅನುಯಾಯಿಗಳಾಗಿರುವುದು.

೨. ಪ್ರಕಟಣೆಯಾಗದಿರುವ ಒಂದು ಕೀರ್ತನೆಯಲ್ಲಿ "ಗುರುವೆ ಪರಬ್ರಹ್ಮ ವಾಸುದೇವಾರ್ಯ ಗುರುವೆ ಪರಬ್ರಹ್ಮ" ಎಂಬ ಕೀರ್ತನೆಯಲ್ಲಿ ಭಾಗವತಾರ್ಥದಿ ರಾಗವ ಪುಟ್ಟಿಸಿ ಹಾಗೆ ಗೀತಾಮೃತ ಸಾಗರದೆಡೆಗೊಯ್ವ" ಈ ಹೇಳಿಕೆಯಿಂದ ತಿಮ್ಮಪ್ಪದಾಸರು ಗುರುಪ್ರೇರಣೆಯಿಂದ ಭಾಗವತದಲ್ಲಿ ಆಸಕ್ತಿವಹಿಸಿರುವುದು ಸ್ಪಷ್ಟವಾಗುತ್ತದೆ ಆದ್ದರಿಂದ ಅದನ್ನು ಕನ್ನಡದಲ್ಲಿ ಬರೆಯಬೇಕೆಂಬ ಆಸೆಕಾರಣವೆಂದು ಊಹಿಸಿದ್ದಾರೆ.

೩. ಭಾಗವತದ ೪ನೇಯ ಸ್ಕಂದದಲ್ಲಿ ಹೇಳಿರುವ ಪರಮವಿಷ್ಣು ಭಕ್ತ ದ್ರುವನ ಕಥೆಯನ್ನು ಸಾಂಗತ್ಯ ಛಂದಸ್ಸಿನಲ್ಲಿ ಬರೆದಿದ್ದು ಕೃಷ್ಣನ ಚರಿತ್ರೆಯನ್ನೂ ರಚಿಸಬೇಕೆಂದು ಮನಸ್ಸುಮಾಡಿದ್ದಾರೆಂದು ಹೇಳಿದ್ದಾರೆ.

೪. ತಿಮ್ಮಪ್ಪದಾಸರ ಮೊಮ್ಮಕ್ಕಳಲ್ಲಿ ಒಬ್ಬರಾದ ವೆಂಕಟದಾಸಪ್ಪ ಎಂಬುವರು ಕೃಷ್ಣ ಬಾಲಲೀಲೆಯನ್ನು ಸ್ವಹಸ್ತಾಕ್ಷರದಲ್ಲಿ ಪ್ರತಿಮಾಡಲು ಪ್ರಯತ್ನಿಸಿರುವುದು.

೫. ತಿರುಪತಿಯ ವೆಂಕಟರಮಣ ತಿಮ್ಮಪ್ಪದಾಸರ ಇಷ್ಟದೇವ 'ಅರ್ಚನ' ಮತ್ತು ಬಾಲಲೀಲೆಯಲ್ಲಿ ಇಷ್ಟದೈವದ ಮುದ್ರಿಕೆಯಿದ್ದು ಎರಡೂ ಕೃತಿಗಳಲ್ಲಿ ವೆಂಕಟೇಶ, ವೆಂಕಟನಾಯಕ, ವೆಂಕಟರಮಣ ಎಂದು ಇಷ್ಟ ದೈವವನ್ನು ಪರ್ಯಾಯ ಹೆಸರುಗಳಿಂದ ಸಂಬೋಧಿಸಲಾಗಿದೆ.

೬. ಶ್ರೀಕೃಷ್ಣಬಾಲಲೀಲೆ ಮತ್ತು ಅರ್ಚನ ಕೃತಿಗಳಲ್ಲಿ ಕೃತಿಕಾರ ಅದ್ವೈತ ನಿಷ್ಟವಾದ ಭಾಗವತಧರ್ಮ ಪ್ರತಿಪಾದನೆಯಾಗಿದೆ.

೭. ಶ್ರೀಕೃಷ್ಣಬಾಲಲೀಲೆಯ ಎರಡು ಕಟ್ಟುಗಳಲ್ಲಿನ ರಚನೆಗೂ ಮತ್ತು ಭಾಷಾಶೈಲಿಯಲ್ಲಿಯೂ, ಕೀರ್ತನೆಗಳ ರಚನಾಸ್ವರೂಪವೂ ಒಂದೇ ಆಗಿದೆ.

೮. ಶ್ರೀ ಕೃಷ್ಣಬಾಲಲೀಲೆ ಮತ್ತು ಅರ್ಚನದಲ್ಲಿನ ಕೆಲವು ವರ್ಣಮಟ್ಟಗಳು ಒಂದೇ ಆಗಿವೆ. ಉದಾ: "ಸಲಹನಂದಕುಮಾರ" ಎಂಬ ಕೀರ್ತನೆ ಎರಡರಲ್ಲಿಯೂ ಇದೆ.

ಈ ಎಲ್ಲಾ ಬಾಹ್ಯ ಆಂತರಿಕ ಪ್ರಮಾಣಗಳಿಂದ ಶ್ರೀ ಕೃಷ್ಣಬಾಲಲೀಲೆಯ ಕರ್ತೃ ತಿಮ್ಮಪ್ಪದಾಸರೇ ಎಂಬ ತೀರ್ಮಾನಕ್ಕೆ ಎಂ.ವಿ.ಸೀ ಬಂದಿದ್ದಾರೆ.

ಶ್ರೀಕೃಷ್ಣಬಾಲಲೀಲೆಯ ರಚನೆಗೆ ತಿಮ್ಮಪ್ಪದಾಸರಿಗೆ ಪ್ರೇರಣೆ ಕನ್ನಡಭಾಗವತವನ್ನು ಓದಿಕೊಂಡಿದ್ದರಿಂದ (ಪ್ರಬಾವಿತವಾಗಿದ್ದಾರೆ) ಹಾಗೆಯೇ ಅವರೆ ಹೇಳಿರುವ 'ಗುರುವೆ ಪರಬ್ರಹ್ಮ! ವಾಸುದೇವಾರ್ಯ ಗುರುವೆ ಪರಬ್ರಹ್ಮ॥ ಎಂಬ ಕೀರ್ತನೆಯಲ್ಲಿ ಭಾಗವತಾರ್ಥದಿ ರಾಗವ ಪುಟ್ಟಿಸಿ, ಹಾಗೆ ಗೀತಾಮೃತ ಸಾಗರದೆಡೆಗೊಯ್ವ"[6] ಎಂಬ ಎರಡು ಅಂಶಗಳನ್ನು ಎಂ.ವಿ.ಸೀ ಗುರ್ತಿಸಿದ್ದಾರೆ. ಆದರೆ ತಿಮ್ಮಪ್ಪದಾಸರು ಭಗವದ್ಗೀತೆಗೆ ಸಂಬಂಧಿಸಿದಂತೆ ರಚಿಸಿರುವ ಯಾವ ಕೃತಿಗಳು ಉಪಲಬ್ದವಿಲ್ಲ.

ಶ್ರೀಕೃಷ್ಣಬಾಲಲೀಲೆಯನ್ನು ತಿಮ್ಮಪ್ಪದಾಸರು ಒಂದು ಅಪರೂಪದ ಕಾವ್ಯಕೃತಿಯನ್ನಾಗಿ ನಿರೂಪಿಸಿದ್ದಾರೆ. ಒಂದು ಕಾವ್ಯದಲ್ಲಿ ಬರುವ ಎಲ್ಲಾ ರಸಗಳನ್ನೂ ಎಲ್ಲಾ ವರ್ಣನೆಗಳನ್ನೂ ತರುವ ಪ್ರಯತ್ನ ಮಾಡಿದ್ದಾರೆ. ಕೀರ್ತನೆಗಳನ್ನ ಕಾವ್ಯ ಮಾಧ್ಯಮಕ್ಕೆ ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ತಿಮ್ಮಪ್ಪದಾಸರನ್ನು ಕೀರ್ತನಕಾರರೆನ್ನದೆ ಕನಕದಾಸರಂತೆ ಕವಿ ಎಂದೂ ಗುರ್ತಿಸಬೇಕಾಗಿದೆ. ಶ್ರೀಕೃಷ್ಣಬಾಲಲೀಲೆ ಎಂಬ ಕೀರ್ತನ ಕಾವ್ಯದ ಜೊತೆಗೆ ಧ್ರುವಚರಿತ್ರೆ ಎಂಬ ಸಾಂಗತ್ಯ ಕೃತಿಯನ್ನು ಸಹ ಇವರು ರಚಿಸಿದ್ದಾರೆ.

ತಿಮ್ಮಪ್ಪದಾಸರನ್ನು ಕವಿ ಎಂದು ನಿರ್ದೇಶಿಸುವುದು ಅನುಚಿತವಲ್ಲ. ಏಕೆಂದರೆ ತಿಮ್ಮಪ್ಪದಾಸರು ಸಂಸ್ಕೃತ ಭಾಗವತವನ್ನು ಮಾತಿಗೆ ಮಾತು ಇಟ್ಟು ಭಾಷಾಂತರ ಮಾಡಿಲ್ಲ. ಸಮೀಪವರ್ತಿಯಾಗುವಂತೆ ಮೂಲವನ್ನು ಅನುಸರಿಸಿ ಹೇಳುತ್ತಾ ಹೋಗಿದ್ದರೂ ಕೃತಿಯನ್ನು ಅನುವಾದ ಎಂದು ಹೇಳುವಂತಿಲ್ಲ. ಬಾಲಲೀಲೆಯ ಕಥನಕ್ರಮದಲ್ಲಿ ಧ್ರುವಚರಿತ್ರೆಯಲ್ಲಿ ಕಾಣಬರುವಷ್ಟು ಪ್ರಮಾಣದಲ್ಲಿ ಅಲ್ಲದಿದ್ದರೂ ತಕ್ಕಮಟ್ಟಿನ ಪುನಃಸೃಷ್ಟಿ ಕಾರ್ಯವನ್ನು ಗುರುತಿಸಬಹುದು. ಕೃತಿ ಕೀರ್ತನೆಗಳ ರೂಪದಲ್ಲಿದ್ದರೂ ಹರಿದಾಸರ ಕೀರ್ತನೆಗಳಂತೆ ಇವು ಬಿಡಿ ರಚನೆಗಳಲ್ಲ. ಪೂರ್ವಾಪರ ಸಂಬಂಧವನ್ನು ಹೊಂದಿ ಪುರಾಣಕಥಾ ಸರಣಿ ಸಾಗಿದೆ. ಎಲ್ಲಾ ಕೀರ್ತನೆಗಳೂ ಕೃಷ್ಣಸ್ತುತಿಯಾಗಿರದೆ, ಕೃಷ್ಣ ಚರಿತ್ರೆಯನ್ನು ನಿರೂಪಿಸುತ್ತದೆ. ಕೀರ್ತನ ಕರ್ತೃ ತಿಮ್ಮಪ್ಪದಾಸರು ತಾವು "ಕವಿತೆಯ ಕೀಲನರಿಯದ ಅಜ್ಞನು ಎಂದು ಹೇಳಿಕೊಂಡಿದ್ದರೂ ಸಂಸ್ಕೃತ ಭಾಗವತ ಪುರಾಣವಾದರೂ ಬಹುಅಂಶದಲ್ಲಿ ಕಾವ್ಯಗುಣವನ್ನು ಹೊಂದಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವುದರಿಂದ ಮೂಲವನ್ನು ಅನುಸರಿಸಿಯೂ ಸ್ವೋಪಜ್ಞ ರಚನೆಯನ್ನು ಮೆರೆದಿರುವ

ದಾಸರು ಕವಿಮನೋಧರ್ಮದವರೇ ಎಂದು ಧಾರಾಳವಾಗಿ ಹೇಳಬಹುದು".[೧೦] ಎಂಬ ಮಾತು ತಿಮ್ಮಪ್ಪ ದಾಸರಿಗೆ ಒಪ್ಪುತ್ತದೆ.

"ಮುಕ್ತಿದಾಯಕವಾದ ತಿರುಪತಿ । ಯುಕ್ತ ವೆಂಟನಾಯಕ॥

ಪ್ರೇರಿಸಿದಂತೆ ಪೇಳುವೆನು । ನೀನು । ತೋರಿಸಿದಂತೆ ತಿಳಿವೆ

ಬೇರೊಬ್ಬರಾರಿನ್ನು ಬೋಧಹೇತುವೆ । ನೀನು । ಬೇರು ಬುದ್ಯಾದಿಗಳನು ಬೆಳಗುವವನು ॥

ಆರುಲೋಕವನಾಳುವರಾರು । ಇದ । ತೋರಿ ತಾಳಿರುವರಾರು

ಜಾರಿಸಿಡುವ ಜಾಣರಾರು । ಕೃತ್ಯ । ಮಾರಕ್ಕ ನೀಮೂರ್ತಿ ಮೂರು ।

ವಾರೆಪಾರೆಗಳಿಗೆ ಬಡಲೊಬ್ಬರಿನ್ನಾರು ।

ವಾರಿಜಾಕ್ಷನೆ ಎನ್ನ ವಾಕ್ಯವ ಸಾರು ॥ ....೨"[೧೧]

ಕ್ರಮ ಸಂಖ್ಯೆ ೩ ರ ಈ ಕೀರ್ತನೆಯಲ್ಲಿ ತಿಮ್ಮಪ್ಪದಾಸರು ತಮ್ಮ ಇಷ್ಟದೈವವಾದ ಶ್ರೀ ತಿರುಪತಿಯರಸನೇ ಈ ಕೃತಿರಚನೆಗೆ ಬೋಧಹೇತು ಆತನು ಪ್ರೇರಿಸಿದಂತೆ ಪೇಳುವೆನು ಎಂದು ಪೂರ್ವಕವಿ ಸಂಪ್ರದಾಯವನ್ನು ಪಾಲಿಸಿದ್ದಾರೆ. ಆರುಲೋಕವನಾಳುವಾರಾರು? ಇದ ತೋರಿ ತಾಳಿರುವರಾರು? ಆ ಪರಮಾತ್ಮನೇ ಎಲ್ಲಕ್ಕೂ ಬೇರು ಬುದ್ಧ್ಯಾದಿಗಳನ್ನು ಬೆಳಗುವವನು ಎಂಬ ಪರಮತತ್ವವನ್ನು ಸಾರಿದ್ದಾರೆ. ಅದಕ್ಕಾಗಿ ಕೃತಿ ತನ್ನ ತಾನೆ ತಾ ಬಂದು ಬಹು ಜಿನವಾಯಿತು ಜಗದಲಿ ನಿಂದು ಎನ್ನುತ್ತಾ ಈ ಕೃತಿ ತಾವು ರಚಿಸಿದಲ್ಲ ಕಲಿಸಿದ ಕವಿ ಕಲೆಗಳನು ಕೃತಿಗೊಳಿಸಿದೆ ಕಮಲಾಕ್ಷ ನೀನು ವೀಣೆಯಸ್ವರವಿವರವನು ಪೇಳೆ ವೀಣೆಗೆ ಚೈತನ್ಯವೇನು? ವೀಣೆಗೆ ಒಡಲು ಮಾನವನು ಹಾಗೆ ನಾನು ನೀ ನುಡಿಸೆ ನುಡಿವೆನು ಎನ್ನುತ್ತಾರೆ. ಹಾಗೆ ನುಡಿಸುವವನು ಬಾಲಲೀಲೆಗಳಿಂದ ಮೆರೆದ ಶ್ರೀ ಕೃಷ್ಣನೇ ಎಂದಿದ್ದಾರೆ. ಲೀಲೆಯಿಂದಾಡಿದ ಲಲಿತ ಚರಿತವನು ಕೀಲಿಸಿಕೊಡುತಿಹೆ ಕಾಣಲೆಂದಿದನು. ಸೃಷ್ಟಿಕಾರ್ಯಕ್ಕೆ ಬ್ರಹ್ಮನಿಗೇ ಸೃಷ್ಟಿಮಂತ್ರವನು ದಯಪಾಲಿಸಿದವನೇ "ನನಗೂ ಪ್ರೇರಕನೆಂಬ ನಿರ್ಣಯಕ್ಕಿನ್ನೇನು ಅನುಮಾನ" ಎಂಬ ದೃಢವಾದ ನಂಬುಗೆಯನ್ನು ತಿಮ್ಮಪ್ಪದಾಸರು ಈ ಕೀರ್ತನೆಯಲ್ಲಿ ಮೂಡಿಸಿದ್ದಾರೆ. ಇದು "ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ" ಎಂಬ ನಿಲುವಿಗೆ ದಾಸರು ಬಂದಿದ್ದಾರೆ.

"ತಿಮ್ಮಪ್ಪದಾಸರು ತಮ್ಮ ನಾಲ್ಕನೆಯ ಕೀರ್ತನೆಯಲ್ಲಿ ಬಾಲಲೀಲೆಯ ಕಥಾವಸ್ತುವನ್ನು ಸಂಕ್ಷೇಪವಾಗಿ ನಿರೂಪಿಸಿದ್ದಾರೆ.

ಬಾಲಲೀಲೆಯ ಪೇಳ್ವೆನು ।ವ್ರಜಪರಿ।
ಪಾಲನ ಪಾದಭೃತ್ಯನು
ಕಾಲಾತ್ಮ ಕೃಷ್ಣಧರ್ಮಾಶೀಲರ ಸಲಹಲೆಂದು।
ಬಾಲ್ಯವ ವಹಿಸಿರಲು॥
ಮೂಲೋಕವಂದ್ಯ ಮಾನ್ಯನು । ವಸುದೇವ
ನಾಲಯದಲಿಯಾತನು
ಲೀಲೆಯಿಂದುದಿಸಿದನು । ಲೋಕವ
ಪಾಲಿಪ ಪಾವನಾತ್ಮನು।
ನೀಲಾಂಬರನು ಸಹನಲಿಯೆ ಬಾಲಕನಾಗಿ।
ಆ ಲೀಲೆಗಳನೊರೆವೆ॥
ಅರಿತ ಕವಿಗಳಡಿಯ । ರಜಕೊಮ್ಮೆ
ಯರಗಿದಡೋದಗಿತಿದು।
ಕುರುಹಿನ ಕವಿಕುಲವು । ಕೊರತೆಯ।
ಸ್ಮರಿಸದೆ ಸಲಹಬೇಕು ।
ತಿರುಪತಿಯೊಡೆಯನು ತಂದೆ ವೆಂಕಟನನ್ನು
ಸ್ಮರಿಸುವುದೊಂದೆ ಗುಣವು॥"[೧೨]

ತಿಮ್ಮಪ್ಪದಾಸರು ಎಲ್ಲಿಯೂ ತಮ್ಮ ಹೆಮ್ಮೆಯನ್ನು ಮೆರೆದಿಲ್ಲ ಮೇಲಾಗಿ ವಿನಯಭಾವವನ್ನು ತೋರಿದ್ದಾರೆ. ಇದು ಅವರ ಐದನೆಯ ಕೀರ್ತನೆಯಲ್ಲಿ ವ್ಯಕ್ತವಾಗಿದೆ.

"ಕ್ಷಮಿಸುವುದು ಕವಿಜನರು ಕೃತಿಯ ಕೊರತೆಯನು
ನಮಿಸುವೆನು ನಿಮ್ಮಡಿಗೆ ನಾನು ಬಾಲಕನು॥
ಕೃಷ್ಣ ಲೀಲೆಗಳನ್ನು ಕೀರ್ತನೆಯ ರೂಪದಲ್ಲಿ
ವಿಷ್ಣು ಪ್ರೇರಣೆಯಿಂದ ವಿವರಿಸಿರುತಿಹುದು

ವೃಷ್ಣನಾಥನ ಕಥೆಯ ವರಸುಧಾರಸದಲಿ
ತೃಷ್ಣೆ ತಾ ಬಹುವಾಗಿ ತೊಡರೆ ನುಡಿದಿರಲು॥
ಕವನ ಶಾಸ್ತ್ರವನ್ನೊಮ್ಮೆ ಕಂಡು ಕೇಳ್ದವನಲ್ಲ
ಕವಿಜನರ ಸಂಗದಲಿ ಕೂಡಿದ್ದುದಿಲ್ಲ
ಅವರ ಮರ್ಮವನೊಮ್ಮೆ ಕಂಡು ಕೇಳ್ದವನಲ್ಲ
ತವಕದಲಿ ಬಹು ಕಥೆಯು ತಾ ಬಂದು ನಡೆದಿಹುದು॥
ವರಕವಿತ್ವವಿದೆನಲು ಒಳಗೆ ದೋಷಗಳಿರಲು।
ನರನ ನಿರ್ಮಿತವೆನಲು ನಿಜಶಕ್ತಿ ಕಿರಿದು।
ಗುರುತರದ ಭಾಗವತ ಗೂಢದರ್ಥಗಳೆಲ್ಲ
ಸ್ಫುರಿಸಿ ತೋರಿಹುದಿದನು ಸರ್ವಜ್ಞರರಿಯುವರು॥
ಕನ್ನಡದ ಭಾಷೆಯಲ್ಲಿ ಕುರುಹಿಟ್ಟುವರ್ಣಗಳ।
ಸನ್ನುತನ ಸತ್ಕಥೆಯು ಸಾಗಿಬಂದಿಹುದು।
ಮುನ್ನಭಕ್ತರು ಮಾಡ್ದ ಮುಖ್ಯ ಪಲ್ಲವಪದದ
ಸನ್ನೆಯೊಂದೇ ಸಿದ್ಧ ಸಾಧನದಿ ನಡೆಸಿದನು॥
ಆದ್ದರಿಂದಲೇ ಕೃತಿಯೊಳಾವ ತಪ್ಪಿದ್ದಡೆಯು।
ಯದುವರನ ಕಥೆಯೆಂದು ಯೆಲ್ಲ ಕವಿಜನರು
ಹೃದಯದಲಿ ದಯವಿಟ್ಟು ಹರುಷದಿದಾಲಿಪುದು
ತೊದಲನುಡಿ ಶಿಶುವನ್ನು ಕರೆದು ಲಾಲಿಸುವಂತೆ॥”[೧೩]

ಈ ರೀತಿ ಇಡೀ ಕೀರ್ತನೆಯಲ್ಲಿ ತಿಮ್ಮಪ್ಪದಾಸರ ವಿನಯವನ್ನು ಕಾಣಬಹುದಾಗಿದೆ.

ಶ್ರೀ ಕೃಷ್ಣಬಾಲಲೀಲೆಯ ಪ್ರತಿಯೊಂದು ಕೀರ್ತನೆಯ ಪಲ್ಲವಿ ಮತ್ತು ನುಡಿಗಳನ್ನು ಒಳಗೊಂಡಿದ್ದು ರಾಗತಾಳ ಸಹಿತವಾಗಿದೆ. ಪ್ರತಿಕೀರ್ತನೆಯೂ ಕನಿಷ್ಟ ೨ ರಿಂದ ಗರಿಷ್ಟ ೬೩ ನುಡಿಗಳನ್ನು ಒಳಗೊಂಡಿದೆ. ಸಂಪುಟ ೨ ರ ೬೧ನೆಯ ಕೀರ್ತನೆ ೭ ನುಡಿಗಳಿದ್ದರೂ ಪ್ರತಿ ನುಡಿಯು ೨೮ ಸಾಲುಗಳನ್ನು ಹೊಂದಿದೆ. ಹಾಗೆ ೫೦ ನೆಯ ಕೀರ್ತನೆ ಪ್ರತಿನುಡಿಗಳಲ್ಲಿ ೮ ಸಾಲುಗಳಿರುವ ೫೨

ನುಡಿಗಳ ಸುದೀರ್ಘವಾದ ಕೀರ್ತನೆಯಾಗಿದೆ. 'ಭ್ರಮರಗೀತೆ' ಎಂಬ ಈ ಕೀರ್ತನೆ ತಿಮ್ಮಪ್ಪದಾಸರ ಒಂದು ವಿಶಿಷ್ಟ ಕಲ್ಪನೆಯಾಗಿದೆ.

ತಿಮ್ಮಪ್ಪದಾಸರಿಗೆ ತಮ್ಮದು ಕವಿತೆ ತಾವು ಕವಿ ಎಂಬ ಅರಿವಿದ್ದರು 'ಬಾಲಲೀಲೆ' ಲಕ್ಷಣಬದ್ಧವಾದ ಕೃತಿಯಾಗಿರದೆ ಕೀರ್ತನೆಗಳ ರೂಪದಲ್ಲಿ ಅವರು ರಚಿಸಿರುವುದರಿಂದ ಆ ಪ್ರಕಾರದಲ್ಲಿ ಅವರಿಗಿದ್ದ ಸ್ವಾತಂತ್ರ್ಯ ಮತ್ತು ವೈಲಕ್ಷಣಗಳನ್ನು ಅವರೇ ಹೇಳಕೊಂಡಿದ್ದಾರೆ. ಇವರ ಕೀರ್ತನ ರಚನೆಗೆ ಪೂರ್ವದ ಭಕ್ತಕವಿಗಳ ರಚನೆಗಳೇ ಮಾದರಿಯಾಗಿವೆ.

ಕನ್ನಡದ ಭಾಷೆಯಲಿ ಕುರುಹಿಟ್ಟು ವರ್ಣಗಳ
ಸನ್ನುತನ ಸತ್ಕಥೆಯು ಸಾಗಿಬಂದಿಹುದು
ಮುನ್ನ ಭಕ್ತರು ದೊಡ್ಡ ಮುಖ್ಯ ಪಲ್ಲವಪದದ
ಸನ್ನೆಯೊಂದೇ ಸಿದ್ಧಸಾಧನದಿ ನಡೆಸಿದನು.

ಎಂದು ಹೇಳಿದ್ದಾರೆ. ಆದರೆ ಹಿಂದಿನವರ ಕೀರ್ತನೆಗಳಲ್ಲಿ ಪಲ್ಲವಿ ಅನುಪಲ್ಲವಿ ಸಾಮಾನ್ಯ ಆದರೆ ಇವರ ಕೀರ್ತನೆಗಳಲ್ಲಿ ಅನುಪಲ್ಲವಿಯಿಲ್ಲ. ಪಲ್ಲವಿಯಲ್ಲಿ ಎರಡುಪಾದಗಳು ಅಥವಾ ನಾಲ್ಕು ಪಾದಗಳಿವೆ.

ಆ) ಅರ್ಚನ:

ತಿಮ್ಮಪ್ಪದಾಸರ 'ಪೂಜಾವಿಧಾನದ ಕೀರ್ತನೆ'ಗಳನ್ನು ಎಂ.ವಿ.ಸೀ ಯವರು ಅರ್ಚನ ಎಂಬ ಹೆಸರಿನಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ೧೦೮ ಪೂಜಾವಿಧಾನದ ಕೀರ್ತನೆಗಳನ್ನು ಒಳಗೊಂಡಿದೆ. ಕೀರ್ತನಕಾರರ ಹೆಸರನ್ನು ಚರ್ಚಿಸುತ್ತಾ ಎಂ.ವಿ.ಸೀ ಅವರು ತಿಮ್ಮಪ್ಪದಾಸರ ನಿಜನಾಮ ತಿಮ್ಮಪ್ಪಯ್ಯ ಆದರೆ ಕೆಲವು ಕೃತಿಗಳಲ್ಲಿ ತಿಂಮದಾಸ, ತರಳ ತಿಂಮದಾಸ ಎಂದಿದೆ. ಅಲ್ಲದೆ ಹೊನ್ನಪ್ಪ ಎಂಬ ಅಡ್ಡ ಹೆಸರೂ ಇದ್ದಿರಬಹುದು. "ಹೊಸತೆ ನಿನಗೆ ಹೊನ್ನಾಂಬಾ ನಿನ್ನಾ ಹೆಸರಿನ ಸುತನು ಹೊನ್ನಾಂಬ"[೧೪] ಎನ್ನುವ ಕೀರ್ತನೆಯ ಸಾಲನ್ನು ಉಲ್ಲೇಖಿಸುತ್ತಾರೆ. ಇದು ತಿಮ್ಮಪ್ಪದಾಸ ಎನ್ನುವುದಕ್ಕೆ ಪುಷ್ಟಿ ನೀಡುತ್ತದೆ.

ತಿಮ್ಮಪದಾಸರ ಸ್ಥಳ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಸಂಪಾದಕರು ಇದನ್ನು 'ತಮ್ಮ ಪೂರ್ವಜರು ಚಿಕ್ಕನಾಯಕನ ಹಳ್ಳಿಯಿಂದ ಬಂದವರು' ಎಂಬ ವಂಶಸ್ಥರ ಹೇಳಿಕೆ, ಕೆಲವು ಕೃತಿಗಳಲ್ಲಿನ ಅವರ ಊರಿನ ಸಂಸ್ಕೃತರೂಪದ ಕ್ಷೇತ್ರ ಮುದ್ರಿಕೆಯಿಂದ, ದಾಸರ ಎರಡನೆಯಮಗ ವೆಂಕಟರಮಣದಾಸರ ಗೃಹಕೃತ್ಯದ ಲೆಕ್ಕಪುಸ್ತಕದಲ್ಲಿನ ಸ್ವಹಸ್ತಾಕ್ಷರಗಳಿಂದ, ಇವರ ವಂಶಕ್ಕೆ ಸೇರಿದ ದಾಸರ ಪೂಜಾವಿಧಾನದ ಕೀರ್ತನೆಗಳಲ್ಲಿ ಕೆಲವು ಇಂದಿಗೂ ಮುಖ್ಯವಾಗಿಯೂ, ಗ್ರಂಥಸ್ಥವಾಗಿಯೂ ಉಳಿದಿರುವುದರಿಂದ, ಅಲ್ಲದೆ ತಿಮ್ಮಪ್ಪದಾಸರು ತಮ್ಮ ಕೀರ್ತನೆಗಳಲ್ಲಿ ಚಿಕ್ಕನಾಯಕನ ಹಳ್ಳಿಯ ಸಮೀಪದ ಶಿವಗಂಗೆಯ ಗಂಗಾಧರನನ್ನು ಸ್ತೋತ್ರ ಮಾಡಿರುವ ಅಂಶಗಳಿಂದ ನಿರ್ಧರಿಸಿದ್ದಾರೆ.

ತಿಮ್ಮಪ್ಪದಾಸರು ಮುಮ್ಮಡಿ ಕೃಷ್ಣರಾಜಒಡೆಯರ ಕಾಲದಲ್ಲಿ ಜೀವಿಸಿದ್ದರೆಂದು ಹೇಳಲು ಆಧಾರಗಳಿವೆ. ಇವರ ವಂಶಸ್ಥರ ಹೇಳಿಕೆ ಜೊತೆಗೆ ಜಾತಕದ ಕುಂಡಲಿ ಬರೆದಿದ್ದ ಒಂಟಿ ಒಲೆಗರಿಯಲ್ಲಿ ತಿಮ್ಮಪ್ಪದಾಸರ ಜೇಷ್ಟಪುತ್ರನ ಜಾತಕ ದೊರತಿದ್ದು "ಶಾಲಿವಾಹನ ಶಕಾಬ್ಧಂಗಳಲ್ಲಿ ೧೭೪೪ನೇ ಸಂದ ಚಿತ್ರಭಾನು ಸಂವತ್ಸರದ ಮಾಘ ಬಹುಳ ೩೦ ಮಂಗಳವಾರ ಚಿರಂಜೀವಿ ತಿಮ್ಮಪ್ಪಯ್ಯನ ಜೇಷ್ಟ ಪುತ್ರ ನಾರಾಯಣನ ಜನನ" ಎಂದಿದೆ ಈ ಅಂಶಗಳಿಂದ ಸಂಪಾದಕರು ತಿಮ್ಮಪ್ಪದಾಸರ ಕಾಲವನ್ನು ಕ್ರಿ.ಶ೧೭೭೦-೧೮೬೦ ಎಂದು ನಿರ್ಧರಿಸಿದ್ದಾರೆ. ತಿಮ್ಮಪ್ಪದಾಸರ ಯಾವುದೇ ಕೃತಿಯ ಹಸ್ತಪ್ರತಿಯಲ್ಲಿ ಅವರ ಕಾಲದ ವಿಚಾರವಾಗಿ ಏನೂ ತಿಳಿದುಬಂದಿಲ್ಲ.

ತಿಮ್ಮಪ್ಪದಾಸರ ಕೃತಿಗಳಿಂದ ಅವರ ತಂದೆತಾಯಿಗಳ ವಿಚಾರವಾಗಿ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ತಂದೆಯ ಹೆಸರು ನಾರಾಯಣ ತಾಯಿಯ ಹೆಸರು ಚೆನ್ನಮ್ಮ ಎಂದು ಒಂದು ಕೀರ್ತನೆಯಿಂದ ತಿಳಿದು ಬರುತ್ತದೆಂದು ಸಂಪಾದಕರು ಹೇಳಿದ್ದಾರೆ.

ತಂದೆ ತಾಯಿಗಳ ಬಗೆಗೆ ದಾಸರ ಅಭಿಪ್ರಾಯವನ್ನು ತಿಳಿಸುವ ಒಂದು ಕೀರ್ತನೆಯ ಕೆಲವು ಸಾಲುಗಳನ್ನು ಗಮನಿಸಬಹುದು.

"ಪ್ರಾರಬ್ಧನೆ ನಿನಗೊಪ್ಪಿದ ತನುವಿದ। ನಾರೈದುಳಿಸು ಕೆಡಿಸು ನಿನ್ನ ಮನಸು।
ಹಾರೈಸಲಾರದೆ ಹಲವು ದೈವಗಳನ್ನು। ಸೇರಿದೆ ಶ್ರೀ ವಾಸುದೇವಾರ್ಯ ಪದವನ್ನು॥ಪ॥
ಎರೆದು ಪಾಲ್ದುಪ್ಪವ ಹೊರೆದನೆನ್ನುತ ತಾಯಿ।
ಪರಲೋಕ ಸಾಧಕವೆನುತ ಸಂಸ್ಕಾರಗಳ।
ವಿರಚಿಸಿ ತಂದೆಯ ಬೆರೆತಿರಲವರೊಳ।
ನಿರದಂತೆ ತೊಲಗಿಸಿ ಬರೆದೆಳೆಕೊಂಡಂಥ।
ನೀನಿತ್ತಡಗ್ನಿಗೆ ಪುಲಿಗೆ ಚೋರಗೆ ಸುತ।
ಗಾನುಕೂಲದ ಪತಿಗಯ್ಯಗಮಗೆನೆಗೆ।
ನೀನಯ್ಯದಿರಲಾರಿಗಿಲ್ಲಂದು ಗುರುವರ್ಯ।
ತಾನೆ ಬೋಧಿಸುತೆನ್ನ ವಿಂಗಡಿಸಿದನಾಗಿ।
ಬಾಗರೆದರೆ ಬೆಳೆದಂಜಿಪೆ ತೊರೆದರೆ
ಬೀಗುವೆ ನೀನೆಂದು ತಿಳಿದೀಗ ನಾಚಿಕ್ಕ।
ನಾಗಪುರದಿ ಗುರುವಾಸುದೇವಾರ್ಯರ।
ಬೇಗದಿಂ ಸೇರಿ ಬೆರೆದೆನಂಜೆ ನಿನಗಿನ್ನು।"[೧೫]

ಮೇಲಿನ ಪದ್ಯಗಳಿಂದ ಪ್ರಾರಬ್ಧಕರ್ಮದ ಪ್ರಭಾವವನ್ನು ಎದುರಿಸಿ ತಂದೆ-ತಾಯಿ, ಹೆಂಡತಿ-ಮಕ್ಕಳು(ಸುತ) ಇವರನ್ನು ತೊರೆದು ಗುರುವಾಸುದೇವಾರ್ಯರ ಮಹಿಮೆಯಿಂದ ಆಕರ್ಷಿತವಾಗಿ ಚಿಕ್ಕನಾಗಪುರಕ್ಕೆ ದಾಸರು ಹೋಗಿರಬಹುದೆಂದು ಊಹಿಸಲು ಅವಕಾಶವಿದೆ.

"ತಿಮ್ಮಪ್ಪದಾಸರ ಗುರುಗಳು ವಾಸುದೇವಾರ್ಯರು ಗುರುಸ್ತುತಿ ಪರವಾದ ಅವರ ಅನೇಕ ಕೀರ್ತನೆಗಳು ಲಭ್ಯವಾಗಿವೆ. ಚಿಕ್ಕನಾಯಕನ ಹಳ್ಳಿಯ ಜನರ ಹೇಳಿಕೆಗಳಿಂದಲೂ, ತಿಮ್ಮಪ್ಪದಾಸರ

ಕೃತಿಗಳ ಆಧಾರದಿಂದಲೂ, ಇತರ ಕೆಲವು ಆಧಾರಗಳಿಂದಲೂ ವಾಸುದೇವಾರ್ಯರು ಅವರ ಕಾಲದಲ್ಲಿ ಒಬ್ಬ ಮಹಿಮಾ ಪುರುಷರಾಗಿದ್ದರೆಂದು ತಿಳಿದುಬರುತ್ತದೆ"[೧೬] ತಿಮ್ಮಪ್ಪದಾಸರ ಕಾಲದ ಆಧಾರದ ಮೇಲೆ ಸಂಪಾದಕರು ವಾಸುದೇವಾರ್ಯರು ಸುಮಾರು ೧೭೨೫ ರಿಂದ ೧೭೯೦ರ ನಡುವೆ ಜೀವಿಸಿದ್ದರೆಂದು ವಾದಿಸಿದ್ದಾರೆ.

ಗುರು ವಾಸುದೇವಾರ್ಯರ ಪ್ರಭಾವ ತಿಮ್ಮಪ್ಪದಾಸರನ್ನು ಒಬ್ಬ ಭಕ್ತನನ್ನಾಗಿ ಸಾಧಕನನ್ನಾಗಿ ಮಾಡಿದೆ. ಅವರ ಕೃತಿಗಳ ರಚನೆಗೆ ಸ್ಫೂರ್ತಿಯ ಸೆಲೆಯಾಗಿದೆ. ತಿಮ್ಮಪ್ಪದಾಸರು ತಮ್ಮ ಸಂಸ್ಕೃತ ರಚನೆಯೊಂದರಲ್ಲಿ ಗುರುಮೂರ್ತಿಯ ವ್ಯಕ್ತಿತ್ವವನ್ನು ನಿರೂಪಿಸಿದ್ದಾರೆ.

"ರಾಗರಹಿತ ಮಹಾಗಮಜ್ಞ ವಿರಾಗಿಜನ ಸಂಸೇವಿತ ಯೋಗಿಸಂಘಾರಾಧ್ಯಪದ ಚಿಕ್‌ನಾಗನಗರ ನಿಕೇತನ ವಾಗಮೃತ ಜೀವಿತ ಭವಾಮಯ ಭೋಗಮೂರ್ಛಿತ ಬಹುಜನ ಶ್ರೀಗುರೋ ವಾಸುದೇವ ಯತಿವರ ಸ್ವಾಗತಂ ತೇ ಸುಖಕರ"[೧೭]

ವಾಸುದೇವಾರ್ಯರಲ್ಲದೆ ತಿಮ್ಮಪ್ಪದಾಸರಿಗೆ ರಾಮಕೃಷ್ಣಾರ್ಯರು, ನೀಲಕಂಠಾರ್ಯರು ಎಂಬ ಗುರುಗಳಿದ್ದುದು ಅರ್ಚನ ಗ್ರಂಥದ ಕೀರ್ತನೆ ೪, ೫, ೬, ೭ ರಿಂದ ನಿರೂಪಿತವಾಗಿದೆ. ಆದರೆ ವಾಸುದೇವಾರ್ಯರ ಪ್ರಭಾವ ಬೀರಿದಷ್ಟು ಇವರಿಬ್ಬರ ಪ್ರಭಾವ ತಿಮ್ಮಪ್ಪದಾಸರ ಮೇಲಾಗಿಲ್ಲ. ಇವರಿಬ್ಬರಲ್ಲದೆ ವೆಂಕಟದಾಸಾರ್ಯ, ಕೃಷ್ಣ ಯೋಗೀಂದ್ರ, ನರಸಾರ್ಯ, ನಾರಾಯಣಾಚಾರ್ಯ, ಗೋಪಾಲಾರ್ಯ, ಇವರುಗಳನ್ನು ಕೂಡ ತಿಮ್ಮಪ್ಪದಾಸರು ಸ್ತುತಿಸಿದ್ದಾರೆ.

"ಅರ್ಚನ ಗ್ರಂಥದ ಕೀರ್ತನೆ ೭೮ ರ ೩ನೆಯ ನುಡಿ ಪಂಡಿತತ್ವಾಭಿಮಾನ, ಕೀ–೭೯ರ ೧ನೆಯ ನುಡಿಯಲ್ಲಿನ ವಿದ್ಯದಲ್ಲಿ ನಿರ್ಬಂಧವಾಯಿತು, ಕೀ–೧೦೧–ರ೨ನೆಯ ನುಡಿಯಲ್ಲಿನ ವಿದ್ಯವಿಸ್ತರವಾದರದ್ದು ವದು ಗರ್ವದಲಿ–ಇವುಗಳ ಉಲ್ಲೇಖ; ಸಂಸ್ಕೃತದಲ್ಲಿ ಕೃತಿ ರಚನಾಸಾಮರ್ಥ್ಯ, ಭಾಷಾ ಶೈಲಿಯ ಪ್ರೌಡುಮೆ, ವೇದ, ಉಪನಿಷತ್ತು, ಭಗವದ್ಗೀತೆ, ಭಾಗವತ ಮುಂತಾದ ಗ್ರಂಥಗಳ ಪರಿಚಯವಿದ್ದು ತಿಮ್ಮಪ್ಪದಾಸರು ಹುಟ್ಟು ಕವಿಯಾಗಿದ್ದರ ಜೊತೆಗೆ ನಾನಾ ಶಾಸ್ತ್ರಗಳಲ್ಲಿ ಪಾರಂಗತವಾದ ವಿದ್ವಾಂಸರೂ ಆಗಿದ್ದರೆಂದು ಹೇಳಬಹುದು.

ತಿಮ್ಮಪ್ಪದಾಸರ ವಂಶಸ್ಥರು ಹರಿತಸಗೋತ್ರನ್ವಿತ ಸ್ಮಾರ್ತ ಬ್ರಾಹ್ಮಣ ಕಮ್ಮೆಕುಲದ 'ಬಬ್ಬೂರು ಕಮ್ಮೆ' ಎಂಬ ಉಪಪಂಗಡಕ್ಕೆ ಸೇರಿದವರು. ಆದ್ದರಿಂದ ತಿಮ್ಮಪ್ಪದಾಸರ ಮತದ ಬಗೆಗೆ

ಸಂದೇಹವಿಲ್ಲ. ತಿಮ್ಮಪ್ಪದಾಸರ ಕೃತಿಗಳನ್ನು ಪರಿಶೀಲಿಸಿದಾಗ ಅದ್ವೈತಕ್ಕೆ ಅವಿರೋಧವಾದ ಭಾಗವತ ಧರ್ಮವನ್ನು ಇವರು ಅನುಸರಿಸುತ್ತಿದ್ದರೆಂಬುದು ತಿಳಿಯುತ್ತದೆ".[೧೮]

ತಿಮ್ಮಪ್ಪದಾಸರ ವಂಶಜರ ಬಳಿ ಇದ್ದ ಹಸ್ತಪ್ರತಿಗಳನ್ನೆಲ್ಲ ಸಂಗ್ರಹಿಸಿ ಪರಿಶೋಧಿಸಿದ ಮೇಲೆ ತಿಮ್ಮಪ್ಪದಾಸರಿಂದ ರಚಿತವಾದ ಕೃತಿಗಳು ದೊರೆಯುತ್ತವೆ ಅವುಗಳು

೧. ಪೂಜಾವಿಧಾನ ಕೀರ್ತನೆಗಳು (೧೦೮)

೨. ಗುರುಸ್ತುತಿಪರ ಕೀರ್ತನೆಗಳು

೩. ಸದ್ಗುರು ಬೋಧಾನುವಾದ ಸುಧೆ (ಕೀರ್ತನೆಗಳು)

೪. ಆತ್ಮನಿವೇದನೆ ಮುಂತಾದ ಸಂಕೀರ್ಣ ವಿಷಯದ ಕೀರ್ತನೆಗಳು

೫. ಶ್ರೀ ಕೃಷ್ಣ ಬಾಲಲೀಲೆ ಮತ್ತುಬಾ ಅಕ್ರೂರ ಪ್ರಕರಣ (ಕೀರ್ತನೆಗಳು)

೬. ಜೀವಕಾಯ ಸಂವಾದ ವೈರಾಗ್ಯಪರ ಕೀರ್ತನೆಗಳು ಮತ್ತು ಕರದ ಪದ್ಯಗಳು (ಅಸಮಗ್ರಕೃತಿ)

೭. ಧ್ರುವ ಚರಿತ್ರೆ (ಸಾಂಗತ್ಯ ಛಂದಸ್ಸಿನ ಕಾವ್ಯ)

೮. ಪರಬ್ರಹ್ಮ ಪ್ರಕಾಶಕೆ (ಗದ್ಯರೂಪದಲ್ಲಿರುವ ವೇದಾಂತ ವಿಷಯ ಪ್ರಕರಣ ಗ್ರಂಥ)

೯. ಭಗವದ್ವಿಲಾಸದಾಟ (ಅಸಮಗ್ರ ಗದ್ಯ ಗ್ರಂಥ)

ಇವುಗಳ ಜೊತೆಗೆ ಇತ್ತೀಚೆಗೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಎರಡು ಹಸ್ತಪ್ರತಿಗಳಲ್ಲಿ ಕೆ.ಬಿ.೨೦೪ ಮತ್ತು ಕೆ.೫೫೪ ತಿಮ್ಮಪ್ಪದಾಸರಿಂದ ರಚಿತವಾದ 'ಭಾಗವತ ಕೀರ್ತನೆಗಳು' ಮತ್ತು ರಾಗ ನಿರ್ದೇಶವುಳ್ಳ ಕಂದ, ಭಾಮಿನೀ, ಷಟ್ಪದಿ, ವಾರ್ದಕ ಷಟ್ಪದಿ, ಈ ಛಂದಸ್ಸುಗಳಲ್ಲಿರುವ 'ಉದ್ಯೋಗಪರ್ವದ ಭಾರತದ ಕಥೆ' (ಹಸ್ತ ಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿ ಇದನ್ನು 'ಕೃಷ್ಣ ಸಂವಾದ ಕೀರ್ತನೆಗಳು' ಎಂದು ಕರೆದಿದೆ) ಸೇರ್ಪಡೆಯಾಗಿದೆ.

ಪೂಜಾವಿಧಾನದ ಕೀರ್ತನೆಗಳ ಕರ್ತೃ ತಿಮ್ಮಪ್ಪದಾಸರೆ. ಈ ಗ್ರಂಥದ ಪೂಜಾವಿಧಾನದ ಕೀರ್ತನೆಗಳು ಲಿಖಿತವಾಗಿರುವ ಕಾಗದದ ಹಸ್ತಪ್ರತಿಯಲ್ಲೂ (ಗ), ತಾಡಪತ್ರದ (ಕ) ಹಸ್ತ ಪ್ರತಿಯಲ್ಲೂ, ಸ್ಥಳನಾಮಗುರುನಾಮ, ಇಷ್ಟದೇವತಾನಾಮಗಳು ಕೀರ್ತನ ಮುದ್ರಿಕೆಗಳಾಗಿ ಪ್ರಯುಕ್ತವಾಗಿವೆ. ಆದ್ದರಿಂದ ಈ ಪೂಜಾವಿಧಾನದ ಕೀರ್ತನೆಗಳಲ್ಲಿ ಸ್ವನಾಮದ ಅಂಕಿತವಿಲ್ಲದಿದ್ದರೂ

'ಪೀಠಸಮರ್ಪಣೆ' ಮತ್ತು 'ಸಾಸಿರನಾಮ ಪೂಜೆ'ಯ ಕೀರ್ತನೆಗಳಲ್ಲಿ 'ತಿರುಪತಿಯೊಡೆಯ ಶ್ರೀ ವಾಸುದೇವಾರ್ಯ ಗುರುವಾಗಿ ಕಾವೇರಿ ತೀರದಲಿ ಕರುಣದಿಂದಲಿ ಪಾದುಕೆಗಳನಿತ್ತ ಭಾಗ್ಯ"ದ ಉಲ್ಲೇಖವೂ ಇನ್ನುಳಿದ ಕೆಲವು ಕೀರ್ತನೆಗಳಲ್ಲಿ ಗುರು ಮತ್ತು ಇಷ್ಟ ದೈವದ ನಡುವೆ ಅಬೇದ ಕಲ್ಪನೆಯೂ ಮೂಡಿ ಬಂದಿದೆ.

ಉದಾ: ಕೀರ್ತನೆ-೬೩, ೮೦, ೮೩, ೮೪, ೯೦, ೯೨ ಇತ್ಯಾದಿ ಕೆಲವು ಕೀರ್ತನೆಗಳಲ್ಲಿ ಇಷ್ಟದೇವತಾ ನಾಮವೊಂದೇ ಇದೆ. ಎಲ್ಲಾ ಕೀರ್ತನೆಗಳು ಇಷ್ಟ ದೇವತಾಸ್ಮರಣೆಯೊಂದಿಗೆ ಕೊನೆಗೊಳ್ಳುತ್ತವೆ. ಇವು ಪೂಜಾವಿಧಾನದ ಕೀರ್ತನೆಗಳ ಕರ್ತೃ ತಿಮ್ಮಪ್ಪದಾಸರೆಂದು ಸ್ಪಷ್ಟಪಡಿಸುತ್ತದೆ.

ಎಂ.ವಿ.ಸೀ ಯವರ ಮುತ್ತಾತ ತಿಮ್ಮಪ್ಪದಾಸರು. ಇವರು ಸಂತರು ಹೆಸರಾಂತ ಸಂಸ್ಕೃತ ವಿದ್ವಾಂಸರು ಇವರ ಮುತ್ತಾತ ವಾಸುದೇವಾರ್ಯರು ಇವರ ಕೃತಿ 'ವಾಸುದೇವ ಮನನ' (ದೇವರನಾಮಗಳು) ಇವುಗಳನ್ನೇ ಎಂ.ವಿ.ಸೀ ಅರ್ಚನ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಎಂ.ವಿ.ಸೀಯವರ ಸೋದರತ್ತೆ ತಾವು ಹೋಗುತ್ತಿದ್ದ ಹರಿಕತೆಗಳಿಗೆ, ಗೋವಿಂದದಾಸರ ಕುಣಿತ, ಬಯಲಾಟಗಳಿಗೆ, ಕರೆದುಕೊಂಡು ಹೋಗುತ್ತಿದ್ದರು. ಅಲ್ಲದೆ ಹರಿಕಥಾ ಸಪ್ತಾಹವನ್ನು ಎಂ.ವಿ.ಸೀ ಯವರ ತಂದೆ ಏರ್ಪಡಿಸಿದ್ದರು. ಅಲ್ಲದೆ ಹರಿದಾಸರ ಕೀರ್ತನೆಗಳು ಕಿವಿಗೆ ಬೀಳದ ದಿನಗಳೇ ಇರುತ್ತಿರಲಿಲ್ಲ. ಮನೆಯಲ್ಲಿ ಅವರ ತಂದೆ ಮತ್ತು ದೊಡ್ಡಪ್ಪ ಪ್ರತಿಶನಿವಾರ ಭಜನೆಮಾಡುತ್ತಿದ್ದರು. ಪೂಜಾವಿಧಾನದ ಕೀರ್ತನೆಗಳನ್ನು ಹಾಡುತ್ತಿದ್ದರು. ಇವು ಅರ್ಚನ ಗ್ರಂಥ ಹೊರಬರಲು ಪ್ರೇರಣೆ ನೀಡಿವೆ.

೩) ಕೀರ್ತನ ಕುಸುಮಾಂಜಲಿ

ಕೀರ್ತನ ಕುಸುಮಾಂಜಲಿ ಕೃತಿಯ ಕರ್ತೃ ವಾಗ್ಗೇಯಕಾರ ತಿಮ್ಮಪ್ಪದಾಸರ ಜೇಷ್ಠ ಪುತ್ರ ನಾರಾಯಣದಾಸರು. "ತಿಮ್ಮಪ್ಪದಾಸರ 'ಪೂಜಾವಿಧಾನ ಕೀರ್ತನೆಗಳು' ಮತ್ತು ಅವರ ಇತರ ಹಲವಾರು ರಚನೆಗಳು ಲಿಖಿತವಾಗಿರುವ ಕಾಗದದ ಹಸ್ತಪ್ರತಿಯಲ್ಲಿ ನಾರಾಯಣದಾಸರು ೩೭ ಕೀರ್ತನೆಗಳು ದೊರಕುತ್ತವೆ". ಎಂದು ಎಂ.ವಿ.ಸೀ ಅವರೆ ಶೋಧಿಸಿ ಅವುಗಳನ್ನೇ ಎಂ.ವಿ.ಸೀಯವರು 'ಕೀರ್ತನ ಕುಸುಮಾಂಜಲಿ' ಎಂಬ ಹೆಸರಿನಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ಸಾಮಾನ್ಯವಾಗಿ ಈ

ಕೀರ್ತನೆಗಳಲ್ಲಿ ನಾರಾಯಣದಾಸರ ಅಂಕಿತವಿದೆ. ಆದರೆ ಕೆಲವು ಕೀರ್ತನೆಗಳಲ್ಲಿ ಕೇವಲ 'ದಾಸ' ಎಂಬ ಅಂಕಿತವಿರುವುದರಿಂದ ಅವು ತಿಮ್ಮಪ್ಪದಾಸರವೋ, ನಾರಾಯಣದಾಸರವೋ ಎಂಬ ಸಂದೇಹ ಉಂಟಾಗುತ್ತದೆ. ಎಂದು ಅವರೇ ಅನುಮಾನಿಸಿ ಅದಕ್ಕೆ ಸಮರ್ಥನೆಯನ್ನು ಕೊಟ್ಟು ಸ್ಪಷ್ಟಪಡಿಸಿದ್ದಾರೆ. "ಹಸ್ತಪ್ರತಿಯ ೭೩ನೆಯ ಹಾಳೆಯ ಹಿಂಬದಿಯಲ್ಲಿ "ಯಿಲ್ಲಿಂದ ಮುಂದಕ್ಕೆ ನಾರಾಯಣದಾಸರ ಕೃತ ಕೀರ್ತನಾಃ" ಎಂದು ಸ್ಪಷ್ಟ ಉಲ್ಲೇಖವಿರುವುದರಿಂದ ಈ ಸಂದೇಹಕ್ಕೆ ಅವಕಾಶವಿಲ್ಲ. ಎಮ್ದು ಸ್ಪಷ್ಟವಾಗಿ ಅಭಿಪ್ರಾಯ ನಿರೂಪಿಸಿರುವುದು ಎಂ.ವಿ.ಸೀ ಅವರ ಗ್ರಂಥ ಸಂಪಾದನೆಯ ವೈಶಿಷ್ಟ್ಯವಾಗಿದೆ.

ತಿಮ್ಮಪ್ಪದಾಸರ ಮತ್ತು ನಾರಾಯಣದಾಸರ ಕೀರ್ತನೆಗಳು ಅವರವರ ಸ್ವಹಸ್ತಾಕ್ಷರದಲ್ಲಿಯೇ ಲಿಖಿತವಾಗಿದ್ದು ಇಬ್ಬರ ಬರಹಗಳು ಮೇಲು ನೋಟಕ್ಕೆ ಒಂದೆನಿಸಿದರೂ ಅವುಗಳ ನಡುವಿನ ವ್ಯತ್ಯಾಸವನ್ನು ಗುರ್ತಿಸಬಹುದು. ಕೀರ್ತನೆಗಳ ವಸ್ತು, ಭಾಷಾ ಶೈಲಿ ಭಿನ್ನವಾಗಿವೆ. "ಕೇವಲ ದಾಸ ಅಥವಾ ನಾರಾಯಣದಾಸ ಎಂಬ ಅಂಕಿತವಿಲ್ಲದ ಕೀರ್ತನೆಗಳು ಸಹ ಈ ೩೭ ಕೀರ್ತನೆಗಳಲ್ಲಿ ಸೇರಿಕೊಂಡಿವೆ. ಹೀಗಿರುವುದರಿಂದ "ಇಲ್ಲಿಂದ ಮುಂದಕ್ಕೆ ನಾರಾಯಣದಾಸ ಕೃತ ಕೀರ್ತನೆಗಳು"[೧೯] ಎಂಬ ಸ್ಪಷ್ಟೀಕರಣವಿರುವುದರಿಂದ ಇವು ನಾರಾಯಣದಾಸರ ಕೀರ್ತನೆಗಳೆಂದು ಒಪ್ಪಿಕೊಳ್ಳಲು ಯಾವ ಅಡ್ಡಿಯೂ ಇಲ್ಲ.

ತಿಮ್ಮಪ್ಪದಾಸರ ಕೃತಿಗಳು ಲಿಖಿತವಾಗಿದ್ದ ಓಲೆಗರಿಯ ಕಟ್ಟುಗಳನ್ನು ವಿಂಗಡಿಸಿ ಪರಿಶೀಲಿಸಿ ಜೋಪಾನ ಮಾಡಿಡುವ ಸಮಯದಲ್ಲಿ ಜಾತಕದ ಕುಂಡಲಿ ಮತ್ತು ಜನ್ಮವಿವರಗಳನ್ನು ಒಳಗೊಂಡ ಒಂಟಿ ಓಲೆಗರಿಯೊಂದು ಸಿಕ್ಕಿದ್ದು ಅದರಲ್ಲಿ ಬರೆದಿದ್ದ ಜಾತಕ ತಿಮ್ಮಪ್ಪಯ್ಯನ ಜೇಷ್ಠ ಪುತ್ರ ನಾರಾಯಣನದು ಎಂದು ಗೊತ್ತಾಗುತ್ತದೆ. ಪ್ರಸ್ತುತ ಭಾಗ ಈ ರೀತಿಯಿದೆ.

"ಶಾಲಿವಾಹನ ಶಕಾಬ್ಧಂಗಳಲ್ಲಿ ೧೭೪೪ನೇ ಸಂದ ಚಿತ್ರಭಾನು ಸಂವತ್ಸರದ ಮಾಘ ಬಹುಳ ೩೦ ಮಂಗಳವಾರ ಚಿರಂಜೀವಿ ತಿಮ್ಮಪ್ಪಯ್ಯನ ಜೇಷ್ಠ ಪುತ್ರ ನಾರಾಯಣನ ಜನನ"[೨೦] ಇದು ಕ್ರಿ.ಶ.೧೮೨೩ರ ಫೆಬ್ರವರಿ ೧೧ನೆಯ ತಾರೀಕಿಗೆ ಸರಿಹೋಗುತ್ತದೆ.

"ತಿಮ್ಮಪ್ಪದಾಸರ ಎರಡನೆಯ ಪುತ್ರ ವೆಂಕಟರಮಣದಾಸರು ಬರೆದಿಟ್ಟಿರುವ ಗೃಹಕೃತ್ಯದ ಲೆಕ್ಕಪುಸ್ತಕದಲ್ಲಿ, ವಿಭವ ಸಂವತ್ಸರಕ್ಕೆ ಸಂಬಂಧಪಟ್ಟ ಒಂದು ದಾಖಲೆಯಲ್ಲಿ,

ಚಿಕ್ಕನಾಯಕನಹಳ್ಳಿಯಲ್ಲಿದ್ದ ಪಿತ್ರಾರ್ಜಿತ ಆಸ್ತಿಯಿಂದ ಬಂದ ಗುತ್ತಿಗೆಯ ಆದಾಯದ ಹಣ ರೂ ೫೦.೦೦ ಅಣ್ಣಯ್ಯನವರಿಗೆ ಅನುಭವ ಎಂದು ಬರೆದಿದೆ. ಈ ವಿಭವ ಸಂವತ್ಸರ ಕ್ರಿ.ಶ.೧೮೭೮-೭೯ಕ್ಕೆ ಸರಿಹೋಗುತ್ತದೆ".[೨೧]

ಕೀರ್ತನ ಕುಸುಮಾಂಜಲಿ ಗ್ರಂಥದ ೩೨ನೆಯ ಕೀರ್ತನೆಯಲ್ಲಿ ನವರಾತ್ರಿಯುತ್ಸವದ ಬಗ್ಗೆ ಬೇಡಿಕೊಂಡಿದ್ದಾರೆ. ಆ ಕೀರ್ತನೆ ಹೀಗಿದೆ.

"ಚಾಮುಂಡೇಶ್ವರಿ ಪಾಲಿಸು ಬೇಗದಿಂ
ಚಾಮರಾಜೇಂದ್ರ ನೃಪನ
ಪ್ರೇಮದಿಂ ರಾಜ್ಯಾಭಿಷೇಕವ ಮಾಡಿಸಿ
ಈ ಮಹಿಯನ್ನೀತನಿಂದಾಳಿಸು ತಾಯಿ ॥ಪಲ್ಲವಿ॥
ನವರಾತ್ರಿಯ ಬಂತೆನ್ನುವ ಜನಗಳು
ತವಕಿಸುತಿಹರಮ್ಮ
ಅವನೀಶಾಧಿಪನ ಸಿಂಹಾಸನವೇರಿಸಿ
ನವರಾತ್ರಿಯುತ್ಸವವಂ ಮಾಡಿಸು ತಾಯೆ." [೨೨]

ಇನ್ನೊಂದು ಕೀರ್ತನೆಯಲ್ಲಿ

"ನಿನ್ನಸನ್ನಿಧಿಗೆ ನಾ ಬಂದು ಪ್ರಾರ್ಥಿಸೆ
ಪ್ರಸನ್ನಳಾಗಿ ನೃಪನ
ರನ್ನದ ಸಿಂಹಾಸನವೇರಿಸಿ ಎನ
ಗುನ್ನತೋನ್ನತವಾದಾನಂದವನಿತ್ತೆ"

ಎಂದು ಚಾಮರಾಜಒಡೆಯರಿಗೆ ಪಟ್ಟಾಭಿಷೇಕವಾದ ಸಂದರ್ಭವನ್ನು ಉಲ್ಲೇಖಿಸಿದ್ದಾರೆ.

ಕೀರ್ತನೆ ೩೪, ೩೫, ೩೬ ರಲ್ಲಿ ಚಾಮರಾಜ ಒಡೆಯರನ್ನು ರಕ್ಷಿಸಬೇಕೆಂದು ದೇವಿಯನ್ನು, ಶ್ರೀರಾಮನನ್ನೂ, ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯನ್ನೂ ಪ್ರಾರ್ಥಿಸಿದ್ದಾರೆ.

೩೭ನೆಯ ಮಂಗಳ ಕೀರ್ತನೆಯಲ್ಲಿ

"ನವರಾತ್ರೋತ್ಸವದಿಂದಾನಂದಭರಿತಳಾಗಿ

ನಲಿಯುತಂಬಾವಿಲಾಸದ ಮಧ್ಯದೊಳಗೆ
ಅವನೀಶಾಧಿಪ ಕೃಷ್ಣನೃಪತಿಗೆ
ವರಗಳ ತವಕದಿಂದೀವ ಶ್ರೀಗೌರಿಗೆ"[೨೩]

ಈ ಕೀರ್ತನೆಯಲ್ಲಿ ಉಲ್ಲೇಖಿತವಾಗಿರುವ ಕೃಷ್ಣನೃಪತಿ ನಾಲ್ವಡಿ ಕೃಷ್ಣರಾಜ ಒಡೆಯರು, ಇವರು ೧೯೦೨ರಲ್ಲಿ ಪಟ್ಟಕ್ಕೆ ಬಂದರು.

ಈ ಮೇಲಿನ ಎಲ್ಲಾ ಅಂಶಗಳ ಆಧಾರದಿಂದ ಸಂಪಾದಕರು ನಾರಾಯಣದಾಸರ ಕಾಲ ಕ್ರಿ.ಶ.೧೮೨೩-೧೯೦೨ ಎಂದು ನಿರ್ಧರಿಸಿದ್ದಾರೆ.

ನಾರಾಯಣದಾಸರು ತಮ್ಮ ತಂದೆಯ ಕೀರ್ತನೆಗಳಲ್ಲಿಯ ಮೇಲುಪಂಕ್ತಿಯನ್ನು ಅನುಸರಿಸಿ ಪ್ರಾಯಿಕವಾಗಿ ಎಲ್ಲಾ ಕೀರ್ತನೆಗಳಲ್ಲಿಯೂ ತಮ್ಮ ಪೂರ್ವಜರಾದ ಯತಿ ವಾಸುದೇವಾರ್ಯರನ್ನೇ ಗುರುವೆಂದು ಸ್ವೀಕರಿಸಿದ್ದಾರೆ. ತಿಮ್ಮಪ್ಪದಾಸರಿಗೆ ವಾಸುದೇವಾರ್ಯರು ಪ್ರತ್ಯಕ್ಷಗುರು. ಅವರು ಶೃಂಗೇರಿಯ ಜಗದ್ಗುರುಗಳು, ಯಾರನ್ನೂ ಯಾವಲ್ಲಿಯೂ ಸ್ಮರಿಸುವುದು ನಮ್ಮ ಗಮನಕ್ಕೆ ಬಂದಿಲ್ಲವೆಂದಿದ್ದಾರೆ ಸಂಪಾದಕರು. ಹೀಗಿರುವಲ್ಲಿ ನಾರಾಯಣದಾಸರು ಮಾತ್ರ ಶ್ರೀ ನೃಸಿಂಹಭಾರತಿಗಳನ್ನು ಕುರಿತು ಒಂದು ಕೀರ್ತನೆಯನ್ನು ರಚಿಸಿದ್ದಾರೆ. ಈ ಕೀರ್ತನೆ ಹೀಗಿದೆ.

ಗುರುವರನ ಭಜಿಪೆ। ಶ್ರೀ ಶೃಂಗೇರಿ ಗುರುವರನನು ಭಜಿಪೆ।
ಗುರುವರನನು ಭಜಿಪೆ। ಗೂಢತತ್ವವನೊರೆವ
ಪರಮಪಾವನನಾದ ನರಸಿಂಹಭಾರತಿ। ಗುರುವರನನು ಭಜಿಪೆ
ಸ್ವರ್ಣಪೀಠದಿ ಕುಳಿತು। ಸ್ವರ್ಣಾಂಬರವ ಪೊದ್ದು
ಚಿನ್ಮುದ್ರೆಯನು ಧರಿಸಿ। ಪನ್ನಗಭೂಷಣ। ಪರಶಿವನಂದದಿ
ತನ್ನ ಭಕ್ತರ ಕರೆದು। ಛಿನ್ನಸಂಶಯರ ಮಾಳ್ಪ॥
ಮಣಿಮಯ ಮುಕುಟವ। ಮಸ್ತಕದೊಳಗಿಟ್ಟು
ಮಣಿಮಾಲಿಕೆಯ ಧರಿಸಿ। ದಿನಮಣಿಶಪತೇಜವನು
ಬೆಳಗುತ್ತ। ತಾನು।
ಘನ ಶಾಸ್ತ್ರಮಾರ್ಗವ। ನನುವದಿಸುತಲಿಹ॥
ಚಂದ್ರಗಾವಿಯನುಟ್ಟು। ಚಂದ್ರಮೌಳೀಶ್ವರನ

ಛಂದದಿ ಪೂಜಿಸುತ ಸಿಂಧುಜಾಧವನಾದ। ತಂದೆ ವೆಂಕಟಪತಿ

ಯಂದದಿ ದಾಸಗಾ। ನಂದವನಿತ್ತು ಪೊರೆವ॥ ೨೪

ನಾರಾಯಣದಾಸರ ಜೀವನ ವೃತ್ತಾಂತದ ಬಗೆಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಅವರಿಗೆ ವೆಂಕಟರಮಣಯ್ಯ ಮತ್ತು ಸುಬ್ಬಯ್ಯ ಎಂಬ ಇಬ್ಬರು ತಮ್ಮಂದಿರೂ, ಇಬ್ಬರು ತಂಗಿಯರೂ ಇದ್ದರು. ತಂದೆಯೇ ಇವರಿಗೆ ವಿದ್ಯಾಗುರುಗಳು. ನಾರಾಯಣದಾಸರ ರಚನೆಗಳಿಂದ ಅವರು ಸಂಸ್ಕೃತ, ಕನ್ನಡ ಭಾಷೆಗಳಲ್ಲಿಯೂ, ಸಂಗೀತ ಶಾಸ್ತ್ರದಲ್ಲಿಯೂ, ತಕ್ಕಮಟ್ಟಿನ ಜ್ಞಾನವಿತ್ತೆಂದು ಗೊತ್ತಾಗುತ್ತದೆ.

ನಾರಾಯಣದಾಸರ ತರುವಾಯ ವೆಂಕಟರಮಣದಾಸರು ತಿಮ್ಮಪ್ಪದಾಸರ ದೇವಸ್ಥಾನದ ಉತ್ತರಾಧಿಕಾರಿಯಾದ್ದರಿಂದ ಇವರಿಗೆ ಮಕ್ಕಳಿರಲಿಲ್ಲವೇನೂ ಎಂಬ ಸಂದೇಹಕ್ಕೆ ಅವಕಾಶವಿದೆಯೆಂದಿದ್ದಾರೆ. ಆದರೆ ೧೨ನೆಯ ಕೀರ್ತನೆಯಲ್ಲಿ (ಈ ಸುಖ) "ಸೂನುಮನೆ ಮೊದಲಾದ ಮಮಕಾರವನು ಬಿಟ್ಟು" ಎಂಬ ಮಾತಿನಿಂದ ಇವರಿಗೆ ಪುತ್ರನೊಬ್ಬನಿದ್ದು ಅಕಾಲ ಮರಣಕ್ಕೆ ಒಳಗಾಗಿರಬಹುದೆಂದು ಊಹಿಸಬಹುದೆಂಬ ಸಂಶಯವನ್ನು ಸಂಪಾದಕರು ವ್ಯಕ್ತಪಡಿಸಿದ್ದಾರೆ.

ನಾರಾಯಣದಾಸರಿಗೆ ಸುಖಭೋಗಗಳಿಗಿಂತ ಕಷ್ಟಕಾರ್ಪಣ್ಯಗಳೇ ಹೆಚ್ಚಾಗಿದ್ದವು. ಋಣಬಾಧೆಗೆ ಇವರೂ ಒಳಗಾಗಿದ್ದಾರೆ. ಇದನ್ನು ಕೀರ್ತನೆ ೨ ಮತ್ತು ೪ ರಲ್ಲಿ ಬೇಡಿಕೊಂಡಿದ್ದಾರೆ.

"ಋಣಬಾಧೆಯೊಳಗೆ ಸಿಕ್ಕಿ ನಿರತವು
ಘನವಾಗಿ ಕೊರಗುತಲಿಹ ಯೆನಗೆ ನೀ
ಕನಕದ್ರವ್ಯವನ್ನಿತ್ತು ಋಣವ ತೀರಿಸಿ ಬೇಗ
ಮನವ ಸಂತೋಷಿಸು ಮನಸಿಜಪಿತ ದೇವ
ಋಣಬಾಧೆಯನು ಬಿಡಿಸೈ ಬೇಗ ಶ್ರೀರಾಮಾ
ಧನವಕೊಡಿಸಿ ಸಲಹೋ ಭಕ್ತರೊಳ್ ಪ್ರೇಮಾ॥
ಜನಿಸಿದ ಒಂದು ವರುಷಕೆ ನಿನ್ನಯ ದಾಸ
ನೆನುತ ತಾಯಿತಂದೆಗಳಿಂದ ನುಡಿಸಿದೆ
ಅನವರತವು ನಿನ್ನ ಪಾದಪೂಜೆಯ ಕೊಡದೆ

ಅನುದಿನವೂ ಋಣದೊಳ್ ಕೊರಗಿಸುತಿಹೆ ಯಾಕೈ॥ ”

ನಾರಾಯಣದಾಸರು ತಮ್ಮ ತಂದೆಯಂತೆ ನೂರಾರು ಕೀರ್ತನೆಗಳನ್ನು ರಚಿಸಿಲ್ಲದಿದ್ದರೂ, ರಚಿಸಿರುವಷ್ಟು ಕೀರ್ತನೆಗಳಲ್ಲಿ ಅನನ್ಯ ಭಕ್ತಿಯಿಂದ ಭಗವತ್ಸೇವೆ ಮಾಡಿದ ಭಕ್ತನ ಹೃದಯಸ್ಪಂದನಗಳು ಚೆನ್ನಾಗಿ ಅವರ ಕೀರ್ತನೆಗಳಿಂದ ಗೊತ್ತಾಗುತ್ತದೆ. ತಿಮ್ಮಪ್ಪದಾಸರ ಪೂಜಾವಿಧಾನ ಕೀರ್ತನೆಗಳಲ್ಲಿ ಕಂಡುಬರುವ ತತ್ವಚಿಂತನೆ ಇವರ ಕೀರ್ತನೆಗಳಲ್ಲಿ ಕಂಡುಬರುವುದಿಲ್ಲ. ಅವುಗಳಿಗಿಂತ ಇವರ ಕೀರ್ತನೆಗಳು ಸರಳವಾಗಿವೆ. ಎಲ್ಲೆಲ್ಲಿ ವ್ಯಕ್ತಿನಿಷ್ಟ ನಿವೇದನೆಯಿದೆಯೂ ಅಲ್ಲೆಲ್ಲ ಭಾವಗೀತೆಯ ಗುಣಲೇಪನವಾಗಿದೆ.

“ಕೀರ್ತನೆಗಳ ಕೂಲಂಕುಷ ಪರಿಶೀಲನೆಯಿಂದ ನಾರಾಯಣದಾಸರು ರಾಗ–ತಾಳಗಳೊಡನೆ ಹಾಡಿಕೊಂಡೇ ತಮ್ಮ ಕೀರ್ತನೆಗಳನ್ನು ರಚಿಸಿದ್ದಾರೆಂದು ನನಗೆ ಅನಿಸುತ್ತದೆ. ಕೀರ್ತನೆಗಳು ಸಂಗೀತ ಶಾಸ್ತ್ರದ ರಾಗ ತಾಳ ನಿಯಮಗಳಿಗೆ ಮುದ್ದಾಗಿ ಹೊಂದಿಕೊಂಡಿವೆ. ಕೀರ್ತನೆಗಳ ಸಾಹಿತ್ಯ ಭಾಗವತ ಧರ್ಮದ ಭಕ್ತನೊಬ್ಬನ ಹೃದಯಾಂತರಾಳದಿಂದ ಉಕ್ಕಿಹರಿದ ಸರ್ವ ಸಮರ್ಪಣಭಾವದ ಹೊನಲಾಗಿದೆ. ಆ ಕಾರಣ ನಾರಾಯಣದಾಸರ ಕೀರ್ತನೆಗಳು ಸಂಗೀತಕಾರರಿಂದಲೂ ಹಾಗೂ ಗಾಯಕ ಭಕ್ತರಿಂದಲೂ ಹಾಡಲ್ಪಡಲು ಸರ್ವಥಾ ಯೋಗ್ಯವಾಗಿವೆ” ಗಾನಕಲಾಭೂಷಣ ಎಲ್.ರಾಜಾರಾವ್ ಅಭಿಪ್ರಾಯಪಟ್ಟಿದ್ದಾರೆ.

ಅಡಿ ಟಿಪ್ಪಣಿ:

೧. ಆಸ್ವಾದ ಸಂ.ಶ್ರೀವತ್ಸ, ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ ಉದಯಭಾನು ಕಲಾಸಂಘ – ಪು.ಸಂ:೩೦೭

೨. ಕವಿರಾಜಮಾರ್ಗಂ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ: ೨೨

೩. ಕವಿರಾಜಮಾರ್ಗಂ, (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ:೨೨, ೨೩

೪. ಕವಿರಾಜಮಾರ್ಗಂ, (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ:೨೬

೫. ಶ್ರೀ ಕೃಷ್ಣ ಬಾಲಲೀಲೆ ಭಾಗ ೨: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ x,xi

೬. ಶ್ರೀ ಕೃಷ್ಣ ಬಾಲಲೀಲೆ ಭಾಗ ೧: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ: x

೭. ಶ್ರೀ ಕೃಷ್ಣ ಬಾಲಲೀಲೆ : (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕಪ್ರತಿಷ್ಟಾನ, ಪು.ಸಂ: xi, xii, xiii

೮. ಶ್ರೀ ಕೃಷ್ಣ ಬಾಲಲೀಲೆ ಭಾಗ ೧: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ: xxiii

೯. ಶ್ರೀ ಕೃಷ್ಣ ಬಾಲಲೀಲೆ ಭಾಗ ೧: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ: xxv, xxvi

೧೦. ಶ್ರೀ ಕೃಷ್ಣ ಬಾಲಲೀಲೆ ಭಾಗ ೨: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:xii

೧೧. ಶ್ರೀ ಕೃಷ್ಣ ಬಾಲಲೀಲೆ ಭಾಗ ೨: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೩

೧೨. ಶ್ರೀ ಕೃಷ್ಣ ಬಾಲಲೀಲೆ ಭಾಗ ೧: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೫,೬,೭,೮

೧೩. ಶ್ರೀ ಕೃಷ್ಣ ಬಾಲಲೀಲೆ ಭಾಗ ೧: (ಸಂ) ಎಂ.ವಿ.ಸೀ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೮,೯,೧೦,೧೧

೧೪. ಅರ್ಚನ (ಸಂ) ಎಂ.ವಿ.ಸೀ, ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪು.ಸಂ:೮೨

೧೫. ಅರ್ಚನ (ಸಂ) ಎಂ.ವಿ.ಸೀ, ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪು.ಸಂ:v

೧೬. ಅರ್ಚನ (ಸಂ) ಎಂ.ವಿ.ಸೀ, ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪು.ಸಂ:vii

೧೭. ಅರ್ಚನ (ಸಂ) ಎಂ.ವಿ.ಸೀ, ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪು.ಸಂ:ix

೧೮. ಅರ್ಚನ (ಸಂ) ಎಂ.ವಿ.ಸೀ, ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪು.ಸಂ:ix, x

೧೯. ಕೀರ್ತನ ಕುಸುಮಾಂಜಲಿ –(ಸಂ)ಎಂ.ವಿ.ಸೀ, ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:i

೨೦. ಕೀರ್ತನ ಕುಸುಮಾಂಜಲಿ –(ಸಂ)ಎಂ.ವಿ.ಸೀ, ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:ii

೨೧. ಕೀರ್ತನ ಕುಸುಮಾಂಜಲಿ –(ಸಂ)ಎಂ.ವಿ.ಸೀ, ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:ii

೨೨. ಕೀರ್ತನ ಕುಸುಮಾಂಜಲಿ –(ಸಂ)ಎಂ.ವಿ.ಸೀ, ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೩೨

೨೩. ಕೀರ್ತನ ಕುಸುಮಾಂಜಲಿ –(ಸಂ)ಎಂ.ವಿ.ಸೀ, ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೩೬

೨೪. ಕೀರ್ತನ ಕುಸುಮಾಂಜಲಿ –(ಸಂ)ಎಂ.ವಿ.ಸೀ, ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೧

೨೫. ಕೀರ್ತನ ಕುಸುಮಾಂಜಲಿ –(ಸಂ)ಎಂ.ವಿ.ಸೀ, ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೨ ಮತ್ತು ೩

ಅಧ್ಯಾಯ–೪

ಎಂವಿ.ಸೀಯವರ ಗ್ರಂಥ ಸಂಪಾದನೆಯ ವೈಶಿಷ್ಟ್ಯಗಳು

ಗ್ರಂಥಸಂಪಾದನೆಯು ಕ್ಲಿಷ್ಟವಾದ ಕಾರ್ಯವಾಗಿದ್ದು ಕವಿಯ ಮೂಲ ಪಾಠವನ್ನು ಗುರುತಿಸುವುದು ಕೂಡ ಅಷ್ಟೇ ತ್ರಾಸದಾಯಕವಾದದ್ದು. ಸಂಪಾದಕ ತನ್ನ ಸಂಪಾದಿತ ಕೃತಿಯಲ್ಲಿ ಸಂಪಾದನೆಯ ಎಲ್ಲಾ ವೈಶಿಷ್ಟ್ಯಗಳನ್ನು ತರುವುದು ಕೂಡ ಸುಲಭದ ಮಾತಲ್ಲ. ಪ್ರಸ್ತುತ ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ತೆಗೆದುಕೊಂಡಿರುವ ಗ್ರಂಥಗಳ ಕೆಲವು ವೈಶಿಷ್ಟ್ಯಗಳನ್ನು ಮಾತ್ರ ಗುರುತಿಸಲಾಗಿದೆ.

ಅ) ಪಾಠಪರಿಷ್ಕರಣೆ:

ಪಾಠಪರಿಷ್ಕರಣೆ ಗ್ರಂಥಸಂಪಾದನೆಯ ಒಂದು ಬಹುಮುಖ್ಯ ಅಂಗ. ಗ್ರಂಥಸಂಪಾದನೆಯ ಕೊನೆಯ ಘಟ್ಟವೇ ಈ ಪಾಠ ಪರಿಷ್ಕರಣೆ, ಹಸ್ತಪ್ರತಿಗಳಲ್ಲಿನ ಸಾಹಿತ್ಯ ಗ್ರಂಥಪಾಠಾದಿಗಳನ್ನು, ಅವುಗಳ ಪರಸ್ಪರ ಸಂಬಂಧ, ಪ್ರತಿಗಳ ಪೀಳಿಗೆಯಿಂದ ತಿಳಿದು ಬರುವ ಭಿನ್ನಪಾಠಗಳನ್ನು, ಬಿನ್ನಪಾಠವಾಹಕವಾಗಿರುವ ಪ್ರತಿಗಳು ಹಾಗೂ ಇತರ ಪಾಠಾಂತರಗಳ ಅರಿವು ಬಂದಾದ ಮೇಲೆ ಸಂಪಾದಕ ಇವುಗಳನ್ನೆಲ್ಲ ಸವಿಮರ್ಶವಾಗಿ ಪರಿಶೀಲಿಸಿ ಕವಿಯ ಪಾಠವೇನಿರಬೇಕೆಂಬುದನ್ನು ಕಂಡುಹಿಡಿಯುತ್ತಾನೆ ಇದನ್ನೆ ಪಾಠಪರಿಷ್ಕರಣೆಯೆಂದು ಕರೆಯಲಾಗಿದೆ. ಇದು ಹಲವು ಸಂದರ್ಭಗಳಲ್ಲಿ ಸಾಧ್ಯವಾಗದೆ ಹೋಗಬಹುದು, ಕೆಲವು ಸಂದರ್ಭಗಳಲ್ಲಿ ಸಾಧ್ಯವಾಗುತ್ತವೆ. ಆಗ ಸಂಪಾದಕ ತಮ್ಮ ಸಾಮರ್ಥ್ಯ ಹಾಗೂ ದೊರತಿರುವ ಆಧಾರಗಳಿಂದ ಕವಿಯ ಹಸ್ತಪ್ರತಿಯ ಪಾಠಕ್ಕೆ ಅತ್ಯಂತ ಸಮೀಪವಾದ ಪಾಠವನ್ನು ಗುರ್ತಿಸಬೇಕಾಗುತ್ತದೆ.

ಗ್ರಂಥಸಂಪಾದಕ ಕವಿಯ ಮೂಲಪಾಠವನ್ನು ಗುರ್ತಿಸುವುದು ಅತ್ಯಂತ ಕಠಣವಾದ ಕಾರ್ಯವಾಗಿದ್ದು ಗ್ರಂಥವನ್ನು ಶಾಸ್ತ್ರೀಯವಾಗಿ ಸಂಪಾದಿಸಬೇಕಾಗುತ್ತದೆ. ಹೀಗೆ ಪಾಠಪರಿಷ್ಕರಣೆ ಮಾಡುವಾಗ ಸಂಪಾದಕನಿಗೆ ಹಲವು ವಿಷಯಗಳ ಜ್ಞಾನ ಅಗತ್ಯವಾಗಿರುತ್ತದೆ. ಸಂಪಾದಕ ಒಂದು ಕೃತಿಯ ಸಂಪಾದನೆಗೆ ಬಳಸಿಕೊಂಡಿರುವ ಹಸ್ತಪ್ರತಿಗಳನ್ನೆಲ್ಲ ಪರಿಶೀಲಿಸಿದ ನಂತರ ಕವಿಯ ಪಾಠ ಏನಿರಬಹುದೆಂದು ನಿರ್ಧರಿಸುತ್ತಾನೆ. ಈ ಪಾಠಪರಿಷ್ಕರಣದಲ್ಲಿ ವಿವಿಧ ರೀತಿಯ ಪಾಠಯೋಜನೆಗಳು ಸಿದ್ದವಾಗುತ್ತವೆ.

ಗ್ರಂಥಸಂಪಾದಕ ಅಂತಿಮವಾಗಿ ಪರಿಷ್ಕರಿಸಿದ ಪಾಠವು ಸಂಪಾದಕನ ವಿವೇಚನಾಶಕ್ತಿಯಿಂದ ನಿರ್ಧರಿಸಿದ ಪಾಠವಾಗಿದ್ದು ಇದು ಕವಿಯ ಪಾಠಕ್ಕೆ ಹತ್ತಿರವಾದುದಾಗಿರುತ್ತದೆಯೇ ಹೊರತು ಇದೇ ಅಂತಿಮವಲ್ಲ ಮುಂದೆ ಕವಿಪಾಠಕ್ಕೆ ಇನ್ನೂ ಹತ್ತಿರವಾದ ಪ್ರತಿ ದೊರೆತಾಗ ಮತ್ತೆ ಪರಿಷ್ಕರಣದ ಅಗತ್ಯತೆಯಿಂದೆ. ಎಂ.ವಿ.ಸೀತಾರಾಮಯ್ಯನವರು ಮೇಲೆ ವಿವರಿಸಿದ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಸಂಪಾದಿತ ಕೃತಿಗಳ ಪರಿಷ್ಕರಣೆ ಮಾಡಿದ್ದಾರೆಂಬುದು ಅವರ ಸಂಪಾದಿತಕೃತಿಗಳ ಅಧ್ಯಯನದಿಂದ ತಿಳಿದುಬರುತ್ತದೆ.

i) ಕವಿರಾಜಮಾರ್ಗದ ಪಾಠ ಪರಿಷ್ಕರಣಾ ವೈಶಿಷ್ಟ್ಯಗಳು

ಕವಿರಾಜಮಾರ್ಗ ಕನ್ನಡ ಸಾಹಿತ್ಯದ ಪ್ರಪ್ರಥಮ ಲಕ್ಷಣ ಗ್ರಂಥ. ಇದನ್ನು ಎಂ.ವಿ.ಸೀ ಸಂಪಾದನೆಮಾಡುವ ವೇಳೆಗೆ ಎರಡು ಪರಿಷ್ಕರಣಗಳು ಹೊರಬಂದಿದ್ದವು. ಒಂದು ೧೮೯೮ರಲ್ಲಿ ಕೆ.ಬಿ.ಪಾಠರಿಂದ ಹೊರಬಂದದ್ದು ಇನ್ನೊಂದು ೧೯೩೦ರಲ್ಲಿ ಮದರಾಸಿನ ಎ.ವೆಂಕಟರಾವ್ ಮತ್ತು ಎಚ್.ಶೇಷ ಅಯ್ಯಂಗಾರ್ ರವರು ಹೊರತಂದದ್ದು. ಈ ಎರಡು ಮುದ್ರಿತ ಪ್ರತಿಗಳ ಜೊತೆಗೆ ಮತ್ತೆರಡು ಹಸ್ತಪ್ರತಿಗಳನ್ನು ಎಂ.ವಿ.ಸೀ ರವರು ತಮ್ಮ ಪಾಠ ಪರಿಷ್ಕರಣಕ್ಕೆ ಬಳಸಿಕೊಂಡಿದ್ದಾರೆ.

ಎಂ.ವಿ.ಸೀ ಯವರು ಕವಿರಾಜಮಾರ್ಗ ಲಕ್ಷಣಗ್ರಂಥ ಸಂಪಾದನೆಗೆ ಬೇಕಾದ ಎಲ್ಲಾ ವಿದ್ವತ್ತುಗಳು ಅವರಲ್ಲಿತ್ತು ಎಂಬುದಕ್ಕೆ ಅವರ ಪರಿಷ್ಕರಣ ಗ್ರಂಥವೇ ಸಾಕ್ಷಿಯಾಗಿದೆ. ಸಂಪಾದಕರಿಗೆ ಹೆಚ್ಚಿನ ಆಧಾರ ಪ್ರತಿಗಳ ಕೊರತೆಯುಂಟಾಗಿದೆ. ಆದರೂ ಸಹ ತಮ್ಮ ವಿದ್ವತ್ತಿನಿಂದ ಒಂದು ಸ್ವೀಕೃತ ಯೋಗ್ಯವಾದ ಗ್ರಂಥವನ್ನು ಸಂಪಾದಿಸಿ ಕೊಟ್ಟಿದ್ದಾರೆಂಬುದರಲ್ಲಿ ಸದೇಹವಿಲ್ಲ.

ಎಂ.ವಿ.ಸೀ ಯವರ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಕೊಡದೆ ಕೊನೆಯಲ್ಲಿ ಪ್ರತ್ಯೇಕವಾಗಿ ವಿವರವಾಗಿ ಕೊಟ್ಟಿದ್ದಾರೆ ತಮಗೆ ದೊರೆತ ಎಲ್ಲಾ ಹಸ್ತಪ್ರತಿಗಳಿಂದ ಪಾಠ ಸಮಸ್ಯೆಗಳು ನಿವಾರಣೆಯಾಗದಿದ್ದಾಗ ಸೂಚಿತಪಾಠಗಳನ್ನೂ, ಪಾಠಂತರಗಳನ್ನೂ ಪ್ರತಿಯೊಂದು ಪದ್ಯ, ಪಂಕ್ತಿಗಳಿಗನುಸಾರವಾಗಿ ಅನುಬಂಧದಲ್ಲಿ ಕೊಟ್ಟಿದ್ದಾರೆ.

ಕವಿರಾಜಮಾರ್ಗದ ಮತ್ತೆ ಕೆಲವು ಶುದ್ಧ ಪ್ರತಿಗಳು ಸಂಪಾದಕರಿಗೆ ದೊರೆತಾಗ ಅವುಗಳಲ್ಲಿ ಕಂಡುಬರುವ ಸಂಭವನೀಯಗಳು, ಸ್ವೀಕೃತ ಪಾಠಗಳನ್ನು ಉಲ್ಲೇಖಿಸಿದ್ದಾರೆ. ಸಂಪಾದಕರು ಉಲ್ಲೇಖಿಸಿರುವ ಸ್ವೀಕೃತ ಪಾಠಗಳು ಎಷ್ಟು ಸಮಂಜಸವಾಗಿವೆಯೆಂಬುದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು.

ಪರಿಚ್ಛೇದ-೧

ಪದ್ಯ-೩ ಶ್ರೀ ವಿಶದ ವರ್ಣೆ ಮಧುರಾ
ರಾವೋಚಿತ ಚತುರರುಚಿರ ಪದರಚನೆ ಚಿರಂ
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್

ಪದ್ಯ-೧೨೮ ನೆರೆದು ಬಂದಪರವರ್ ಸಯಲಾಬಲಮೆಲ್ಲಮೆ
ಳ್ತಿರದೆ ಕೊಂದ ಪನಿವಂದಿರನೀಗಳೆ ನಿಕ್ಕುವಂ
ತರಿದು ಬೀಳ್ವವೊಲಿವಂದಿರ ಪಾವಳಿವಂದಮಂ
ತಿರವೇ[ಳೊ]ಡ್ಡಳಿಯದಂತಿರೆ ನಮ್ಮವರೆಲ್ಲವಂ

ಪರಿಚ್ಛೇದ-೨

ಪದ್ಯ ೧೧೩ ಇವು ದುಷ್ಕರ ಕಾವ್ಯಂಗಳ್ ಸವಿಶೇಷವರ್ತಿಗಳ್
ಸುವಿಚಾರಿತಮೀ ತೋರ್ಪೆ [ನಿ] ವರಿಲಕ್ಷ್ಯಭೇದಮಂ

ಪದ್ಯ: ೧೪೬

ತಿರಿವುದದೊಂದು ಚಕ್ರದೊಳೆ ನಿಂದು ದಿವಾ
ಕರನೆ ಮತ್ತ[ರಿ]ದು ಕಳವೊಡಂತದನಾವೆಡೆಯಿಂ
ದರಮೆಯಾಗಿ ನೆಲಸಿ ಕೆಲಕಾಲದಿಂ
ಪೊರೆದಿರದಳಕೆ ತಾ ನೆಲದೊಳ್

ಪರಿಚ್ಛೆದ-೩

ಪದ್ಯ ೨೪: ವದನಮಿದಲ್ತಂಬುರುಹಂ
ಮದಲೋಲವಿ ಲೋಕನಂಗಳಲ್ಲಮಿವಳಿಗಳ್
ಮುದಮಲ್ಲಿದು ವಿಕಸನಮೆಂ
ಬಿದನಿಂ[ಬೆ]ನೆ ಬಗೆಗೆ ರೂಪಕಾಪಹ್ನುತಿಯಂ

ಪದ್ಯ ೧೫೦ ಪರತಕ್ಷಮುಳ್ಳಿನಂ ತನ
ಗಿರವುಬ್ಬಸಮದರೆನ[ರ] ವುದವನೇಗೆಯ್ದುಂ
ಪರದೆಪುಡಿಯೆಲ್ಲಮಂ ನೀರ್

ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೇ"[7]

ಈ ಮೆಲಿನ ಪಾಠಗಳು ಸಂಪಾದಕರ ಪಾಂಡಿತ್ಯದ ಬಗೆಗೆ ಬೆಳಕು ಚೆಲ್ಲುತ್ತವೆ ಅಲ್ಲದೆ ಅವರ ಬಹುಶ್ರುತತ್ವಕ್ಕೆ ನಿದರ್ಶನಗಳಾಗಿವೆ.

ಈ ಪರಿಷ್ಕರಣದಲ್ಲಿ ಕೊಟ್ಟಿರುವ ಟಿಪ್ಪಣಿಗಳು ಸಂಪಾದಕರ ಅಪಾರ ವಿದ್ವತ್ತಿಗೂ ದೀರ್ಘ ಪರಿಶ್ರಮಕ್ಕೂ ಹಿಡಿದ ಕೈಗನ್ನಡಿಯಾಗಿವೆ. ಈ ಒಂದು ಪರಿಷ್ಕೃತ ಕೃತಿ ವಿದ್ಯಾರ್ಥಿಗಳಿಂದ ಹಿಡಿದು ವಿದ್ವಾಂಸರವರೆಗೆ ಅತ್ಯಂತ ಉಪಯುಕ್ತವಾದ ಮುದ್ರಣವಾಗಿದೆ. ಈ ಒಂದು ಕೃತಿಗೆ ಸಂಬಂಧಿಸಿದಂತೆ ಯಾವ ಅಂಶಗಳೂ ತಪ್ಪಿಹೋಗದಂತೆ ಸಂಪಾದಕರು ಬಹಳ ಶ್ರಮವಹಿಸಿ ಪರಿಷ್ಕರಿಸಿದ್ದಾರೆಂಬುದು ಕೃತಿಯ ಅಧ್ಯಯನದಿಂದ ಸಿದ್ಧವಾಗುತ್ತದೆ. ಒಟ್ಟಾರೆಯಾಗಿ ಒಂದು ಲಕ್ಷಣ ಕೃತಿಯನ್ನು ಶಾಸ್ತ್ರೀಯವಾಗಿ ಹೇಗೆ ಸಂಪಾದಿಸಬೇಕೋ ಅಂತಹ ಗ್ರಂಥ ಸಂಪಾದನೆಯ ನಿಯಮಗಳಿಗನುಸಾರವಾಗಿ ಕವಿರಾಜಮಾರ್ಗವನ್ನು ಎಂ.ವಿ.ಸೀ ಯವರು ಸಂಪಾದಿಸಿದ್ದಾರೆ.

ಪಾಠ ಪರಿಷ್ಕರಣದಲ್ಲಿ ಸಂಪಾದಕರು ತಮ್ಮ ಪಾಂಡಿತ್ಯವನ್ನು ತೋರಿಸಿದ್ದಾರೆ. ಲಕ್ಷಣಗ್ರಂಥ ಸಂಪಾದನೆಯಲ್ಲಿ ಇತರ ಲಕ್ಷಣಗ್ರಂಥಗಳನ್ನು ಅಭ್ಯಸಿಸುವುದು, ಅವಲೋಕಿಸುವುದು ಅವಶ್ಯವಷ್ಟೇ ಅನಿವಾರ್ಯವೂ ಕೂಡ. ಪ್ರಕೃತ ಸಂಪಾದಕರು ಆ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ. ಅದನ್ನು ಕೆಟ್ಟ ಪಾಠಗಳನ್ನು ನಿರಾಕರಿಸಿ ಕವಿಪಾಠಕ್ಕೆ ಹತ್ತಿರವಾದ ಪಾಠವನ್ನು ನಿರ್ಧರಿಸುವಲ್ಲಿ ಸಾಧಿಸಿದ್ದಾರೆ. ಒಟ್ಟಾರೆಯಾಗಿ ಒಂದು ಸಂಪಾದಿತ ಕೃತಿ ಹೇಗಿರಬೇಕೆಂಬುದನ್ನು ಎಂ.ವಿ.ಸೀ ಸಂಪಾದಿಸಿ ತೋರಿಸಿದ್ದಾರೆ.

ii) ಶ್ರೀಕೃಷ್ಣಬಾಲಲೀಲೆ ಗ್ರಂಥದ ಪಾಠಪರಿಷ್ಕರಣೆಯ ವೈಶಿಷ್ಟ್ಯಗಳು

ಶ್ರೀ ಕೃಷ್ಣಬಾಲಲೀಲೆ ತಿಮ್ಮಪ್ಪದಾಸರ ವಂಶಜರಿಂದ ಪ್ರತಿಷ್ಠಾನಕ್ಕೆ ಬಂದ ಹಸ್ತಪ್ರತಿಗಳ ಸಂಗ್ರಹದಲ್ಲಿ ಎರಡು ಓಲೆಗರಿಯ ಕಟ್ಟುಗಳಲ್ಲಿ ದೊರೆತಿವೆ. ಮೊದಲಕಟ್ಟಿನಲ್ಲಿ ಕವಿಯ ಪೀಠಿಕಾಪ್ರಕರಣ ನಂತರ ಕೃಷ್ಣ ಜನನದಿಂದ ಹಿಡಿದು ಅಕ್ರೂರ ಪ್ರಕರಣದವರೆಗಿನ ಕೃಷ್ಣಚರಿತೆ ನಿರೂಪಿತವಾಗಿದೆ. "ಪೂಜಾವಿಧಾನಕೀರ್ತನೆಗಳು ಲಿಖಿತವಾಗಿರುವ ಅರ್ಚನದ ಕಾಗದದ ಹಸ್ತಪ್ರತಿ ಮತ್ತು ಓಲೆಗರಿಪ್ರತಿಗಳು ಹಾಗೂ ಬಾಲಲೀಲೆಯ ಎರಡುಕಟ್ಟುಗಳ ಹಸ್ತಾಕ್ಷರಕ್ಕೂ ಸಾಮ್ಯವನ್ನು

ಗುರ್ತಿಸಿ ಈ ಎರಡೂ ಕವಿಯ ಸ್ವಹಸ್ತಾಕ್ಷರ ಪ್ರತಿಗಳೆಂಬ ತೀರ್ಮಾನಕ್ಕೆ ಸಂಪಾದಕರು ಬಂದಿದ್ದಾರೆ."[೨]

ಸಂಪಾದಕರು ಪಾಠಪರಿಷ್ಕರಣೆ ನಂತರ ಸ್ವಹಸ್ತಾಕ್ಷರ ಪ್ರತಿ ಓಲೆಗರಿ ಪ್ರತಿಯನ್ನು ಆಧಾರವಾಗಿ ಸ್ವೀಕರಿಸಿದ್ದಾರೆ. ಇದಕ್ಕೆ 'ಓ' ಎಂಬ ಸಂಕೇತನೀಡಿದ್ದಾರೆ. "ಈ ಓಲೆಗರಿ ಪ್ರತಿಯಿಂದ ತಿಮ್ಮಪ್ಪದಾಸರ ಮೊಮ್ಮಕ್ಕಳಾದ ವೆಂಕಟದಾಸಪ್ಪನವರು ನಕಲು ಮಾಡಲು ತೊಡಗಿ ಕೇವಲ ೨೫ ಕೀರ್ತನೆಗಳಿಗೆ ನಕಲು ಮಾಡವ ಕಾರ್ಯನಿಲ್ಲಿಸಿದ್ದಾರೆ ಕಾರಣ ಸ್ಪಷ್ಟವಾಗಿಲ್ಲ. ಇದು ಮೂಲ ಪ್ರತಿಯ ಯಾಥಾವತ್ತಾದ ನಕಲಾಗಿರುವುದರಿಂದ ಗ್ರಂಥ ಸಂಪಾದಕರ ಪಾಠ ಪರಿಷ್ಕರಣಕ್ಕೆ ಯಾವುದೇ ರೀತಿಯ ಪ್ರಯೋಜನವಾಗಿಲ್ಲ."[೩]

ಸಂಪಾದಕರು ಬಾಲಲೀಲೆಯ ಕೆಲವು ಕೀರ್ತನೆಗಳು ತಿಮ್ಮಪ್ಪದಾಸರ ಅರ್ಚನ ಕೃತಿಯಲ್ಲಿಯೂ ಇವೆ ಎಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಅರ್ಚನದ ಮುದ್ರಿತ ಪ್ರತಿಯ ಸಂಕೇತಾಕ್ಷರ 'ಅ' ಆಧಾರ ಪ್ರತಿಯಾಗಿ ಕಾಗದದ ಪ್ರತಿಯನ್ನು 'ಗ' ದಿಂದ ಸಂಕೇತಿಸಿದೆ 'ಗೋಪಿಕಾ ಗೀತೆ'ಯ ನಾಲ್ಕು ಕೀರ್ತನೆಗಳು (ಅಂದರೆ ೧೪೬ ರಿಂದ ೧೪೯ನೇ ಕೀರ್ತನೆವರೆಗೆ) ಪೂಜಾ ವಿಧಾನ ಕೀರ್ತನೆಗಳು ಲಿಖಿತವಾಗಿರುವ ಕಾಗದದ (ಗ) ಹಸ್ತ ಪ್ರತಿಯಲ್ಲಿ ಭಾಗವತದ ಮೂಲಶ್ಲೋಕಗಳ ಸಮೇತ ಅಚ್ಚಾಗಿವೆ. "ಅರ್ಚನ ಪ್ರಕಟವಾದ ಸಂದರ್ಭದಲ್ಲಿಯೇ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕೆ.ಬಿ ೨೦೪ ಸಂಖ್ಯೆಯ ಶ್ರೀ ಕೃಷ್ಣಬಾಲಲೀಲೆಯ ಕೀರ್ತನೆಗಳು' ಎಂಬ ಹಸ್ತಪ್ರತಿಯನ್ನು ಸಂಪಾದಕರು ಗಮನಿಸಿ ಬಾಲಲೀಲೆಯ ಆಯ್ದ ಹತ್ತು ಕೀರ್ತನೆಗಳು ಲಿಖಿತವಾಗಿವೆಯೆಂಬುದನ್ನ ಪರಿಷ್ಕರಿಸಿದ್ದಾರೆ. ಈ ಪ್ರತಿಗೆ ಕ ಪ್ರತಿ ಎಂದು ಕರೆದಿದ್ದಾರೆ. ಅಲ್ಲದೆ ಈ ಪ್ರತಿಯಲ್ಲಿ ಹೆಚ್ಚು ಸ್ಖಾ ಲಿತ್ಯಗಳಿರುವುದನ್ನು ಸಂಪಾದಕರು ಗುರ್ತಿಸಿದ್ದಾರೆ."[೪]

ಸಂಪಾದಕರು ದೊರೆತ ಅಲ್ಪ ಪ್ರಮಾಣದ ಅನ್ಯ ಪ್ರತಿಗಳಿಂದ ಪಾಠವನ್ನು ಪರಿಷ್ಕರಿಸಿದ್ದಾರೆ. ಈ ಎಲ್ಲಾ ಅಂಶಗಳಿಂದ ಆಧಾರ ಪ್ರತಿಯಾದ (ಓ) ಪ್ರತಿಯೇ ಬಹುಮಟ್ಟಿಗೆ ಶುದ್ಧವಾಗಿದೆಯೆಂಬುದನ್ನು ಸಂಪಾದಕರು ಖಚಿತಪಡಿಸಿದ್ದಾರೆ. ಆದರೆ ಸಂಪಾದಕರಿಗೆ ಮುದ್ರಣ ಪ್ರತಿಯನ್ನು ಸಿದ್ಧಪಡಿಸುವಾಗ ತಾಳಲಯದ ಸಮಸ್ಯೆ ಎದುರಾಗಿದೆ. ಸಂಪಾದಕರು ತಮಗೆ ತಿಳಿದ ಮಟ್ಟಿಗೆ ಹಾಗೂ ಬೇರೆಯವರ ಸಹಾಯದಿಂದ ಅದನ್ನುಕೂಡ ಸಮರ್ಥವಾಗಿ ನಿರ್ವಹಿಸಿದ್ದಾರೆ.

ಇದಕ್ಕಾಗಿ ಸ್ವರ ಕರ್ಷಣ ಮಾಡಬೇಕಾದ ಕಡೆ ಹ್ರಸ್ವಾಕ್ಷರವನ್ನು ದೀರ್ಘಾಕ್ಷರವನ್ನಾಗಿ ಮಾರ್ಪಡಿಸಿದ್ದಾರೆ. ಶ್ರೀಕೃಷ್ಣ ಬಾಲಲೀಲೆಯ ತಾಡೋಲೆ ಹಸ್ತಪ್ರತಿಯಲ್ಲಿ ಈ ಲಿಪಿ ಲೇಖನ ವೈಲಕ್ಷಣಗಳು ಅನೇಕ ಕೀರ್ತನೆಗಳಲ್ಲಿ ಕಂಡು ಬಂದಿವೆ. ಒಂದು ಉದಾ:

ಕೀರ್ತನೆ ೬೨ ನುಡಿ–೨೩

ಬೆಕ್ಕಿಗು ಕೊಡುತ ಭಯಪಡುತ ನಿಂದಿರಲು
ಹೊಕ್ಕಳು ಮೆಲ್ಲನೆ ಹಿಡಿದ ಕೋಲಿನಲಿ
ಉಕ್ಕುವ ರೋಷದ ಒಡತಿಯ ಕಂಡು
ದಕ್ಕದೆ ಒರಳಿನಿಂದುಮುಕಿ ಯೋಡಿದನು"[೫]

"ಇಲ್ಲಿ ಬೆಕ್ಕಿಗು, ಹೊಕ್ಕಳು, ಮೆಲ್ಲನೆ ಈ ಶಬ್ದಗಳಲ್ಲಿ ನಾಲ್ಕು ಛಂದೋಮಾತ್ರೆಗಳ ಉಚ್ಚಾರಕಾಲಕ್ಕೆ ಮಿಶ್ರಛಾಪು ತಾಳಾವರ್ತದ ಏಳು ಮಾತ್ರೆಗಳ ಬೆಲೆ ತರುವುದಕ್ಕಾಗಿ ಸ್ವರಕರ್ಷಣ ಮಾಡಲಾಗಿದೆ".[೬]

ಅನೇಕ ಕೀರ್ತನೆಗಳು ಮಾತ್ರಾಛಂದಸ್ಸಿನ 'ಲಿಖಿತ'ಲಯದಲ್ಲಿ ಹಾಗೂ ಭಾಮಿನೀ ಲಯದಲ್ಲಿ ರಚಿಸಿರುವುದೂ ಉಂಟು ಇಂತಹ ಸಂದರ್ಭದಲ್ಲಿ ಯಥಾಕ್ಷರವಾಗಿ ಬರೆದಿರುತ್ತದೆ. ಇದಕ್ಕೆ ಒಂದು ಉದಾ: ಕೀರ್ತನೆ ೧

"ಸಲಹು ನಂದಕುಮಾರ ಸಲಹು ಗೋಪೀತನಯ

ಸಲಹು ವಾಸುದೇವನಿಗೆ ಪುತ್ರನೆನಿಸಿದನೆ

ಸಲಹು ದೇವಕಿ ಜಠರದಲಿ ಬಂದು ನೆಲಸಿದನೆ

ಸಲಹು ಶ್ರೀರಾಮ ಶ್ರೀ ಕೃಷ್ಣ ಜಯಕೃಷ್ಣ"[೭]

ಇದು ಪಂಚಮಾತ್ರೆಯ ಛಂದೋಬಂದವಾಗಿದ್ದು ಹಾಗೆಯೇ ಉಳಿಸಿಕೊಳ್ಳಲಾಗಿದೆ.

ಸಂಪಾದಕರು ಕೆಲವು ಕೀರ್ತನೆಗಳಿಗೆ ರಾಗ ನಿರ್ದೇಶನವನ್ನು ಮಾಡಿದ್ದಾರೆ ಆದರೆ ತಾಳ ನಿರ್ದೇಶನಮಾಡಿಲ್ಲ ಅದನ್ನು ಸಂಪಾದಕರು ಕಂಸದಲ್ಲಿ ನೀಡಿದ್ದಾರೆ. ಟಿಪ್ಪಣಿಗಳನ್ನು

ಪಾಠಪರಿಷ್ಕರಣದ ಕಾರ್ಯದೊಂದಿಗೆ ಬರೆದುಕೊಂಡು ಬಂದಿದ್ದಾರೆ. ಬಾಲಲೀಲೆಯ ಕೃತಿಯಿಂದ ಒಂದೆರಡು ಉದಾ ನೋಡಬಹುದು.

'ಕೀರ್ತನೆ ೩೮, ೨೧ನೇ ಚರಣದ ೩–೪ ನೆಯ ಪಾದ

ಬಾಲರಿಗೆ ನಾಮ ವನು ಬೇಗದಿಂದಿಡಿ ಯೆಂದು

ಲೋಲ ನಂದನು ಋಷಿಗೆ ಲಲಿತೋಕ್ತಿಯಿಂದ"[೮]

ಈ ಚರಣದಲ್ಲಿ ಲಲಿತೋಕ್ತಿ ಕವಿಪಾಠವಾಗಿದ್ದು ಹಸ್ತಪ್ರತಿಯಲ್ಲಿ 'ಅತಿರೋಕ್ತಿ' ಎಂದಿದ್ದು ಇದು ನಿರರ್ತಕ ಪದವಾಗಿದ್ದು ಸಂಪಾದಕರು 'ಅತಿಶಯೋಕ್ತಿ' ಎಂಬ ಊಹಾತ್ಮಕ ಪಾಠ ಪರಿಷ್ಕರಣ ಮಾಡಿ ಇಲ್ಲಿ ಲಿಪಿ ಲೇಖನ ಸ್ಖಾಲಿತ್ಯವಿರುವುದನ್ನು ಗುರ್ತಿಸಿ 'ಲಲಿತೋಕ್ತಿ' ಎಂಬ ಕವಿಪಾಠವನ್ನು ಸಿದ್ಧಪಡಿಸಿದ್ದಾರೆ.

"೧೫೪ನೆಯ ಕೀರ್ತನೆಯ ೨೨ನೆಯ ಚರಣದ ೩ನೆಯ ಪಾದ ಎರಡು ಮಡಿಯದೇನು ಯೆನಲು। ಜರೆ ಮರಣವಿಲ್ಲದೆ ಮನವಿರಲು ಹರಿಯದನಿಗಳ ಹಾಕಿರಲು ।ಇದ। ತರಿದು ಮನಕೆ ಮತ್ತೆ ತಾರದೆ ನಿಲಲು ಒಂದು ಬಗೆಯು। ಇದೊಂದು ಬಗೆಯು"[೯]

ತಾಡವೋಲೆ ಪ್ರತಿಯಲ್ಲಿ 'ಹರಿಯದನಿಗಳ' ಎಂಬ ಗ್ರಂಥ ಭಾಗ ತೆರಪು ಬಿಡದೆ ನಿಬಿಡಾಕ್ಷರವಾಗಿ ಲಿಖಿತವಾಗಿರುವುದನ್ನು ಸಂಪಾದಕರು ಗುರ್ತಿಸಿದ್ದಾರೆ.

ತಿಮ್ಮಪ್ಪದಾಸರ ಭಾಷಾಶೈಲಿ ಸರಳವಾಗಿದ್ದರೂ ಬಿಗಿಯಾದ ಬನಿಯಾದ ಶೈಲಿಯಾಗಿದೆ. ಕಾವ್ಯದೃಷ್ಟಿಯಿಂದ ಮೂಲಭಾಗವತದ ಗುಣಮಟ್ಟವನ್ನು ಉಳಿಸಿಕೊಂಡಿದೆ. ಇದನ್ನು ನಾವು ಟಿಪ್ಪಣಿಗಳಲ್ಲಿ ಗಮನಿಸಬಹುದು. ತಿಮ್ಮಪ್ಪದಾಸರ ಭಾಷಾ ಶೈಲಿಗೆ ಒಂದು ಉತ್ತಮ ಉದಾಹರಣೆಯಾಗಿದೆ ಕೀರ್ತನೆ ೧೪೬ (ಗೋಪಿಕಾ ಗೀತ).

ಎಂ.ವಿ.ಸೀ ಶ್ರೀ ಕೃಷ್ಣ ಬಾಲಲೀಲೆ ಗ್ರಂಥವನ್ನು ತಮಗೆ ದೊರೆತ ಆಂತರಿಕ ಮತ್ತು ಬಾಹ್ಯ ಅಂಶಗಳನ್ನು ಸಮರ್ಥವಾಗಿ ಉಪಯೋಗಿಸಿಕೊಂಡು ಕವಿ ಹಾಗೂ ಕೃತಿಗೆ ಯಾವುದೇ ರೀತಿಯದಕ್ಕೆ

ಬರದಂತೆ ಒಂದು ಉತ್ತಮವಾದ ಕವಿಪಾಠವನ್ನು ಪರಿಷ್ಕರಿಸಿ ಸಂಪಾದಿಸಿ ಓದುಗರ ಮುಂದಿಟ್ಟಿದ್ದಾರೆ ಎಂಬುದರಲ್ಲಿ ಅತಿಶಯೋಕ್ತಿ ಕಾಣಲಾರದು.

ii) ಅರ್ಚನ ಗ್ರಂಥದ ಪಾಠಪರಿಷ್ಕರಣೆಯ ವೈಶಿಷ್ಟ್ಯಗಳು

ತಿಮ್ಮಪ್ಪದಾಸರಿಂದ ರಚಿತವಾದ ೧೦೮ ಪೂಜಾವಿಧಾನದ ಕೀರ್ತನೆಗಳನ್ನು ಸಂಪಾದಕರು 'ಅರ್ಚನ' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಸಂಪಾದಕರಿಗೆ ಈ ಕೃತಿಯ ಕವಿಯ ಸ್ವಹಸ್ತಾಕ್ಷರ ಪ್ರತಿಗಳೇ ದೊರೆತಿದ್ದು ಕವಿಪಾಠ ನಿರ್ಣಯದ ಪ್ರಶ್ನೆ ಅಷ್ಟಾಗಿ ಉದ್ಭವಿಸಿಲ್ಲ. ಇಲ್ಲಿ ಸಂಪಾದಕ ಕೇವಲ ಭಿನ್ನಪಾಠಗಳು ಮತ್ತು ಬರವಣಿಗೆಯಲ್ಲಿ ಕಂಡುಬಂದಿರುವ ಕೆಲವು ವೈಲಕ್ಷಣಗಳನ್ನು ಗುರ್ತಿಸುವ ಕಾರ್ಯ ಮಾಡಿದ್ದು ಇವು ಕೂಡ ಕವಿಯವೇ ಆಗಿವೆ.

"ದೊರೆತಿರುವ ಪ್ರತಿ ಲೇಖಕರ ಕೈಬರಹದ ಪ್ರತಿಯೇ ಎಂದು ಸಂಪಾದಕರು ನಿರ್ಧರಿಸುವಲ್ಲಿ ಕಾರಣಗಳು ಎರಡು:

೧) ಕ ಮತ್ತು ಗ ಪ್ರತಿಗಳು ಒಂದೇ ಕೈಬರಹದಲ್ಲಿವೆ.

೨) ಕ ಪ್ರತಿಗಿಂತ ಗ ಪ್ರತಿಯಲ್ಲಿನ ತಿದ್ದಿದ ಪಾಠಗಳು ಉತ್ತಮವಾಗಿವೆ.

ಸಂಪಾದಕರು ಈ ನಿರ್ಧಾರಕ್ಕೆ ಬರಲು ಕ ಪ್ರತಿ ಕವಿಯ ಸ್ವಹಸ್ತಾಕ್ಷರ ಎಂಬುದು ಸಂಪಾದಕರಿಗೆ ಗೊತ್ತಿರಬೇಕು. ಕಾರಣ ಇದು ೧೯ನೆಯ ಶತಮಾನದ ಹಸ್ತಪ್ರತಿಯಾದ್ದರಿಂದ ಕವಿಯ ಮೊಮ್ಮಕ್ಕಳೋ ಮರಿಮಕ್ಕಳೋ ಸಂಪಾದಕರಿಗೆ ಸೂಚಿಸಿರುವ ಸಾದ್ಯತೆ ಅಥವಾ ಕವಿಯ ಕಾಗದದ ಪತ್ರಗಳಲ್ಲಿರುವ ಹಸ್ತಾಕ್ಷರದ ಪರಿಚಯ ಸಂಪಾದಕರಿಗಿರಬಹುದು. ಇದನ್ನು ಸ್ಪಷ್ಟವಾಗಿ ಸಂಪಾದಕರು ಎಲ್ಲಿಯೂ ಸೂಚನೆ ನೀಡಿಲ್ಲ. 'ಕ' ಪ್ರತಿಯಲ್ಲಿಲ್ಲದ ಅನೇಕ ಕಂದಪದ್ಯಗಳು ಗ ಪ್ರತಿಯಲ್ಲಿವೆ ಕವಿಯೇ ಈ ಎರಡು ಪ್ರತಿಗಳನ್ನು ಬರೆದಿರುವುದನ್ನು ಊಹಿಸುವುದು ಕೂಡ ಕಷ್ಟ"[೧೦] ಎಂದಿದ್ದಾರೆ ಸಂಪಾದಕರು.

ಬರವಣಿಗೆಯಲ್ಲಿ ಬರುವ ಕೆಲವು ವೈಲಕ್ಷಣಗಳನ್ನು ಸಂಪಾದಕರು ಗುರ್ತಿಸಿದ್ದಾರೆ.

೧) ಆದಿಸ್ವರೋಚ್ಚಾರಣೆಯೊಂದಿಗೆ 'ವ' ಕಾರ 'ಯ' ಕಾರ ವ್ಯಂಜನಾಕ್ಷರಗಳೂ ಲಿಖಿತವಾಗಿವೆ.

ಉದಾ: ಇನಿತು-ಯನಿತು, ಈ ತತ್ವ-ಯೀ ತತ್ವ, ಎಲ್ಲ-ಯೆಲ್ಲ, ಓತು-ವೋತು ಇತ್ಯಾದಿ.

೨) ವರ್ಗಪಂಚಮ ಸಂಯುಕ್ತಾಕ್ಷರಗಳು ಬರವಣಿಗೆಯಲ್ಲಿ ಅನುಸ್ವಾರವಾಗಿ ಬಳಕೆಯಾಗಿವೆ.

ಉದಾ: ಬನ್ನಿ–ಬಂನಿ, ನಮ್ಮ–ನಂಮ ಇತ್ಯಾದಿ

೩) ಅಲ್ಪ ಪ್ರಾಣಾಕ್ಷರಗಳಿಗೆ ಮಹಾಪ್ರಾಣಾಕ್ಷರಗಳ ಬಳಕೆ

ಉದಾ: ಗಳಿಸಿದ–ಘಳಿಸಿದ, ತೆರೆ–ಥೆರೆ

೪) ಏತ್ವ ಮತ್ತು ಓತ್ವಗಳ ದೀರ್ಘಚಿಹ್ನೆಗಳ ಲೋಪ

ಉದಾ: ಲೋಕೇಶ–ಲೊಕೆಶ

೫) 'ಎ' ಕಾರಕ್ಕೆ ಅಕಾರೋಚ್ಛಾರ:

ಉದಾ: ಎಲ್ಲ–ಯಲ್ಲ, ಎರೆದು–ಎರದು, ಯರದು, ಕರೆದು–ಕರದು

೬) ಅಂತ್ಯ ವಕಾರವ್ಯಂಜನ ಲೋಪ

ಉದಾ: ವಸ್ತುಯಿವು–ವಸ್ತುಯಿಉ

“ರಾಗ–ತಾಳಗಳ ನಿರ್ದೇಶನಕ್ಕೆ ಸಂಬಂಧಿಸಿದಂತೆ ಸಂಪಾದಕೀಯ ತಿದ್ದುಪಾಟುಗಳನ್ನು ಚೌಕ ಕಂಸದಲ್ಲಿ ನೀಡದೆ ಸಾಮಾನ್ಯ ಕಂಸದಲ್ಲಿ ನೀಡಲಾಗಿದೆ. ರಾಗ–ತಾಳ ನಿರ್ದೇಶನಗಳು ಹಸ್ತಪ್ರತಿಯಲ್ಲಿ ಇಲ್ಲದ ಕಡೆ ಸಂಗೀತ ವಿದ್ವಾಂಸರ ಸಲಹೆ ಪಡೆದು ಕಂಸಗಳಲ್ಲಿ ಸೂಚಿಸಲಾಗಿದೆ. ಆದರೆ ಕೀರ್ತನೆ ೯ರಲ್ಲಿ ಪುಟ–೧೯ರಲ್ಲಿ ರಾಗ (ನಾಟ) ಎಂದಿದ್ದು ಅದೇ ಪುಟದ ಟಿಪ್ಪಣಿಯಲ್ಲಿ 'ಕ'ಪ್ರತಿಯಲ್ಲಿ ಮಾತ್ರ ರಾಗ ನಿರ್ದೇಶ ಎಂದಿದೆ. ಅಂದರೆ ನಾಟ ಎಂಬುದು 'ಕ' ಪ್ರತಿಯ ರಾಗ ನಿರ್ದೇಶನವೋ ಅಥವಾ ಕಂಸಗಳಲ್ಲಿರುವುದರಿಂದ ಸಂಗೀತ ವಿದ್ವಾಂಸರ ನಿರ್ದೇಶನವೋ ಸ್ಪಷ್ಟವಾಗಿಲ್ಲ ಇದೇ ಅಂಶವನ್ನು ಕೀರ್ತನೆ ೧೯, ಪುಟ–೩೩ರಲ್ಲೂ ಇದನ್ನು ಗಮನಿಸಬಹುದು.”[೧೧]

ಪುಟ ೨೩ ಮತ್ತು ೫೨ ಇತ್ಯಾದಿಗಳಲ್ಲಿ ಚೌಕಕಂಸದಲ್ಲಿರುವ [ಈ] [ಇ] [ಗೆ] [ಡೆ], ಇವುಗಳಿಗೆ ಹಸ್ತಪ್ರತಿಯಲ್ಲಿ ಯಾವ ಅಕ್ಷರಗಳಿವೆಯೆಂಬುದನ್ನು ಸೂಚಿಸಿವೆಲ್ಲ.

ಕೀರ್ತನೆಗಳನ್ನು ಹಾಡಬೇಕಾಗಿರುವುದರಿಂದ ಕೊನೆಯಲ್ಲಿ ಹ್ರಸ್ವವಿದ್ದರೂ ಎಳೆದು ಹಾಡಬೇಕು ಆದ್ದರಿಂದ ಪದಾಂತ್ಯದ ಹ್ರಸ್ವ ಸಾಮಾನ್ಯವಾಗಿ ದೀರ್ಘವಾಗಿರುತ್ತದೆ. ಕೆಲವು ಉದಾ.ನೋಡಬಹುದು.

ಕೀರ್ತನೆ ಒಂದು:

“ಕೊಡುಮತಿಯ ಗಣನಾಥ ಪೊಡಮಡುವೆ ನಿನ್ನಡಿಗೆ

ಜಡಮತಿಯ ಕಡೆಗೊಳಿಸಿ ಮೃಡತನಯ ಸಲಹು

ಮೃಡನೆನಲು ಸುಖರೂಪನೊಡನಿಪ್ಪ ಮತಿ ಮೃಡನು

ಜಡತಾನು ಕಲ್ಪಿತವು ಬಿಡಿಸಿದನು ನೀನು ಕೊಡುಮತಿಯನು”[೧೨]

ಈ ಕೀರ್ತನೆಯ ಎಲ್ಲಾ ಪದ್ಯಗಳಲ್ಲಿಯೂ ಕೊನೆಯ ಅಕ್ಷರ ಅಂದರೆ ಮತಿಯನೂ ವಿಹುದೂ, ಮಾಡಯ್ಯಾ, ಬಳಿಕಾ, ವರ್ಣಾ ಇತ್ಯಾದಿ ದೀರ್ಘವಾಗುತ್ತವೆ. ಎಂಬುದನ್ನು ಸಂಪಾದಕರು ಸೂಚಿಸಿದ್ದಾರೆ.

“ತಿಮ್ಮಪ್ಪದಾಸರ ‘ಪೂಜಾವಿಧಾನಕೀರ್ತನೆಗಳು’ ಮತ್ತು ಅವರ ಇತರ ಹಲವಾರು ರಚನೆಗಳು ಲಿಖಿತವಾಗಿರುವ ಕಾಗದದ ಹಸ್ತಪ್ರತಿಯಲ್ಲಿ ನಾರಾಯಣದಾಸರ ೩೭ ಕೀರ್ತನೆಗಳು ದೊರೆತಿವೆ”[೧೩] ಇದೇ ಪ್ರತಿ ಸಂಪಾದಕರ ಪಾಠಪರಿಷ್ಕರಣಕ್ಕೆ ಆಧಾರ ಪ್ರತಿಯಾಗಿದೆ. ಈ ಕೃತಿಗೆ ‘ಕೀರ್ತನ ಕುಸುಮಾಂಜಲಿ ಎಂಬ ಹೆಸರಿನಿಂದ ಅಚ್ಚುಮಾಡಲಾಗಿದೆ.

IV) ಕೀರ್ತನ ಕುಸುಮಾಂಜಲಿ ಗ್ರಂಥದ ಪಾಠಪರಿಷ್ಕರಣೆಯ ವೈಶಿಷ್ಟ್ಯಗಳು

ಸಂಪಾದಕರು ಈ ಕೀರ್ತನೆಗಳು ನಾರಾಯಣದಾಸರ ಸ್ವಹಸ್ತಾಕ್ಷರದಲ್ಲಿಯೇ ಲಿಖಿತವಾಗಿವೆಯೆಂಬುದನ್ನು ನಿರೂಪಿಸಿದ್ದಾರೆ. ಅಲ್ಲದೆ ಕೃತಿಯಲ್ಲಿಯೇ ಇದಕ್ಕೆ ಆಧಾರಗಳು ದೊರಕುತ್ತವೆ. ಸಾಮಾನ್ಯವಾಗಿ ಕೀರ್ತನೆಗಳಲ್ಲಿ ನಾರಾಯಣದಾಸರ ಅಂಕಿತವಿದೆ. ಕೆಲವು ಕೀರ್ತನಗಳಲ್ಲಿ ‘ದಾಸ’ ಎಂದಷ್ಟೇ ಇರುವುದರಿಂದ ಇವು ನಾರಾಯಣದಾಸರವೋ, ತಿಮ್ಮಪ್ಪ ದಾಸರವೋ ಎಂಬ ಸಂದೇಹ ಸಂಪಾದಕರಿಗಿತ್ತು ಆದರೆ ಅದನ್ನು ಹಸ್ತಪ್ರತಿಯ ೩೩ನೆಯ ಹಾಳೆಯ ಹಿಂಬದಿಯಲ್ಲಿ ಯಿಲ್ಲಿಂದ ಮುಂದಕ್ಕೆ ನಾರಾಯಣದಾಸರ ಕೃತಕೀರ್ತನಾಃ”[೧೪] ಎಂದು ಸ್ಪಷ್ಟ ಉಲ್ಲೇಖವಿರುವುದರಿಂದ ಇವು ನಾರಾಯಣದಾಸರ ರಚನೆಗಳೆಂದು ನಿರ್ಧರಿಸಬಹುದು.

ಒಂದೇ ಹಸ್ತಪ್ರತಿಯಲ್ಲಿ ತಿಮ್ಮಪ್ಪದಾಸರ ಮತ್ತು ಅವರ ಮಗ ನಾರಾಯಣದಾಸರ ಕೀರ್ತನೆಗಳು ಲಿಖಿತವಾಗಿರುವುದರಿಂದ ಸಂಪಾದಕರು ಕೀರ್ತನೆಗಳ ವಸ್ತು, ಭಾಷಾ ಶೈಲಿ, ಬರವಣಿಗೆಯ ಹಿನ್ನಲೆಯಲ್ಲಿ ಪಾಠಪರಿಷ್ಕರಣೆ ಮಾಡಿದ್ದಾರೆ.

ನಾರಾಯಣದಾಸರ ಸ್ಥಳ ಮತ್ತು ಕಾಲವನ್ನೂ ಕೂಡ ತಿಮ್ಮಪ್ಪದಾಸರ ಕೃತಿಗಳು ಲಿಖಿತವಾಗಿದ್ದ ಓಲೆಯಗರಿಗಳ ಕಟ್ಟುಗಳನ್ನು ವಿಂಗಡಿಸಿ ಪರಿಶೀಲಿಸುವ ಸಂದರ್ಭದಲ್ಲಿ 'ಜಾತಕದ ಕುಂಡಲಿ' ಮತ್ತು ಜನ್ಮ ವಿವರಗಳನ್ನು ಬರೆದಿಟ್ಟಿದ್ದ ಒಂಟಿ ಓಲೆಗರಿಯಿಂದ ಪತ್ತೆಹಚ್ಚಿದ್ದಾರೆ. ಅದರ ಪ್ರಸಕ್ತ ಭಾಗ ಹೀಗಿದೆ. "ಶಾಲಿವಾಹನಶಕಾಬ್ಧಂಗಳಲ್ಲಿ ೧೭೪೪ನೇ ಸಂದ ಚಿತ್ರಭಾನು ಸಂವತ್ಸರದ ಮಾಘ ಬಹುಳ ೩೦ ಮಂಗಳವಾರ......... ಚಿರಂಜೀವಿ ತಿಮ್ಮಪ್ಪಯ್ಯನ ಜೇಷ್ಠ ಪುತ್ರ ನಾರಾಯಣನ ಜನನ"[೧೫] ಎಂಬುದರಿಂದ ನಿರ್ದರಿಸಿದ್ದಾರೆ.

ಪ್ರಸ್ತುತ ಹಸ್ತಪ್ರತಿ ಒಂದೇಯಿರುವುದರಿಂದ ಪಾಠಾಂತರಗಳು ಯಾವುವು ಇಲ್ಲವಾದರೂ ಬರವಣಿಗೆಯ ಕೆಲವು ವೈಲಕ್ಷಣಗಳನ್ನು ಸಂಪಾದಕರು ಗುರ್ತಿಸಿದ್ದಾರೆ ಕೆಲವು ಉದಾಹರಣೆಗಳು

೧) ವರ್ಣ, ಸ್ವರ್ಣ ಇತ್ಯಾದಿ ಪದಗಳಲ್ಲಿ ಇ ಕಾರಕ್ಕೆ ಬದಲಾಗಿ ನ ಕಾರ

೨) ಅಲ್ಪ ಪ್ರಾಣ ಮತ್ತು ಮಹಾಪ್ರಾಣಗಳ ಬೇಧ

೩) ಸಕಾರಕ್ಕೆ ಬದಲಾಗಿ ಶ ಕಾರ ಇತ್ಯಾದಿ.

ಒಟ್ಟಾರೆಯಾಗಿ ಆದಷ್ಟು ಮಟ್ಟಿಗೆ ಸಂಪಾದಕರು ಉತ್ತಮವಾದ ಪಾಠವನ್ನು ನೀಡುವಲ್ಲಿ ಸಾಕಷ್ಟು ಶ್ರಮವನ್ನು ವಹಿಸಿದ್ದಾರೆಂಬುದು ಅವರ ಸಂಪಾದಿತ ಕೃತಿಗಳ ಅದ್ಯಯನದಿಂದ ಸಾಬೀತಾಗುತ್ತದೆ.

ಆ) ಪಾಠಾಂತರಗಳು

ಗ್ರಂಥಸಂಪಾದನೆಯಲ್ಲಿ ಪಾಠಾಂತರ ಸಂಕಲನ ಒಂದು ಮುಖ್ಯ ಭಾಗವಾಗಿದೆ. ಸಂಪಾದಕ ತನಗೆ ದೊರೆತ ಎಲ್ಲಾ ಪ್ರತಿಗಳ ಪಾಠಾಂತರಗಳನ್ನು ಒಂದು ಪ್ರತಿಯಲ್ಲಿ ಒಟ್ಟಾಗಿ ಕೂಡಿಸುವುದಕ್ಕೆ ಪಾಠಾಂತರ ಸಂಕಲನವೆಂದು ಕರೆಯಬಹುದು. "ಗ್ರಂಥ ಸಂಪಾದನೆಗಾಗಿ ಎತ್ತಿಕೊಂಡ ಒಂದು ಗ್ರಂಥದ ಹಸ್ತಪ್ರತಿಗಳು ಎಷ್ಟು ದೊರೆಯುತ್ತವೆಯೋ ಅಷ್ಟನ್ನೂ ಸಂಪಾದಕ ಪರಿಶೀಲಿಸುವುದು ಅಗತ್ಯ. ದೊರೆತ ಪ್ರತಿಗಳಲ್ಲಿ ಕಾಲದ ದೃಷ್ಠಿಯಿಂದ ಪ್ರಾಚೀನವಾದವು, ಪ್ರಾದೇಶಿಕ ದೃಷ್ಟಿಯಿಂದ ಗಮನಾರ್ಹವಾದವೂ, ಪರಿಶುದ್ಧತೆಯಿಂದ ಉತ್ತಮವಾದವನ್ನು ಸಂಪಾದಕ ಆರಿಸಿಕೊಳ್ಳಬೇಕು. ಒಂದು ಪ್ರತಿಯ ಲೇಖನದ ಕಾಲದೇಶಗಳು ಗೊತ್ತಾಗದೆ ಇದ್ದರೂ ಅದು ಪರಿಶುದ್ಧವೆಂದು ಕಂಡುಬಂದರೆ ಅದನ್ನು ಸಂಪಾದಕ ಗಣನೆಗೆ ತೆಗೆದುಕೊಳ್ಳಬೇಕು".[೧೬]

ಸಂಪಾದಕ ಕಾಲ, ಪ್ರಾದೇಶಿಕ ಪರಿಶುದ್ಧತೆಯ ದೃಷ್ಠಿಯಿಂದ ಉತ್ತಮವಾದ ಪ್ರತಿಯನ್ನು ಆಧಾರವಾಗಿಟ್ಟುಕೊಂಡು ಪಾಠಾಂತರಗಳನ್ನು ಗುರ್ತಿಸಿಕೊಳ್ಳಬೇಕು. ಕಡಿಮೆ ಹಸ್ತಪ್ರತಿಗಳಿದ್ದರೆ ಸಂಪಾದಕ ಒಬ್ಬನೇ ಪಾಠಾಂತರ ಸಂಕಲನ ಮಾಡಲು ಸಾಧ್ಯ. ಹಸ್ತಪ್ರತಿಗಳು ಹೆಚ್ಚಾಗಿದ್ದಾಗ ಹೆಚ್ಚು ಜನರ ಅವಶ್ಯಕತೆಯಿರುತ್ತದೆ. ಪಾಠಾಂತರಗಳ ಸಂಕಲನದ ನಂತರದ ಕಾರ್ಯ ಸ್ಖಾಲಿತ್ಯಗಳನ್ನು ಗುರ್ತಿಸುವುದಾಗಿರುತ್ತದೆ.

ಹಸ್ತಪ್ರತಿಗಳನ್ನು ಓದುವುದೂ ಒಂದು ಕಲೆ. ಹಸ್ತಪ್ರತಿಗಳಲ್ಲಿನ ಲಿಪಿ, ಭಾಷೆ ಇವುಗಳನ್ನು ಓದಲು ಸಾಕಷ್ಟು ಪರಿಶ್ರಮಬೇಕಾಗುತ್ತದೆ. ಹಸ್ತಪ್ರತಿಗಳನ್ನು ತಪ್ಪಾಗಿ ಓದಿದರೆ ಆಗುವ ಅನರ್ತಗಳನ್ನು ಊಹಿಸಲು ಅಸಾಧ್ಯ. ಹಸ್ತಪ್ರತಿಯಿಂದ ಪ್ರತಿಮಾಡುವುದರಿಂದ ಹಿಡಿದು ಪಾಠಾಂತರಗಳನ್ನು ಗುರ್ತಿಸಿಕೊಂಡು ಕವಿಯ ಪಾಠವನ್ನು ಕಂಡುಹಿಡಿಯುವುದು ಅತ್ಯಂತ ಕಠಿಣವಾದ ಕೆಲಸ.

ಕವಿರಾಜಮಾರ್ಗ ಕನ್ನಡ ಸಾಹಿತ್ಯದ ಪ್ರಥಮ ಲಕ್ಷಣಗ್ರಂಥವಾಗಿದ್ದು, ಎಂ.ವಿ.ಸೀ ಸಂಪಾದಿಸುವುದಕ್ಕೆ ಮುಂಚೆ ಎರಡು ಮುದ್ರಣಗಳನ್ನು ಕಂಡಿತ್ತು. ಎಂ.ವಿ.ಸೀ ಈ ಎರಡು ಮುದ್ರಣಗಳ ಜೊತೆಗೆ ಮತ್ತೆರಡು ಹಸ್ತಪ್ರತಿಗಳನ್ನು ಉಪಯೋಗಿಸಿಕೊಂಡು ಪಾಠಪರಿಷ್ಕರಣೆ ಕೈಗೊಂಡು ಪಾಠಾಂತರಗಳನ್ನು ಗುರ್ತಿಸಿ ಪಾಠಾಂತರಗಳನ್ನು ಅಡಿಟಿಪ್ಪಣಿಯನ್ನು ಕೊಡದೆ

ಕೊನೆಯಲ್ಲಿ ಪ್ರತ್ಯೇಕವಾಗಿ ನೀಡಿದ್ದಾರೆ. ಎಲ್ಲಾ ಹಸ್ತಪ್ರತಿಯಿಂದ ಪಾಠ ಸಮಸ್ಯೆಗಳು ಬಗೆಹರಿಯದಿದ್ದಾಗ ಸ್ವೀಕೃತ ಪಾಠಗಳನ್ನು, ಸೂಚಿತ ಪಾಠಗಳನ್ನು ನೀಡಿದ್ದಾರೆ.

ಎಂ.ವಿ.ಸೀ ಸೂಚಿಸಿರುವ ಸ್ವೀಕೃತ ಪಾಠಗಳು ಅತ್ಯಂತ ಉತ್ತಮವಾದವುಗಳಾಗಿದ್ದು ಇವು ಅವರ ಪಾಂಡಿತ್ಯ, ಪ್ರತಿಭೆ, ಬಹುಶ್ರುತತ್ವಕ್ಕೆ ಹಿಡಿದ ನಿದರ್ಶನಗಳಾಗಿವೆ. ಅವುಗಳನ್ನು ಮುಂದಿನಂತೆ ನೋಡಬಹುದು.

ಪ್ರಥಮ ಪರಿಚ್ಛೇದ-ಪದ್ಯ-೩

“ಶ್ರೀವಿಷದವರ್ಣೆ ಮಧುರಾ
ರಾಮೋಚಿತೆ ಚತುರರುಚಿರ ಪದರಚನೆ ಚಿರಂ
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನ ಸದೊಳ್”.[೧೭]

ಈ ಪದ್ಯದ ೩ನೆಯ ಪಂಕ್ತಿಯ ಪಾಠಾಂತರಗಳು ಬೇರೆಬೇರೆಯಾಗಿವೆ. ಮದ್ರಾಸುಮುದ್ರಣದ ಪಾಠ ‘ಹಂಸೀಭಾವದೆ ಎಂದಿದೆ. ಕೆ.ಬಿ ಪಾಠಕರು ಸಂಪಾದಿಸಿರುವ ಮುದ್ರಿತ ಪ್ರತಿಯ ಪಾಠ ಮತ್ತು ಮೈಸೂರು ಓರಿಯಂಟಲ್ ಲೈಬ್ರರಿಯ ನಂ.೧೨೫ ಹಸ್ತಪ್ರತಿಯ ಪಾಠ ‘ಹಂಸವಿಭಾವದೆ’ ಎಂದಿದೆ. ಮೈಸೂರು ಓರಿಯಂಟಲ್ ಲೈಬ್ರರಿಯ ನಂ.೧೧೦ ಹಸ್ತಪ್ರತಿಯ ಪಾಠ ‘ಹಂಸವಿಭಾವದಿ’ ಎಂದಿದೆ. ಸಂಪಾದಕರು ಈ ಎಲ್ಲಾ ಪಾಠಾಂತರಗಳನ್ನು ಗಮನಿಸಿ ತಮ್ಮ ವಿದ್ವತ್ತಿನಿಂದ ಮದ್ರಾಸು ಮುದ್ರಣದ ಪಾಠವನ್ನು ಸ್ವೀಕೃತ ಪಾಠವಾಗಿ ಸ್ವೀಕರಿಸಿದ್ದಾರೆ.

ಪದ್ಯ ೧೨೮

“ನೆರೆದು ಬಂದಪರವರ್ ಸಯಲಾಬಲಮೆಲ್ಲಮೆ
ಳ್ತಿರದೆ ಕೊಂದಪನಿವಂದಿರ ನೀಗಳೆ ನಿಕ್ಕುವಂ
ಪರಿದು ಬೀಳ್ವೆವೊಲಿವಂದಿರ ಪಾಡಳಿ ವಂದಮಂ
ತಿರವೇ (ಳೊ)ಡ್ಡಳಿಯದಂತಿರೆ ನಮ್ಮವರೆಲ್ಲರಂ” [೧೮]

ಈ ಪದ್ಯದ ೪ನೆಯ ಪಂಕ್ತಿಯ ಪಾಠಗಳು ಮದ್ರಾಸು ಮುದ್ರಣದ ಪಾಠ 'ತಿರವೇ ಳೊಡವೆ' ಎಂದಿದೆ. ಕೆ.ಬಿ.ಪಾಠಕರ ಸಂಪಾದಿತ ಮುದ್ರಿತ ಪ್ರತಿಯಲ್ಲಿ ತಿರವೆಳೊಡಳಿತಿ ಎಂದಿದೆ ಎಂ.ವಿ.ಸೀಯವರು ಮದ್ರಾಸು ಮುದ್ರಣದ ಪಾಠವನ್ನು ಸ್ವೀಕೃತ ಪಾಠವಾಗಿ ಈ ಗ್ರಂಥದಲ್ಲಿ ಸ್ವೀಕರಿಸಿದ್ದಾರೆ.

ಪರಿಚ್ಛೇದ ೨ ಪದ್ಯ ೧೧೩

"ಇವು ದುಷ್ಕರ ಕಾವ್ಯಂಗಳ್ ಸವಿಶೇಷವರ್ತಿಗಳ

ಸುವಿಚಾರಿತಮೀ ತೋರ್ಪೆ (ನಿ) ವರಲಕ್ಷ್ಯಭೇಧಮಂ"[೧೯]

ಈ ಪದ್ಯದ ೨ನೆಯ ಪಂಕ್ತಿಯು ಕೆ.ಬಿ ಪಾಠಕರು ಸಂಪಾದಿಸಿರುವ ಮುದ್ರಿತ ಪಾಠ 'ತೋರ್ಪೆಮಿವರಿ" ಎಂದಿದೆ ಮದ್ರಾಸು ಮುದ್ರಣದ ಪಾಠ ತಿದ್ದುಪಾಠವಾಗಿದ್ದು ಅದು "ಮಿವ (ಳೂ)" ಎಂದಿದೆ. ಸಂಪಾದಕರು ಸ್ವತಃ ತಾವೇ ತಿದ್ದುಪಾಟ್ಟು ಮಾಡಿದ್ದಾರೆ. ಅದು 'ತೋರ್ಪೆ(ನಿ)ವರಿ' ಎಂದು

ಪದ್ಯ ೧೪೬

"ತಿರಿವುದದೊಂದು ಚಕ್ರದೊಳೆ ನಿಂದು ದಿವಾ

ಕರನೆ ಮತ್ತ(ರಿ)ದು ಕಳೆವೊಡಂತದನಾವೆಡೆಯಿಂ

ದರಮೆಯಾಗಿ ನೆಲಸಿ ಕೆಲಕಾಲದಿಂ

ಪೊರೆದಿರದಳೆದಬಳಿಕತಾ ನೆಲದೊಳ್"[೨೦]

ಈ ಪದ್ಯದ ೨ನೆಯ ಪಂಕ್ತಿ ಕೆ.ಬಿ.ಪಾಠಕರ ಮುದ್ರಿತ ಪ್ರತಿ ಮತ್ತು ಮದ್ರಾಸು ಮುದ್ರಣ ಪ್ರತಿಯಲ್ಲಿ 'ಮತ್ತರೆದು' ಎಂದಿದೆ ಸಂಪಾದಕರು ಇಲ್ಲಿ ಮತ್ತ(ರಿ)ದು' ಎಂದು ಸ್ವೀಕೃತ ಪಾಠವನ್ನು ತಾವೇ ಸ್ವತಃ ತಿದ್ದುಪಾಟು ಮಾಡಿದ್ದಾರೆ.

ಪರಿಚ್ಛೇದ ೩:ಪದ್ಯ ೨೪

"ವದನಮಿದಲ್ತಂಬುರುಹಂ

ಮದಲೋಲವಿಲೋಚನಂಗಳಲ್ಲಮಿವಳಿಗಳ್

ಮುದಮಲ್ಲಿದು ವಿಕಸನಮೆಂ

ಬಿಂದನಿಂ(ಬೆ)ನೆ ಬಗೆಗೆ ರೂಪಕಾಪಹ್ನುತಿಯಂ"[೨೧]

ಈ ಪದ್ಯದ ೪ನೆಯ ಪಂಕ್ತಿ ಕೆ.ಬಿ.ಪಾಠಕರ ಮುದ್ರಣದಲ್ಲಿ 'ನಿಂಬನೆ' ಎಂದಿದೆ ಮದ್ರಾಸು ಮುದ್ರಣದ ಪಾಠ 'ನಿಂಬಿನೆ' ಎಂದಿದೆ ಸಂಪಾದಕ ಎರಡನ್ನು ಮದ್ರಾಸು ಮುದ್ರಣದ ಪಾಠ 'ನಿಂಬಿನೆ' ಎಂದಿದೆ ಸಂಪಾದಕ ಎರಡನ್ನು ಕಡೆಗಣಿಸಿ 'ನಿಂ(ಬೆ)ನೆ' ಎಂಬ ಪಾಠವನ್ನು ಸ್ವೀಕರಿಸಿದ್ದಾರೆ.

ಪದ್ಯ:೧೫೦

"ಪರಪಕ್ಷಮುಳ್ಳಿನಂ ತನ

ನಿರವುಬ್ಬಸಮದರೆನ (ೞ) ವುದದನೇಗೆಯ್ದುಂ

ಪರೆದ ಪುಡಿಯೆಲ್ಲಮಂ ನೀರ್

ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೇ"[೨೨]

ಪದ್ಯದ ೨ನೆಯ ಪಂಕ್ತಿ ಮದ್ರಾಸು ಮುದ್ರಣದ ಪಾಠ ಮತ್ತು ಕೆ.ಬಿ.ಪಾಠಕರ ಮುದ್ರಣದ ಪಾಠ 'ಮದರೆನರೆವುದದ' ಎಂದಿದೆ ಸಂಪಾದಕರು ಇವನ್ನು ನಿರಾಕರಿಸಿ ಸ್ವತಃ ತಾವೆ "ಮದರೆನ(ರೆ)ವುದದ" ಎಂದು ತಿದ್ದುಪಾಟು ಮಾಡಿ ಸ್ವೀಕೃತ ಪಾಠವಾಗಿ ಸ್ವೀಕರಿಸಿದ್ದಾರೆ.

ಗ್ರಂಥಸಂಪಾದನೆಯ ಕಾರ್ಯದಲ್ಲಿ ಕವಿಪಾಠ ನಿಷ್ಕರ್ಷೆ ಸಂಪಾದಕನ ಮುಖ್ಯಗುರಿ ಭಿನ್ನ ಪಾಠಗಳನ್ನು ವಿಮರ್ಶಿಸಿ ಕವಿ ಪಾಠಕ್ಕೆ ಹತ್ತಿರವಾದ ಪರಿಷ್ಕೃತ ಪಾಠವನ್ನು ಸಂಪಾದಿಸಿಕೊಡುವುದು ಸಂಪಾದಕನ ಮುಖ್ಯ ಗುರಿಯಾಗಿರುತ್ತದೆ. ಪ್ರಸ್ತುತ ಅರ್ಜುನ ಗ್ರಂಥದ ಸಂಪಾದನೆಯಲ್ಲಿ ಈ ಕಾರ್ಯಭಾಗ ಸಂಪಾದಕನಿಗೆ ಬಹು ಸುಲಭದ ಸಂಗತಿಯಾಗಿದೆ. ಕಾರಣ ಸಂಪಾದಕನಿಗೆ ಕೃತಿಯ ಸ್ವಹಸ್ತಾಕ್ಷರ ಪ್ರತಿಯೇ ದೊರೆತಿರುವುದು. ಇಲ್ಲಿ ಭಿನ್ನಪಾಠಗಳು ಕವಿಯವೇ ಆಗಿರುವುದರಿಂದ ಬರವಣಿಗೆಯಲ್ಲಿ ಕಂಡುಬರುವ ವೈಲಕ್ಷಣಗಳೆಲ್ಲವೂ ಉಚ್ಚಾರಣೆಗೆ ಅನುಗುಣವಾಗಿ ಬರೆದಿರುವುದರಿಂದ ಉಂಟಾಗಿರತಕ್ಕವು.

ಉದಾಹರಣೆಗೆ:-

೧) ಆದಿಸ್ವರೋಚ್ಚಾರಣೆಯೊಂದಿಗೆ 'ವ'ಕಾರ ವ್ಯಂಜನ 'ಯ'ಕಾರ ವ್ಯಂಜನಾಕ್ಷರವಾಗಿ ಲಿಖಿತವಾಗಿವೆ.

ಉದಾ: ಇನಿತು – ಯನಿತು

ಈ ತತ್ವ –ಯೀ ತತ್ವ

ಎಲ್ಲ – ಯೆಲ್ಲ

ಓತು – ವೋತು ಮುಂತಾದವು

೨) ವರ್ಗ ಪಂಚಮ ಸಂಯುಕ್ತಾಕ್ಷರಗಳ ಬರವಣಿಗೆಯಲ್ಲಿ ಅನುಸ್ವಾರದ ಬಳಕೆ,

ಉದಾ:– ಬನ್ನಿ – ಬಂನಿ

ನಮ್ಮ – ನಂಮ ಮುಂತಾದವು

೩) ಅಲ್ಪಪ್ರಾಣಗಳ ಬದಲಿಗೆ ಮಹಾಪ್ರಾಣಗಳ ಬಳಕೆ

ಉದಾ: ಗಳಿಸಿದ – ಘಳಿಸಿದ

ತೆರೆ – ಥೆರೆ

೪) ಐತ್ವ – ಓತ್ವಗಳ ದೀರ್ಘ ಚಿಹ್ನೆಗಳ ಲೋಪ:

ಉದಾ: ಲೋಕೇಶ – ಲೊಕೆಶ

೫) 'ಎ' ಕಾರಕ್ಕೆ ಅಕಾರೋಚ್ಚಾರ:-

ಉದಾ: ಎಲ್ಲ–ಯೆಲ್ಲ

ಎರೆದು –ಎರದು, ಯರದು

ಕರೆದು – ಕರದು

೬) ಅಂತ್ಯ ವಕಾರವ್ಯಂಜನ ಲೋಪ

ಉದಾ: ವಸ್ತುಯಿವು–ವಸ್ತುಯಿಉ

ಇಂತಹ ಇನ್ನೂ ಮುಂತಾದ ಕೆಲವು ಬರವಣಿಗೆಯಲ್ಲಿ ಕಂಡುಬರುವ ವೈಲಕ್ಷಣಗಳನ್ನು ಗುರ್ತಿಸಿದ್ದಾರೆ.

ಕೀರ್ತನೆಗಳು ಹಾಡುಗಳಾದ್ದರಿಂದ ಕೊನೆಯಲ್ಲಿ ಹ್ರಸ್ವವಿದ್ದರೂ ಎಳೆದು ಹಾಡಬೇಕಾಗಿರುವುದರಿಂದ ಪದಾಂತ್ಯದ ಹ್ರಸ್ವ ಸಾಧಾರಣವಾಗಿ ದೀರ್ಘವಾಗುತ್ತದೆ. ಇದನ್ನು ಸಂಪಾದಕ ಒಂದನೆಯ ಕೀರ್ತನೆಯಲ್ಲಿ ಉಲ್ಲೇಖಿಸಿದ್ದಾರೆ.

ಉದಾ: ಮತಿಯನೂ, ವಿಹುದೂ, ಮಾಡಯ್ಯಾ, ಬಳಿಕಾ, ವರ್ಣಾ ಇಂಥಲ್ಲೆಲ್ಲಾ ದೀರ್ಘವನ್ನು ಸಾಮಾನ್ಯವಾಗಿ ಸಂಪಾದಕರು ಹ್ರಸ್ವಮಾಡಿದ್ದಾರೆ.

ಕೆಲವು ಕೀರ್ತನೆಗಳಲ್ಲಿ ತಾಳದ ಕಾಲ, ಪ್ರಮಾಣಕ್ಕೆ, ಅಕ್ಷರ ಸಂಖ್ಯಾ ಪ್ರಮಾಣ ಕಡಿಮೆ ಬಿದ್ದಾಗ, ಎಳೆದು ಹಾಡಬೇಕೆಂದು ತೋರಿಸುವುದಕ್ಕಾಗಿ ಸಂಪಾದಕರು ಹ್ರಸ್ವಾಕ್ಷರಗಳನ್ನು ದೀರ್ಘಮಾಡಿ ಬರೆದಿದ್ದಾರೆ.

ಉದಾ: ಕೀರ್ತನೆ ವೀಣಾನಾದ

ವೇದರೂಪದಿ – ವೇದರೂಪಾದಿ

ಪಾದವೆರಡು – ಪಾದಾವೆರಡು

ಸಂಚರಿಪುದ – ಸಂಚರೀಪೂದ

ಕವಿಯ ಹಸ್ತಪ್ರತಿಗಳೇ ಎರಡಿರುವುದರಿಂದ ಕವಿಯೆ ಮಾಡಿಕೊಂಡಿರುವ ಬದಲಾವಣೆಗಳನ್ನು ಸಂಪಾದಕರು ಗ್ರಂಥದ ಪ್ರತಿಯೊಂದು ಕೀರ್ತನೆಯಲ್ಲಿಯೇ ನೀಡಿದ್ದಾರೆ. ಅಲ್ಲದೆ ಎರಡು ಪ್ರತಿಗಳಲ್ಲಿ ಸರಿಯಿಲ್ಲದ ಕಡೆ ಸ್ವತಃ ತಾವೇ ತಮ್ಮ ವಿದ್ವತ್ತಿನ ವಿವೇಚನಾ ಶಕ್ತಿಯಿಂದ ತಿದ್ದಿದ್ದಾರೆ. ಇದನ್ನು ನಾವು ಗ್ರಂಥದ ಪ್ರತಿಯೊಂದು ಕೀರ್ತನೆಯ ಅಡಿಯಲ್ಲಿಯೇ ಕಾಣಬಹುದು.

'ಕ' ಪ್ರತಿಯಲ್ಲಿಲ್ಲದ ಕಂದಪದ್ಯಗಳು 'ಗ' ಪ್ರತಿಯಲ್ಲಿರುವುದನ್ನು ಸಂಪಾದಕರು ಗುರ್ತಿಸಿದ್ದಾರೆ.

"ಶನಿವಾರದ ಕುಸುಮಾರ್ಚನೆ

ಶಶಧರ ಧರ ಮಿತ್ರ ನಿನ್ನ ಚರಣಕ್ಕೊಪ್ಪಲ್

ಹಸನಾಗಿ ನರ್ತಿಸುವದನು

ಕುಶಲದಿ ನೀ ನೋಡಿ ಸಲಹು ವೆಂಕಟರಮಣಾ"

“ಬುಧವಾರದರ್ಚನೆಯ ನಾಂ
ವಿಧಿಯಿಂದರ್ಪಿಸಿದೆ ನಿನ್ನ ಪಾದ ಪದುಮಗಳಿಗೆ
ವಿದಿಜನಕ ನೀನೆ ತಿರುಪತಿ
ಸದನನೆ ಸಲಹೆಮ್ಮ ಬಿಡದೆ ವೆಂಕಟರಮಣಾ”[೨೩]

ರಾಗ–ತಾಳ ನಿರ್ದೇಶನಕ್ಕೆ ಸಂಬಂಧಿಸಿದಂತೆ, ಸಂಪಾದಕೀಯ ತಿದ್ದುಪಾಟುಗಳನ್ನು ಚೌಕಕಂಸದಲ್ಲಿ ನೀಡದೆ ಸಾಮಾನ್ಯ ಕಂಸಗಳಲ್ಲಿಯೇ ನೀಡಿದ್ದಾರೆ. ರಾಗ–ತಾಳ ನಿರ್ದೇಶನಗಳು ಹಸ್ತಪ್ರತಿಯಲಿಲ್ಲದ ಕಡೆ ಸಂಗೀತ ವಿದ್ವಾಂಸರ ಸಲಹೆ ಪಡೆದು ಕಂಸಗಳಲ್ಲಿ ಸೂಚಿಸಲಾಗಿದೆ. ಆದರೆ ಕೀರ್ತನೆ ೯ ರಲ್ಲಿ, ಪುಟ ೧೬ರಲ್ಲಿ ರಾಗ (ನಾಟ) ಎಂದಿದ್ದು ಅದೇ ಪುಟದ ಅಡಿಟಿಪ್ಪಣಿಯಲ್ಲಿ ‘ಕ’ ಪ್ರತಿಯಲ್ಲಿ ಮಾತ್ರ ರಾಗನಿರ್ದೇಶನ ಎಂದಿದೆ. ಅಂದರೆ ‘ನಾಟ’ ಎಂಬುದು ‘ಕ’ ಪ್ರತಿಯ ರಾಗನಿರ್ದೇಶವೋ ಅಥವಾ ಸಂಗೀತ ವಿದ್ವಾಂಸರ ನಿರ್ದೇಶವೋ ಸ್ಪಷ್ಟವಾಗಿಲ್ಲ ಇದೇ ಅಂಶವನ್ನು ಕೀರ್ತನೆ ೧೯ ಪು.೩೩ರಲ್ಲೂ ಕಾಣಬಹುದು.

ಪುಟ.೨೩, ೫೨ ಇತ್ಯಾದಿ ಚೌಕಕಂಸದಲ್ಲಿರುವ (ಈ), (ಇ), (ಗೆ), (ಡೆ) ಇವುಗಳಿಗೆ ಬದಲಾಗಿ ಹಸ್ತಪ್ರತಿಯಲ್ಲಿ ಯಾವ ಅಕ್ಷರಗಳಿವೆಯೆಂಬುದು ಗೊತ್ತಾಗುವುದಿಲ್ಲ.

ಪುಟ ೪೫ರ ಪಡೆ–ಪಡ್ಡೆ, ೪೬ರ ಶ್ರು–ಶೃ, ೮೧ರ ಜ್ರ್ಯಂ–ಜ್ರುಂ ಈ ಲಿಪಿಸ್ಖಾಲಿತ್ಯಗಳನ್ನೂ ಪಾಠಾಂತರಗಳೆಂದು ಅಡಿಟಿಪ್ಪಣಿಯಲ್ಲಿ ನೀಡಲಾಗಿದೆ. ಕೀರ್ತನೆ ೭೦, ಪುಟ ೯೫ರ ಎರಡನೆಯ ನುಡಿಯ ೧(ಯ)೧ ಎಂಬುದಕ್ಕೆ ಅಡಿಟಿಪ್ಪಣಿಯಲ್ಲಿ ‘ಯ’ (ಕ,ಗ) ಎಂದೇ ಪಾಠವನ್ನು ತೋರಿಸಲಾಗಿದೆ. ಅಂತೆಯೇ ತಾಳದ ಹೆಸರನ್ನು ಸೂಚಿಸುವಲ್ಲಿ ಜಂಪೆ (ಪುಟ ೧೦೪), ಝಂಪೆ ಎರಡೂ ರೂಪಗಳನ್ನೂ ಸ್ವೀಕರಿಸಲಾಗಿದೆ. ರಾಗದ ಸೂಚನೆಯಲ್ಲಿ ‘ಕಾಂಬೋದಿ’ (ಪುಟ ೧೪೭, ೧೪೯) ‘ಕಾಂಭೋಜಿ’ ಎರಡೂ ರೂಪಗಳನ್ನೂ ಕಾಣುತ್ತೇವೆ. ಇವುಗಳಲ್ಲಿ ಒಂದೊಂದು ರೂಪವನ್ನೇ ನಿಯತವಾಗಿ ಬಳಸಬೇಕಾಗಿತ್ತು.

ಪುಟ ೧೪೬ರ ಅಡಿಟಿಪ್ಪಣಿಯಲ್ಲಿ ನೀಡಿರುವ ವಿಶೇಷ ಟಿಪ್ಪಣಿಯನ್ನು ಗ್ರಂಥದ ಮೊದಲೇ ನೀಡಿದ್ದರೆ ಅಷ್ಟೊಂದು ಸಂಖ್ಯೆಯ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ನೀಡುವ ಅಗತ್ಯವಿರುತ್ತಿರಲಿಲ್ಲ.

ದೊರೆತ ಅಲ್ಪಪ್ರಮಾಣದ ಹಸ್ತಪ್ರತಿಗಳನ್ನಿಟ್ಟುಕೊಂಡೇ ಸಂಪಾದಕರು ಶ್ರೀಕೃಷ್ಣಬಾಲಲೀಲೆ ಗ್ರಂಥವನ್ನು ಸಂಪಾದಿಸಿದ್ದಾರೆ. ದೊರೆತಿರುವ ಹಸ್ತಪ್ರತಿಗಳು ಕವಿಯವೇ ಆದ್ದರಿಂದ ಲಿಪಿಲೇಖನ ವೈಲಕ್ಷಣಗಳೇ ಅಧಿಕವಾಗಿ ಕಂಡುಬರುತ್ತವೆ.

ಕೀರ್ತನೆ ೬೨, ನುಡಿ ೨೩

ಬೆಕ್ಕೀಗು ಕೊಡುತ ಭಯಪಡುತಾ ನಿಂದಿರಲು
ಹೊಕ್ಕಾಳು ಮೆಲ್ಲಾನೆ ಹಿಡಿದ ಕೋಲಿನಲೀ
ಉಕ್ಕೂವ ರೋಷದ ವಡತೀಯ ಕಂಡು
ದಕ್ಕಾದೆ ಒರಳಿನಿಂ ದುಮುಕಿಯೋಡಿದಳು

ಇಲ್ಲಿ ಬೆಕ್ಕೀಗು, ಹೊಕ್ಕಳು, ಮೆಲ್ಲನೆ ಎಂಬ ಶಬ್ದಗಳಲ್ಲಿ ನಾಲ್ಕು ಛಂದೋಮಾತ್ರೆಗಳ ಉಚ್ಚಾರಕಾಲಕ್ಕೆ ಮಿಶ್ರಛಾಪು ತಾಳಾವರ್ತದ ಏಳು ಕಾಲಮಾತ್ರೆಗಳ ಬೆಲೆ ಕೊಡುವುದಕ್ಕಾಗಿ ಸ್ವರಕರ್ಷಣ ಮಾಡಲಾಗಿದೆ.

ಅನೇಕ ಕೀರ್ತನೆಗಳು ಮಾತ್ರಾಛಂದಸ್ಸಿನ 'ಲಲಿತ' ಲಯದಲ್ಲಿ ಹಾಗೂ ಭಾಮಿನೀ ಲಯದಲ್ಲಿಯೂ ಕೂಡ ರಚನೆಯಾಗಿವೆ. ಇಂತಹ ಕಡೆಗಳಲ್ಲಿ ಹ್ರಸ್ವಸ್ವರಗಳನ್ನು ದೀರ್ಘೀಕರಣ ಮಾಡಲಾಗಿರುವುದಿಲ್ಲ.

ಉದಾ: ಸಲಹುನಂದಕುಮಾರ ಎಂಬ ಮೊದಲ ಕೀರ್ತನೆಯನ್ನು ನೋಡಬಹುದು.

ಹಸ್ತಪ್ರತಿಯ ಬರವಣಿಗೆಯಲ್ಲಿ ಉಚ್ಚಾರಣೆಗೆ ಅನುಗುಣವಾಗಿ ಬರೆದಿರುವ ಕೆಲವು ವೈಲಕ್ಷಣಗಳು ಹೀಗಿವೆ.

೧) ಆದಿಸ್ವರೋಚ್ಚಾರಣೆಯೊಂದಿಗೆ 'ಏ'ಕಾರ 'ಯ'ಕಾರಗಳು ಲಿಖಿತವಾಗಿವೆ.

ಉದಾ: ಇನಿತು – ಯನಿತು
ಈ ತತ್ವ – ಯೀತತ್ವ
ಎಲ್ಲ – ಯೆಲ್ಲ
ಉಕ್ಕೂವ – ವುಕ್ಕೂವ
ಒಡತಿ – ವಡತಿ

೨) ವರ್ಗಪಂಚಮ ಸಂಯುಕ್ತಾಕ್ಷರಗಳ ಬರವಣಿಗೆಯಲ್ಲಿ ಅನುಸ್ವಾರದ ಬಳಕೆ

ಉದಾ: ಬನ್ನಿ- ಬಂನಿ

ನಮ್ಮ - ನಂಮ

೩) ಅಲ್ಪಪ್ರಾಣಕ್ಕೆ ಮಹಾಪ್ರಾಣ

ಉದಾ: ಗಳಿಸಿದ – ಘಳಿಸಿದ

ತೆರೆ – ಥೆರೆ

೪) 'ಎ' ಕಾರಕ್ಕೆ 'ಅ' ಕಾರೋಚ್ಚಾರ:

ಉದಾ: ಎಲ್ಲ–ಯಲ್ಲ

ಎರೆದು –ಎರದು

ಕರೆದು–ಕರದು

ಚೆಂದು–ಚಂದ

ಚೆಲವು–ಚಲವು

೫) ಣ ಕಾರಕ್ಕೆ ನ ಕಾರ:

ಉದಾ: ವರ್ಣ – ವರ್ನ

ಕೀರ್ತನ ಕುಸುಮಾಂಜಲಿ ಗ್ರಂಥದ ಹಸ್ತಪ್ರತಿಯು ಕವಿಯ ಸ್ವಹಸ್ತಾಕ್ಷರ ಪ್ರತಿಯೇ ದೊರೆತಿರುವುದರಿಂದ ಪಾಠಾಂತರಗಳು ಯಾವುವೂ ಇಲ್ಲವಾದರೂ ಬರವಣಿಗೆಯಲ್ಲಿನ ಕೆಲವು ವೈಲಕ್ಷಣಗಳನ್ನು ಸಂಪಾದಕರು ಸೂಚಿಸಿದ್ದಾರೆ.

೧) ವರ್ಣ, ಸ್ವರ್ಣ ಇತ್ಯಾದಿ ಪದಗಳಲ್ಲಿ 'ಣ' ಕಾರಕ್ಕೆ ಬದಲಾಗಿ 'ನ' ಕಾರ ಬಂದಿದೆ

೨) ನಿನ್ನ, ಎನ್ನ ಇಂತಹ ಪದಗಳಲ್ಲಿ ಸಂಯುಕ್ತ ಅನುನಾಸಿಕ ವ್ಯಂಜನದ ಸ್ಥಾನದಲ್ಲಿ ಬಿಂದುವಿನ ಪ್ರಯೋಗ

ಉದಾ: ನಿಂನ, ಎಂನುತ, ಎಂಬಂತೆ

೩) ಎನಗೆ, ಎನ್ನ, ಈತ, ಈ, ಬೇರೆ ಇತ್ಯಾದಿ ಪದಗಳ ಆದಿ ಸ್ವರವನ್ನು ಯ ಕಾರದೊಡನೆ ಅಂದರೆ ಯೆನಗೆ, ಯೆನ್ನ, ಬ್ಯಾರೆ ಎಂದು ಬರೆಯಲಾಗಿದೆ.

೪) 'ವ'ಕಾರಕ್ಕೆ 'ಒ' ಕಾರ

ಉದಾ: ಒಂದು–ವಂದು

ಒಲಿಸು–ವಲಿದು

೫) 'ಸ' ಕಾರದೆಡೆಯಲ್ಲಿ 'ಶ' ಕಾರದ ಪ್ರಯೋಗ

೬) ಅಲ್ಪಪ್ರಾಣ ಮತ್ತು ಮಹಾಪ್ರಾಣಾಕ್ಷರಗಳ ಬೇಧವನ್ನು ಗಮನಿಸದಿರುವುದು.

ಇಂತಹ ತಿದ್ದುಪಾಡುಗಳನ್ನು ಅಡಿಟಿಪ್ಪಣಿಯಲ್ಲಿ ಸೂಚಿಸಿಲ್ಲ. ಗಮನಾರ್ಹವಾದ ತಿದ್ದುಪಾಟಗಳ ಸಂಬಂಧದಲ್ಲಿ ಮೂಲಪಾಠವನ್ನು ಪುಟದಡಿಯಲ್ಲಿ ಕಾಣಿಸಿದೆ. ಕೆಲವು ಕಡೆಗಳಲ್ಲಿ ಅಕ್ಷರ ಸ್ಖಾಲಿತ್ಯಗಳಿಗೂ ಪಾಠಾಂತರಗಳ ಬೆಲೆ ನೀಡಲಾಗಿದೆ. ಉದಾ: ಪುಟ.೨೦ ಪೆಸರ–ಪ್ಯಸರ, ಸೆಳೆದು–ಶಳದೂ ಪು.೩೦ರ ಕಾಮನಯ್ಯ–ಕಾಮನೈಯ್ಯ ಮುಂತಾದವು.

೧೮ನೇಯ ಪುಟದಲ್ಲಿ ಮೂಲದಲ್ಲಿಲ್ಲದ ಪಾಠದ ಸೇರ್ಪಡೆಯನ್ನು ಸೂಚಿಸಲು ಬಳಸಿರುವ ಚೌಕಕಂಸಗಳನ್ನು ಅಲ್ಲಿಂದಾಚೆಗೆ ಪಾಠ ವ್ಯತ್ಯಾಸದ ಸೂಚನೆಗೇ ಬಳಸಿರುವಂತಿದೆ. ಈ ಪುಸ್ತಕದಲ್ಲಿಯೂ ಕಾಂಬೋದಿ (ಕೀ.೮) ಕಾಂಭೋಧಿ (ಕೀರ್ತನೆ ೨೩) ಎರಡೂ ರೂಪಗಳ ಬಳಕೆಯಿದೆ.

೯) ಉನ್ನತವಿಮರ್ಶೆ:

ಉನ್ನತ ವಿಮರ್ಶೆ ಗ್ರಂಥಸಂಪಾದನೆಯ ಒಂದು ಬಹು ಮುಖ್ಯಭಾಗ. ಒಂದು ಕೃತಿಯ ಉನ್ನತಿ ಆ ಗ್ರಂಥವನ್ನು ಸಂಪಾದಿಸಿದ ಸಂಪಾದಕನಿಗೆ ಸವಾಲಾಗಿರುವ ಮತ್ತು ಮುಖ್ಯವಾದ ಒಂದು ಕಾರ್ಯವಾಗಿರುತ್ತದೆ. ಸಂಪಾದಕ ಒಂದು ಕೃತಿಯನ್ನು ಹಲವಾರು ಹಸ್ತ ಪ್ರತಿಗಳಿಂದ ಸಂಪಾದಿಸಿದ ತಕ್ಷಣ ಅವನ ಕೆಲಸ ಪೂರ್ಣಗೊಳ್ಳುವುದಿಲ್ಲ. ಒಂದು ಕೃತಿಯ ಉನ್ನತವಿಮರ್ಶೆ ಸಂಪಾದಕನೊಬ್ಬನ ಮೊದಲ ಪ್ರತಿಕ್ರಿಯೆಯಾಗಿದ್ದು ಇದು ಓದುಗರ ದೃಷ್ಟಿಯಿಂದ ಬಹುಮುಖ್ಯವಾದುದಾಗಿರುತ್ತದೆ. ಕೃತಿಯು ಸಂಪಾದಿತವಾದ ಕಾಲಕ್ಕೆ ಯಾವ ಬಗೆಯ ಸಾಹಿತ್ಯಿಕ ಮೌಲ್ಯವನ್ನು ಒಳಗೊಂಡಿದೆ ಎಂಬುದು ಈ ಉನ್ನತ ವಿಮರ್ಶೆಯಿಂದ ದೃಡಪಡುತ್ತದೆ. ಆದ್ದರಿಂದ "ಉನ್ನತ ವಿಮರ್ಶೆ ಗ್ರಂಥ ಸಂಪಾದನಾ ಕಾರ್ಯದಲ್ಲಿ ಬಹುಮುಖ್ಯವಾದುದು, ಇದರಿಂದ ಓದುಗಾರಿಕೆ ಮತ್ತು ಕೃತಿಯನ್ನು ಹಲವಾರು ಕಾರಣಗಳಿಗಾಗಿ ವ್ಯಾಸಂಗ ಮಾಡುವ ಸಂಶೋಧಕರಿಗೂ ಸಹಾಯಕವಾಗುತ್ತದೆ. ವಸ್ತು, ರಸ, ಶೈಲಿ ಮುಂತಾದ ವಿಷಯಗಳನ್ನು ಕುರಿತು ಸಂಪಾದಕ ಆ ಕೃತಿಯ ಬಗ್ಗೆ ಮಾಡುವ ಉನ್ನತ

ವಿಮರ್ಶೆ ಕೃತಿಯ ಮತ್ತು ಸಾಹಿತ್ಯದ ಅನನ್ಯತೆಯ ದೃಷ್ಟಿಯಿಂದ ಮುಖ್ಯವಾದ ಕಾರ್ಯವಾಗಿರುತ್ತದೆ."[೨೪]

ಉನ್ನತ ವಿಮರ್ಶೆ ಎಂದರೆ ಏನು? ಎಂಬುದನ್ನು ಕೆಲವು ಸಂಶೋಧಕರ ಹೇಳಿಕೆಯ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳಬಹುದಾಗಿದೆ.

ಹಸ್ತಪ್ರತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕ್ರಮವಾಗಿ ವಿಷದವಾಗಿ ನಿರೂಪಿಸಿದ ಮೇಲೆ, ಸಂಪಾದಕ ಪ್ರಕೃತ ಗ್ರಂಥಕ್ಕೆ ಸಂಬಂದಿಸಿದ ವಿಚಾರಗಳನ್ನು ತನ್ನ ಉಪೋದ್ಘಾತದಲ್ಲಿ ವಿಷದಪಡಿಸಬೇಕು ಇದನ್ನೇ ಉನ್ನತ ವಿಮರ್ಶೆ ಎಂದಿದ್ದಾರೆ.

ಡಾ || ಡಿ.ಎಲ್.ಎನ್

ಕೃತಿಸಂಪಾದನೆಯು ಪಾಠವಿಮರ್ಶೆ, ಸಾಹಿತ್ಯ ವಿಮರ್ಶೆ ಮತ್ತು ಅನುಬಂದಗಳನ್ನು ಒಳಗೊಳ್ಳುವಲ್ಲಿ ಸಂಪೂರ್ಣತೆಯನ್ನು ಪಡೆಯುತ್ತವೆ. ಈ ಮೂರನ್ನು ಒಳಗೊಂಡ ಕ್ರಿಯೆಯನ್ನು ಉನ್ನತ ವಿಮರ್ಶೆ ಎಂದಿದ್ದಾರೆ.

ಡಾ||ಎಂ.ಎಂ.ಕಲ್ಬುರ್ಗಿ

ಎಂ.ವಿ.ಸೀ ಸಂಪಾದಿಸಿರುವ 'ಕವಿರಾಜ ಮಾರ್ಗ' ಸಂಪಾದಿತ ಗ್ರಂಥ ಕನ್ನಡ ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಬಹುಮುಖ್ಯ ಸ್ಥಾನವನ್ನು ಹೊಂದಿದ್ದು ಎಂ.ವಿ.ಸೀ ಯವರಿಗೆ ಸಂಶೋದಕರೆಂದು ಹೆಸರು ತಂದುಕೊಟ್ಟ ಕೃತಿಯೂ ಕೂಡ ಹೌದು. ಅಲ್ಲದೆ ಅವರ ಪಾಂಡಿತ್ಯ ಬಹುಶ್ರುತತ್ವ, ಪ್ರತಿಭೆ, ವಿದ್ವತ್ತುಗಳಿಗೆ ಈ ಕೃತಿ ಸಾಕ್ಷಿಯಾಗಿದೆ.

"..... ಅವರ ವಿದ್ವತ್ ಪೂರ್ಣವಾದ ಪೀಠಿಕೆ ಮತ್ತು ಟಿಪ್ಪಣಿಗಳು ಗ್ರಂಥದ ಬಹು ಅಮೂಲ್ಯವಾದ ಕೊಡುಗೆ, ಕನ್ನಡ ಸಾಹಿತ್ಯದ ಪ್ರಥಮ ಉಪಲಬ್ದ ಗ್ರಂಥವಾದ ಕವಿರಾಜಮಾರ್ಗದ ಬಗೆಗೆ ಸಾಕಷ್ಟು ದೂರುಗಳು ಭಿನ್ನಾಭಿಪ್ರಾಯಗಳು, ಇದ್ದ ಕಾಲದಲ್ಲಿ ಕವಿಕಾಲದ ಬಗೆಗೆ ಒಂದು ನಿಶ್ಚಿತ ಅಭಿಪ್ರಾಯ ಇಲ್ಲದಿದ್ದ ಸಂದರ್ಭದಲ್ಲಿ, ಸೀತಾರಾಮಯ್ಯನವರು ಸಾಕಷ್ಟು ಶ್ರಮವಹಿಸಿ ಈ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವುದರ ಮೂಲಕ ಕವಿರಾಜಮಾರ್ಗದ ಕರ್ತೃ ಮತ್ತು ಕಾಲದ ವಿಚಾರವಾಗಿ ಖಚಿತ ಅಭಿಪ್ರಾಯಗಳನ್ನು ನಿರ್ಣಾಯಕವಾಗಬಹುದಾದ ರೀತಿಯಲ್ಲಿ ಮಂಡಿಸಿದ್ದರು. ಇಂಥ ಅಮೂಲ್ಯವಾದ ಗ್ರಂಥ ಬಹು ಕಾಲದಿಂದ ಓದುಗರಿಗೆ ದೊರೆಯುತ್ತಿರಲಿಲ್ಲ" ಎಂಬ ಎನ್

ಬಸವಾರಾಧ್ಯರ ಮಾತುಗಳು ಎಂ.ವಿ.ಸೀ ಯವರ ಸಂಪಾದಿತ ಕೃತಿ ಕವಿರಾಜಮಾರ್ಗದ ಉನ್ನತವಿಮರ್ಶೆ ಮತ್ತು ಅಲ್ಲಿಯವರೆಗೆ ಸಂಪಾದಿಸಿದ ಕವಿರಾಜಮಾರ್ಗಗಳ ಮುದ್ರಣಕ್ಕಿಂತ ಹೇಗೆ ಶ್ರೇಷ್ಠವಾದುದೆಂಬುದನ್ನು ಸಮರ್ಥಿಸುತ್ತವೆ.

ಎಂ.ವಿ.ಸೀ ಯವರ ಸಂಪಾದಿತ ಕೃತಿ ಕವಿರಾಜಮಾರ್ಗದ ಉನ್ನತ ವಿಮರ್ಶೆಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

೧. ಕೃತಿಯ ರಚನಾಸಂದರ್ಭ

೨. ಕರ್ತೃತ್ವ (ಅ) ಆಂತರಿಕ ಪ್ರಮಾಣಗಳು (ಆ) ಬಾಹ್ಯ ಪ್ರಮಾಣಗಳು

೩. ಚಾರಿತ್ರಿಕ ಹಿನ್ನೆಲೆ

೪. ಗ್ರಂಥವಿಚಾರ

೫. ವಿಷಯವ್ಯಾಪ್ತಿ

೬. ಐತಿಹಾಸಿಕ ಮಹತ್ವ

೭. ಗ್ರಂಥಮಹಿಮೆ

೮. ಕೃತಿಯ ಮೇಲೆ ಇತರ ಗ್ರಂಥಗಳ ಪ್ರಭಾವ

೯. ಕವಿಯ ಸ್ವತಂತ್ರ ದೃಷ್ಟಿ.

ಅನುಬಂಧಗಳು

೧. ರಾಷ್ಟ್ರಕೂಟರ ವಂಶಾವಳಿ

೨. ಪಾಠಾಂತರಗಳು

೩. ಕೆ.ಬಿ.ಪಾಠಕ್ ಮತ್ತು ಮದ್ರಾಸು ಮುದ್ರಣಗಳ ಸಂಪಾದಕೀಯ ಟಿಪ್ಪಣಿಗಳು

೪. ಇತರ ಗ್ರಂಥಗಳಲ್ಲಿ ಉದಾಹೃತಗಳಾದ ಕವಿರಾಜಮಾರ್ಗದ ಪದ್ಯಗಳು

೫. ಪದ್ಯಗಳ ಅಕಾರಾದಿ

೬. ಪಾರಿಭಾಷಿಕ ಪದಗಳ ಅಕಾರಾದಿ

೭. ಹೆಸರುಗಳ ಅಕಾರಾದಿ.

ಎಂ.ವಿ.ಸೀ ಯವರ ಕವಿರಾಜಮಾರ್ಗ ಇಷ್ಟು ಅಂಶಗಳು ಉನ್ನತ ವಿಮರ್ಶೆಯು ಒಳಗೊಂಡಿದ್ದು ಓದುಗರಿಗೆ, ಸಂಶೋಧಕರಿಗೆ ಒಂದು ಕೈಗನ್ನಡಿಯಾಗಿದ್ದು ಕನ್ನಡ ವಿದ್ವತ್

ಲೋಕದಲ್ಲಿ ಜನಮನ್ನಣೆ ಪಡೆಕೊಂಡಿದೆ. ಇವರ ಕವಿಯ ಕಾಲದ ಬಗೆಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದ ಕಾಲದಲ್ಲಿ ಎಂ.ವಿ.ಸೀ ಇದನ್ನು ಆಳವಾಗಿ ಅಭ್ಯಾಸ ಮಾಡಿ ತಮ್ಮ ಪಾಂಡಿತ್ಯದಿಂದ ಮೌಲಿಕ ವಿಚಾರಗಳನ್ನು ಚರ್ಚಿಸಿ ಶ್ರೀವಿಜಯನೇ ಇದರ ಕರ್ತೃ ಎಂದು ದೃಢಪಡಿಸಿದ್ದು ಇವರ ಈ ಚರ್ಚೆಗೆ ವಿದ್ವತ್‌ಲೋಕದಲ್ಲಿ ವಿಶೇಷವಾದ ಮನ್ನಣೆ ದೊರೆತಿದೆ. ಕನ್ನಡದ ಮೊಟ್ಟಮೊದಲ ಉಪಲಬ್ದ ಗ್ರಂಥವಾದ ಇದರ ಪ್ರಕಟಣೆ ಕನ್ನಡ ಸಾಹಿತ್ಯಕ್ಕೆ ಎಂ.ವಿ.ಸೀ ಯವರ ಅಮೂಲ್ಯ ಕೊಡುಗೆಯಾಗಿದೆ.

ಶ್ರೀ ಕೃಷ್ಣ ಬಾಲಲೀಲೆ ಎಂ.ವಿ.ಸೀಯವರ ಸಂಪಾದಿತಗ್ರಂಥಗಳಲ್ಲಿ ಒಂದು. ಇದೂ ಕೂಡ ವಿದ್ವತ್‌ಪೂರ್ಣವಾದ ಉನ್ನತವಿಮರ್ಶೆಯನ್ನು ಒಳಗೊಂಡ ಕೃತಿ ಶ್ರೀಕೃಷ್ಣಬಾಲಲೀಲೆಗೆ ಗ್ರಂಥಸಂಪಾದನಾ ಪ್ರಕಾರದಲ್ಲಿ ೧೯೮೬ ರ ಶ್ರೇಷ್ಠಗ್ರಂಥ ಎಂದು ಕನ್ನಡ ಸಾಹಿತ್ಯ ಆಕಾಡಮಿಯ ಬಹುಮಾನ ದೊರಕಿದೆ." ಇದು ಇದರ ಶ್ರೇಷ್ಠತೆಯನ್ನು ಸಾರಿಹೇಳುತ್ತದೆ. ಇದರ ಉನ್ನತ ವಿಮರ್ಶೆಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

೧. ಕವಿಯ ಹೆಸರು, ಸ್ಥಳ
೨. ಕವಿಯ ಕಾಲ
೩. ಕವಿಯ ಕುಲ ಪರಂಪರೆ
೪. ಕವಿಯ ಗುರು ಪರಂಪರೆ – ವಿದ್ಯಾವ್ಯಾಸಂಗ
೫. ಮತ–ಧರ್ಮ
೬. ಕವಿಯ ಕೃತಿಗಳು
೭. ಕೃತಿಯ ಕರ್ತೃತ್ವ
೮. ಕೃತಿಯ ಸ್ವರೂಪ
೯. ಕೃತಿರಚನೆಗೆ ಪ್ರೇರಣೆ
೧೦. ಕಥಾ ವಿಷಯ, ಭಾಷಾ ಶೈಲಿಗಳ ಲಕ್ಷಣ
೧೧. ಶೈಲಿಯ ವೈಲಕ್ಷಣಗಳು
೧೨. ಪಾಠ ಪರಿಷ್ಕರಣೆ
೧೩. ಉಪಕಾರ ಸ್ಮರಣೆ

ಅನುಬಂಧಗಳು

೧. ಕೀರ್ತನೆಗಳ ಮೊದಲ ಸಾಲುಗಳ ಅಕಾರಾದಿ

೨. ವರ್ಣಸೂಚಿ

ಈ ಮೇಲಿನ ಎಲ್ಲಾ ಅಂಶಗಳನ್ನು ಶ್ರೀಕೃಷ್ಣ ಬಾಲಲೀಲೆಯ ಉನ್ನತವಿಮರ್ಶೆಯು ಒಳಗೊಂಡಿದೆ. ಈ ಅಂಶಗಳ ಬಗ್ಗೆ ವಿಸ್ತಾರವಾಗಿ ಸಂಪಾದಕರು ಚರ್ಚಿಸಿದ್ದಾರೆ. ಇದು ಗ್ರಂಥದ ಓದಿಗೆ ಅನುಕೂಲವಾಗಿದ್ದು ಗ್ರಂಥವನ್ನು ಅರ್ಥಮಾಡಿಕೊಳ್ಳಲು ಸಹಾಯಕಾರಿಯಾಗಿದೆ. ಗ್ರಂಥವು ಪ್ರಥಮವಾಗಿ ಮುದ್ರಣವನ್ನು ಕಾಣುತ್ತಿರುವುದರಿಂದ ಉನ್ನತವಿಮರ್ಶೆಯಿಲ್ಲದಿದ್ದರೆ ಓದುಗರಿಗೆ ಮತ್ತು ಸಂಶೋಧಕರಿಗೆ ಯಾವುದೇ ರೀತಿಯ ಪ್ರಯೋಜನವಾಗುತ್ತಿರಲಿಲ್ಲ. ಅದನ್ನು ಪಡೆದಿರುವುದರಿಂದ ಗ್ರಂಥವು ಸಂಪೂರ್ಣತೆಯನ್ನು ಪಡೆದಿದೆ. ಎಂದು ಹೇಳಬಹುದು.

ಅರ್ಚನ ಗ್ರಂಥ ಎಂ.ವಿ.ಸೀ ಯವರ ಇನ್ನೊಂದು ಮುಖ್ಯ ಸಂಪಾದಿತ ಗ್ರಂಥವಾಗಿದೆ. ಅಲ್ಲದೆ ಕನ್ನಡ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಒಂದು ವಿಶಿಷ್ಟ ಮಹತ್ವವುಳ್ಳ ಕೃತಿಯಾಗಿದೆ. ಹರಿದಾಸ ಪರಂಪರೆಯಲ್ಲಿ ವಿಶಿಷ್ಟ ಮಾರ್ಗಕ್ಕೆ ಸೇರಿರುವ ಈ ಕೀರ್ತನೆಗಳ ತಾತ್ವಿಕ ಮಹತ್ವವನ್ನು ಶ್ರೀ ಎಂ.ವಿ.ಸೀ ತಮ್ಮ ವಿದ್ವತ್ ಪೂರ್ಣವಾದ ಪೀಠಿಕೆಯಲ್ಲಿ ಸುಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಈ ಕೃತಿಯನ್ನು ಪಾಠಗಳ ಸಹಾಯದಿಂದ ಪರಿಷ್ಕರಿಸಿ ವಿಸ್ತಾರವಾದ ಪೀಠಿಕೆ ಮತ್ತು ಟಿಪ್ಪಣಿಗಳನ್ನು ಕೊಟ್ಟಿರುವ ರೀತಿ ಅವರ ಶ್ರದ್ಧೆ, ವಿದ್ವತ್ತು, ಕಲಾವಂತಿಕೆಗೆ ಹಿಡಿದ ಕನ್ನಡಿಯಾಗಿದೆ. ಇವರ ವಿದ್ವತ್ ಪೂರ್ಣವಾದ ಉನ್ನತವಿಮರ್ಶೆಯು ಮುಂದಿನ ಅಂಶಗಳನ್ನು ಒಳಗೊಂಡಿದೆ.

೧. ಕವಿಯ ಹೆಸರು ಸ್ಥಳ

೨. ಕವಿಯ ಕಾಲ

೩. ಕವಿಯ ಕುಲಪರಂಪರೆ

೪. ಗುರುಪರಂಪರೆ – ವಿದ್ಯಾವ್ಯಾಸಂಗ

೫. ಮತ–ಧರ್ಮ

೬. ಕವಿಯ ಕೃತಿಗಳು

೭. ಕರ್ತೃತ್ವ

೮. ಕೀರ್ತನೆಗಳ ವಿಶಿಷ್ಟತೆ, ಪೂಜಾಕ್ರಮ, ತತ್ವಪ್ರತಿಪಾದನೆ, ಗೇಯ ಸ್ವರೂಪ, ಸಾಹಿತ್ಯದೃಷ್ಟಿ, ಕವಿಯ ವ್ಯಕ್ತಿತ್ವ

೯. ಹಸ್ತಪ್ರತಿಗಳ ವಿಚಾರ

೧೦. ಪಾಠ ಪರಿಷ್ಕರಣೆ

ಅನುಬಂಧಗಳು

೧. ಪೂಜಾವಿಧಾನದ ಕೀರ್ತನೆಗಳು (ಹೆಚ್ಚಿನವು)

೨. ಗುರುಕರುಣೆ

೩. ಕೀರ್ತನ ದೀಪಿಕಾ ಟಿಪ್ಪಣಿಗಳು

೪. ವಂಶವೃತ್ತಾಂತ

೫. ವಂಶವೃಕ್ಷ

೬. ಶಿಷ್ಯ ಕೃತ ಗ್ರಂಥಗಳ ಪಟ್ಟಿ

೭. ಕೀರ್ತನೆಗಳ ಮೊದಲ ಪಂಕ್ತಿಗಳ ಅಕಾರಾದಿ

೮. ಪಾರಿಭಾಷಿಕ ಪದ ಸೂಚಿ

೯. ಕಠಿಣಪದಗಳು

೧೦. ಗ್ರಂಥಋಣ

೧೧. ಪರಿಶಿಷ್ಟ

೧೨. ಅಚ್ಚಿನ ತಪ್ಪುಗಳು

ಈ ಮೇಲಿನ ಎಲ್ಲಾ ಅಂಶಗಳನ್ನೂ ಸವಿವರವಾಗಿ ಸಂಪಾದಕರು ವಿವರಿಸಿದ್ದಾರೆ. ಈ ಒಂದು ಉನ್ನತ ವಿಮರ್ಶೆಯು ಗ್ರಂಥವನ್ನು ಅಧ್ಯಯನ ಮಾಡುವವರಿಗೆ ತುಂಬಾ ಉಪಯುಕ್ತವಾಗಿದೆ.

ಎಂ.ವಿ.ಸೀಯವರ ಸಂಪಾದಿತ ಗ್ರಂಥಗಳಲ್ಲಿ ಕೀರ್ತನ ಕುಸುಮಾಂಜಲಿಯೂ ಒಂದು. ಇದೂ ಕೂಡ ವಿದ್ವತ್ ಪೂರ್ಣವಾದ ಉನ್ನತ ವಿಮರ್ಶೆಯನ್ನು ಒಳಗೊಂಡಿದೆ. ಈ ಉನ್ನತ ವಿಮರ್ಶೆಯು ಕೆಳಗಿನ ಅಂಶಗಳನ್ನು ಒಳಗೊಂಡಿದೆ.

೧. ಕವಿಯ ಕಾಲ ಸ್ಥಳ

೨. ಕರ್ತೃತ್ವ

೩. ಕವಿಯ ಜೀವನ ವೃತ್ತಾಂತ

೪. ಗುರುಪರಂಪರೆ

೫. ಕೀರ್ತನೆಗಳ ಪಾಠ

೬. ಉಪಕಾರಸ್ಮರಣೆ

ಇವಿಷ್ಟು ಅಂಶಗಳನ್ನು ಒಳಗೊಂಡಿದ್ದು ಈ ಕೃತಿಯನ್ನು ಅಧ್ಯಯನ ಮಾಡುವವರಿಗೆ ಸಂಪೂರ್ಣವಾದ ವಿವರಗಳನ್ನು ಒದಗಿಸುತ್ತದೆ ಚಿಕ್ಕ ಕೃತಿಯಾದರೂ ಉತ್ತಮವಾದ ಶ್ರೇಷ್ಟವಾದ ಕೀರ್ತನಗಳನ್ನು ಒಳಗೊಂಡಿದೆ.

ಅಡಿ ಟಿಪ್ಪಣಿ

೧. ಶ್ರೀವಿಜಯಕೃತ ಕವಿರಾಜಮಾರ್ಗಂ : (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ: ೭೩,೯೪,೧೧೯,೧೨೩,೧೩೩,೧೫೬

೨. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ: xxxiii

೩. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ: xxxiv

೪. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ: xxxiv

೫. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ:೨೮೬

೬. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ:೨೮೬

೭. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ:೧

೮. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ:೨೦೦

೯. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ: ೬೩೭

೧೦. ಶ್ರೀಕೃಷ್ಣಬಾಲಲೀಲೆ ಸಂಪುಟ–೧: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪು.ಸಂ: xxxv

೧೧. ಆಸ್ವಾದ : (ಸಂ) ಶ್ರೀವತ್ಸ, ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ, ಪ್ರ, ಉದಯಭಾನು, ಕಲಾಸಂಘ, ಪು.ಟ: ೨೨೬

೧೨. ಆಸ್ವಾದ : (ಸಂ) ಶ್ರೀವತ್ಸ, ಅನಂತಪದ್ಮನಾಭರಾವ್, ಎಚ್.ಎಂ.ರಂಗನಾಥ, ಪ್ರ, ಉದಯಭಾನು, ಕಲಾಸಂಘ, ಪು.ಟ:೨೨೬

೧೩. ಅರ್ಚನ: (ಸಂ) ಎಂ.ವಿ.ಸೀ, ಪ್ರ.ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪುಟ: ೦೩

೧೪. ಕೀರ್ತನ ಕುಸುಮಾಂಜಲಿ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ: i

೧೫. ಕೀರ್ತನ ಕುಸುಮಾಂಜಲಿ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ: i

೧೬. ಕೀರ್ತನ ಕುಸುಮಾಂಜಲಿ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ: ii

೧೭. ಕನ್ನಡ ಗ್ರಂಥಸಂಪಾದನೆ: (ಸಂ) ಡಾ॥ಡಿ.ಎಲ್.ಎನ್, ಪ್ರ. ಉದಯರವಿ ಆಫ್ ಸೆಟ್ ಪ್ರಿಂಟರ್ಸ್.

೧೮. ಕವಿರಾಜಮಾರ್ಗ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೭೩.

೧೯. ಕವಿರಾಜಮಾರ್ಗ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೯೪.

೨೦. ಕವಿರಾಜಮಾರ್ಗ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೧೧೯.

೨೧. ಕವಿರಾಜಮಾರ್ಗ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೧೨೩.

೨೨. ಕವಿರಾಜಮಾರ್ಗ: (ಸಂ) ಎಂ.ವಿ.ಸೀ, ಪ್ರ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಪು.ಸಂ:೧೩೩.

೨೩. ಅರ್ಚನ: (ಸಂ) ಎಂ.ವಿ.ಸೀ, ಪ್ರ. ಬೆಂಗಳೂರು.ವಿ.ವಿ, ಬೆಂಗಳೂರು. ಪು.ಸಂ:೭೮,೮೩.

೨೪. ಕನ್ನಡ ಸಾಹಿತ್ಯಕೋಶ: (ಸಂ) ರಾಜಪ್ಪದಳವಾಯಿ, ಪ್ರ, ಕದಿರು ಪ್ರಕಾಶನ, ಪು.ಸಂ:೫೯೪.

ಅಧ್ಯಾಯ – ೫

ಉಪಸಂಹಾರ

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯಕೃಷಿ ಮಾಡಿ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಎಂ.ವಿ.ಸೀ ಅವರು ಸಲ್ಲಿಸಿದ ಸೇವೆ ಅನನ್ಯವಾದುದು. ಕನ್ನಡದ 'ಕಣ್ವ'ರೂ ತಮ್ಮ ಗುರುಗಳೂ ಆದ ಬಿ.ಎಂ.ಶ್ರೀ ಯವರ ಹೆಸರಿನಲ್ಲಿ "ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ"ವನ್ನು ಸ್ಥಾಪಿಸಿ ಕನ್ನಡ ವಿದ್ವತ್ ಪ್ರಪಂಚಕ್ಕೆ ನೀಡಿರುವ ಇವರ ನಿಸ್ವಾರ್ಥ ಸೇವೆ ಅನುಕರಣೀಯ. ಎಂ.ವಿ.ಸೀ ಯವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದರೂ ಸಹ, ಸಂಶೋಧನಾ ಕ್ಷೇತ್ರದಲ್ಲಿ ಅವರು ಮಾಡಿದ ಸೇವೆ ಚಿರಸ್ಥಾಯಿಯಾಗಿ ನಿಲ್ಲುವಂತಹದ್ದು. ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ಗ್ರಂಥ ಸಂಪಾದನೆಗೆ ಎಂ.ವಿ.ಸೀ ಯವರು ನೀಡಿರುವ ಕೊಡುಗೆಯನ್ನು ಅವರ ಕೆಲವು ಸಂಪಾದಿತ ಕೃತಿಗಳ ಮೂಲಕ ತಿಳಿಯಲಾಗಿದೆ.

ಸಾಧನೆಗೆ ದೈಹಿಕ ನ್ಯೂನ್ಯತೆ ಮತ್ತು ಮಾನಸಿಕ ಬಾದೆಗಳು ಎಂದೂ ಅಡ್ಡಿಯಾಗಲಾರದು. ಮಾಡುವ ಕೆಲಸದಲ್ಲಿ ನಿಷ್ಠೆ, ಆಸಕ್ತಿ, ಮನಸ್ಸು, ಇವುಗಳಿದ್ದರೆ ಎಂತಹ ಕಾರ್ಯವನ್ನಾದರು ಸಾಧಿಸಬಹುದೆಂಬುದನ್ನು ಎಂ.ವಿ.ಸೀಯವರ ಜೀವನಸಾಧನೆಯಿಂದ ತಿಳಿಯಲಾಯಿತು. ಅದನ್ನು ಮಾಡಿತೋರಿಸಿದ ಸಾಧಕ ಎಂ.ವಿ.ಸೀ.

ಪ್ರಸ್ತುತ ಅಧ್ಯಯನದಲ್ಲಿ ಎಂ.ವಿ.ಸೀಯವರ ಸಂಪಾದಿತ ಕೃತಿಗಳಲ್ಲಿ ಕೆಲವು ಕೃತಿಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಂಡಿದ್ದು ಅವುಗಳ ಅಧ್ಯಯನದ ಮೂಲಕ ಎಂ.ವಿ.ಸೀ ಸಂಪಾದಿತ ಗ್ರಂಥಗಳ ಮಹತ್ವ ಮತ್ತು ಅವರ ಸಂಪಾದನೆಯ ಕೆಲವು ವೈಶಿಷ್ಟ್ಯಗಳನ್ನು ಗುರುತಿಸುವ ಮೂಲಕ ಕನ್ನಡ ಗ್ರಂಥಸಂಪಾದನೆಗೆ ಅವರು ನೀಡಿರುವ ಕೊಡುಗೆಯನ್ನು ತಿಳಿಯಲಾಯಿತು. ಈ ಅಧ್ಯಯನದಲ್ಲಿ ಕೇವಲ ಕೆಲವು ಗ್ರಂಥಗಳ ಸಂಪಾದನೆಯ ವೈಶಿಷ್ಟ್ಯಗಳನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ. ಎಂ.ವಿ.ಸೀ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಸ್ಮರಣೀಯವಾದುದು. ಅವರ ಗ್ರಂಥಗಳ ಸಮಗ್ರವಾದ ಅಧ್ಯಯನಗಳು ನಡೆಯಬೇಕಾಗಿದೆ. ಎಂ.ವಿ.ಸೀ ಸುಮಾರು ೩–೪ ದಶಕಗಳ ಕಾಲ ಸಾಹಿತ್ಯ ಕೃಷಿ ಮಾಡಿದ್ದು ಯಾವುದೇ ಒಂದು ವಾದ–ವಿವಾದಗಳ ಸುಳಿಗೆ ಸಿಲುಕದೆ ನಿರಂತರವಾಗಿ ಸಾಹಿತ್ಯ ರಚನೆ ಮಾಡಿದ ಸರಳ ಸಜ್ಜನಿಕೆಯ ನಿಸ್ವಾರ್ಥದ ಬದುಕು ಅವರದು.

ಎಂ.ವಿ.ಸೀ ಯವರ ಸಂಪಾದಿತ ಕೃತಿಗಳಲ್ಲಿ ಕವಿರಾಜಮಾರ್ಗಮುಖ್ಯವಾದುದು. ಸಂಶೋಧಕರೆಂದು ಹೆಸರು ತಂದು ಕೊಟ್ಟ ಕೃತಿಯೂ ಕೂಡ ಹೌದು. ಈ ಕೃತಿಯ ಮುನ್ನುಡಿ ಅತ್ಯಂತ ಮಹತ್ವವುಳ್ಳದ್ದಾಗಿದ್ದು ಅದುವರೆಗೂ ನಡೆದ ಎಲ್ಲಾ ವಾದವಿವಾದಗಳನ್ನು ಚರ್ಚಿಸಿದ್ದಾರೆ. ಕರ್ತೃತ್ವದ ಬಗೆಗಿನ ಅವರ ಚರ್ಚೆಗಳು ಹಾಗೂ ಶ್ರೀವಿಜಯನೇ ಇದರ ಕರ್ತೃವೆಂದು ಸಾಧಿಸಿತೋರಿಸಿದ ರೀತಿ ವಿದ್ವತ್‌ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಇವರ ಪೀಠಿಕಾಭಾಗ ಕೃತಿಯ ಅಧ್ಯಯನಕಾರರಿಗೆ ಒಂದು ಕೈದೀವಿಗೆಯಾಗಿದೆ. ಅಲ್ಲದೆ ಛಂದಸ್ಸು ಮತ್ತು ಅಲಂಕಾರಗಳ ಬಗೆಗಿನ ವಿಷಯಗಳು ಮಹತ್ವದವುಗಳಾಗಿವೆ. ಒಂದು ಉತ್ತಮ ಕೃತಿಯ ಸಂಪಾದನೆಯು ಯಾವ ಯಾವ ಅಂಶಗಳನ್ನು ಒಳಗೊಂಡಿರಬೇಕೋ ಆ ಎಲ್ಲಾ ಅಂಶಗಳನ್ನು ಇವರ ಕೃತಿ ಒಳಗೊಂಡಿದೆ. ಶ್ರೀಕೃಷ್ಣಬಾಲಲೀಲೆ, ಅರ್ಚನ, ಕೀರ್ತನ ಕುಸುಮಾಂಜಲಿ ಗ್ರಂಥಗಳು ಕೀರ್ತನೆಗಳಾದರೂ ಸಹ ಕಾವ್ಯಗುಣವನ್ನು ಹೊಂದಿವೆ. ರಾಗತಾಳ ನಿರ್ದೇಶನಗಳನ್ನು ಸಹ ಕೆಲವು ಕೀರ್ತನೆಗಳಿಗೆ ಸಂಪಾದಕರೇ ನೀಡಿದ್ದಾರೆ. ಈ ಕೃತಿಗಳಿಗೂ ಸಹ ಅತ್ಯಂತ ಮಹತ್ವದ ಪೀಠಿಕೆಯನ್ನು ಸಂಪಾದಕರು ಒದಗಿಸಿದ್ದಾರೆ. ಎಂ.ವಿ.ಸೀಯವರ ಸಂಪಾದಿತ ಕೃತಿಗಳು ಒಟ್ಟಾರೆಯಾಗಿ ವಿದ್ವತ್ ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಅದರಲ್ಲಿಯೂ ಕವಿರಾಜ ಮಾರ್ಗ ಅವರ ಸಂಪಾದಿತಕೃತಿಗಳಲ್ಲಿ ಅತ್ಯಂತ ವಿಶಿಷ್ಟ ಹಾಗೂ ಶ್ರೇಷ್ಠ ಕೃತಿಯಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಅವರ ಕೆಲವು ಕೃತಿಗಳ ಅಧ್ಯಯನದ ಮೂಲಕ ಅವರ ಸಂಪಾದನೆಯ ಕೆಲವು ವೈಶಿಷ್ಟ್ಯಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಗ್ರಂಥಸಂಪಾದನೆ ಇನ್ನೂ ಬೆಳವಣಿಗೆಯಾಗುತ್ತಿರುವ ಶಾಸ್ತ್ರವಾಗಿದ್ದು ಸಂಪಾದಿತ ಕೃತಿಗಳ ಅಧ್ಯಯನ ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ. ಇನ್ನು ಮುಂದಾದರೂ ಸಹ ಈ ರೀತಿಯ ಅಧ್ಯಯನಗಳು ನಡೆದರೆ ಗ್ರಂಥಸಂಪಾದನಾ ಕ್ಷೇತ್ರ ತನ್ನ ವಿಶಿಷ್ಟ ಸ್ಥಾನ ಉಳಿಸಿಕೊಳ್ಳಲು ಸಾಧ್ಯ.

ಅನುಬಂಧ

ಅ) ಎಂ.ವಿ.ಸೀ. ಸಾಹಿತ್ಯ ಜೀವನ ಪಥ

೬-೯-೧೯೧೦ ಜನನ, ವೆಂಕಟದಾಸಪ್ಪ-ಸಾವಿತ್ರಮ್ಮನವರ ಮೂರನೆಯ ಮಗನಾಗಿ, ಮೈಸೂರು, (ಸಾಧಾರಣ ಸಂವತ್ಸರ, ಭಾದ್ರಪದ ಶುದ್ಧ ಷಷ್ಠಿ).

೧೯೧೬-೨೬ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ: ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಬನುಮಯ್ಯವರ ವಿದ್ಯಾಶಾಲಾ, ಮೈಸೂರು.

೧೯೨೦ ಸಂಗೀತಾಭ್ಯಾಸ (ಮೃದಂಗ) ಪ್ರಾರಂಭ, ಮುಂದೆ ಎಲ್.ರಾಜಾರಾಯರೊಂದಿಗೆ ಅಭ್ಯಾಸ.

೧೯೨೧ ಚಿತ್ರಕಲಾಭ್ಯಾಸ ಪ್ರಾರಂಭ.

೧೯೨೨ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ Pen and Ink Drawing ರೇಖಾ ಚಿತ್ರಗಳಿಗೆ ಪ್ರಶಸ್ತಿ ಪತ್ರ (certificate of merit)

೧೯೨೩ ಮದರಾಸಿನ ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಅದೇ ಚಿತ್ರಗಳಿಗೆ ಪ್ರಶಸ್ತಿ ಪತ್ರ.

೧೯೨೮ ವಿವಾಹ: ಧರ್ಮಪತ್ನಿ ಸೌ॥ ಸಾವಿತ್ರಮ್ಮ ಅವರೊಂದಿಗೆ.

೧೯೩೦ ಮೊದಲ ಕವನ 'ಬೀದಿಯೊಳಗಲೆಯುತಿಹಳಾರಿವಳು ಚೆಲುವೆ' ಕವನವನ್ನು ತೀ.ನಂ.ಶ್ರೀ. ಅವರಿಂದ ತಿದ್ದಿಸಿದ್ದು. ಸ್ವಯಂ ಚಿತ್ರ ಬರೆದುಕೊಂಡದ್ದು.

೧೯೩೧ ಬಿ.ಎ.ಪದವಿ, (ಕನ್ನಡ, ಇಂಗ್ಲಿಷ್, ಚರಿತ್ರೆ)

೧೯೩೨ ಕೆ.ವೆಂಕಟಪ್ಪನವರ ಶಿಷ್ಯತ್ವದಲ್ಲಿ ಚಿತ್ರಕಲಾಭ್ಯಾಸ.

೧೯೩೩ ಎಂ.ಎ. ಪದವಿ. ಶ್ರೀ ಪದಕ (ಕನ್ನಡ) : 'ಆ ಚಿತ್ರಗಳು' ಕವನಕ್ಕೆ, ಚಿತ್ರಕಲೆ ಕಲಿಯಲು ಶಾಂತಿನಿಕೇತನಕ್ಕೆ ಪ್ರಯಾಣ, ಟಿ.ಎಸ್. ವೆಂಕಣ್ಣಯ್ಯನವರಿಂದ ಬೀಳ್ಕೊಡುಗೆ.

೧೫-೧೧-೧೯೩೪ ಮಗಳು ಶಾರದಳ ಜನನ.

೧೯೩೬ ಮೊದಲ ಪ್ರಕಟನೆಗಳು : ೧) ಶಿಲಾಮುಖ ೨) ಯೌವನ ಸುಧೆ ಮೊದಲನೇ ಮಗ ವೆಂಕಟೇಶನ ಜನನ (ಮರಣ ೧೯೪೫)

೧೯೩೪-೩೯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿ.

೨೬-೧೧-೧೯೩೯ ೨ನೇ ಮಗ ಭಾಸ್ಕರನ ಜನನ.

೧೯೩೯-೪೬ ಮೈಸೂರು ವಿಶ್ವವಿದ್ಯಾಲಯದ ಕನ್ನಡ-ಇಂಗ್ಲಿಷ್ ಕೋಶದ ಸಹ-ಸಂಪಾದಕ.

೨೫-೬-೧೯೪೩ ೩ನೇ ಮಗ ರಾಮಪ್ರಸಾದನ ಜನನ.

೨೫-೯-೧೯೪೫ ೪ನೇ ಮಗ ರಾಧಾಕೃಷ್ಣನ ಜನನ.

೧೯೪೬ ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭ. "ಹಕ್ಕಿಹಾಡು" ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ.

೧೯೫೧ "ರಾಘವ ಪ್ರಕಾಶನ" ಪ್ರಾರಂಭ.

"ಮಾದನ ಮಗಳು" ಕಾದಂಬರಿಗೆ ದೇವರಾಜ ಬಹದ್ದೂರ್" ಬಹುಮಾನ.

೧೯೫೩ ಬೆಂಗಳೂರು ಸರ್ಕಾರಿ ಕಾಲೇಜಿನ ಕರ್ನಾಟಕ ಸಂಘವನ್ನು ಶ್ರೀ ಜಿ.ಪಿ.ರಾಜರತ್ನಂ ಅವರಿಂದ ವಹಿಸಿಕೊಂಡದ್ದು.

೨೬-೯-೧೯೫೪ ೫ನೇ ಮಗ ಶೇಷಾದ್ರಿನಾಥನ ಜನನ.

೧೯೫೭ "ಮುಗಿಯದ ಮಾಯೆ" ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಬಹುಮಾನ.

"ತೊಟ್ಟಿಲು ತೂಗದ ಕೈ" ನಾಟಕಕ್ಕೆ ರಾಜ್ಯ ಸರ್ಕಾರ ಪ್ರಶಸ್ತಿ.

೧೯೫೯ "ಕರ್ನಾಟಕ ಸಂಘ"ದ ಪುನರಾರಂಭ.

೧೯೬೦ "ಜೀವನ ನಾಟಕ" ವ್ಯಕ್ತಿ ಕಥೆಗಳ ಸಂಕಲನಕ್ಕೆ ರಾಜ್ಯ ಸರ್ಕಾರದ ಪ್ರಶಸ್ತಿ.

೧೯೬೧ ಆಕಾಶವಾಣಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಭಾಗವಹಿಸಿದ್ದು.

೧೯೬೩ ಕನ್ನಡ ರೀಡರ್ ಆಗಿ ನೇಮಕ.

೧೯೬೪ ದಕ್ಷಿಣಭಾಷಾ ಪುಸ್ತಕ ಸಂಸ್ಥೆಯ ಆಶ್ರಯದಲ್ಲಿ ನಡೆದ ಮಕ್ಕಳ ಸಾಹಿತ್ಯದ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದು.

೧೯೬೫ ಅಣ್ಣಾಮಲೈ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ನಡೆದ ಭಾಷಾ ವಿಜ್ಞಾನ ಗೋಷ್ಠಿಯಲ್ಲಿ ಭಾಗವಹಿಸಿದ್ದು.

೧೯೬೭ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಿದ್ದು.

೧೯೬೭ ನಿವೃತ್ತಿ, ಮಾರ್ಚ್ ೨೪.

ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿಂದ ನಿವೃತ್ತರಾದ ಸಮಯದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಪರವಾಗಿ "ರಾಘವ ಸನ್ಮಾನ ಸಮಿತಿ"ಯಿಂದ ಸನ್ಮಾನ (ಅಧ್ಯಕ್ಷತೆ ಡಾ॥ಮಾಸ್ತಿ ವೆಂಕಟೇಶ ಅಯ್ಯಂಗಾರ್)

೧೯೬೭ ಶ್ರೀ ನಿಡುಮಾಮಿಡಿ ಶ್ರೀಗಳವರಾದ ಡಾ॥ಜ.ಚ.ನಿ. ಅವರಿಂದ ಸ್ವರ್ಣ ಪದಕ ಸಮೇತ 'ವಿಚಾರ ರತ್ನಾಕರ' ಎಂಬ ಪ್ರಶಸ್ತಿ.

೧೯೬೮–೭೩ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ ಪ್ರಾಧ್ಯಾಪಕ (೧೯೭೩–೭೪ ಗೌರವ ಪ್ರಾಧ್ಯಾಪಕ)

೧೯೬೮ 'ಕವಿರಾಜಮಾರ್ಗ' ಪ್ರಕಟನೆ.

೧೯೬೯ ಬೆಂಗಳೂರು ವಿಶ್ವವಿದ್ಯಾನಿಲಯ ಕನ್ನಡ ವಿಭಾಗದಲ್ಲಿ ಸರ್ಕಾರಿ ಕಾಲೇಜು ಕರ್ನಾಟಕ ಸಂಘದ ಹೆಸರಿನಲ್ಲಿ 'ಶ್ರೀ ವಿಜಯ ಸ್ವರ್ಣ ಪದಕ' (ಎಂ.ಎ.ವಿದ್ಯಾರ್ಥಿಗಳಿಗಾಗಿ) ಸ್ಥಾಪನೆ.

೧೯೭೦ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯದಲ್ಲಿ ಮೂರು ವಿಶೇಷ ಉಪನ್ಯಾಸಗಳು (ವಿಷಯ: ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ")

೧೯೭೧ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತಿಮ್ಮಪ್ಪದಾಸನ ಸ್ಮಾರಕ ದತ್ತಿ ನಿಧಿ ಸ್ಥಾಪನೆ.

೧೯೭೩ ಕರ್ನಾಟಕ ರಾಜ್ಯ ಸಾಹಿತ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

ಧಾರವಾಡದಲ್ಲಿ ನಡೆದ ದ್ರಾವಿಡ ಭಾಷಾ ವಿಜ್ಞಾನಿಗಳ ಸಮ್ಮೇಳದಲ್ಲಿ ಪ್ರಬಂಧ ಮಂಡನೆ.

ಬೆಂಗಳೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಭಾಷಾ ವಿಜ್ಞಾನಿಗಳ ಸಮ್ಮೇಳನಲ್ಲಿ ಭಾಗವಹಿಸಿದ್ದು.

೧೯೭೪ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ವೈಣಿಕ ವಿದ್ವಾನ್ ಎಲ್.ರಾಜಾರಾವ್ ಅವರೊಂದಿಗೆ 'ಲಕ್ಷ್ಮೀನಾರಣಪ್ಪ ಮತ್ತು ವೆಂಕಟದಾಸಪ್ಪ ಸ್ಮಾರಕ ನಿಧಿ ಸ್ಥಾಪನೆ.

೧೯೭೫ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವದ ಸಂದರ್ಭದಲ್ಲಿ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಸೇವೆಗಾಗಿ ಪ್ರಶಸ್ತಿ.

೧೯೭೮ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯದಲ್ಲಿ ಮೂರು ವಿಶೇಷೋಪನ್ಯಾಸಗಳು (ವಿಷಯ: "ಕನ್ನಡ ಸಾಹಿತ್ಯದಲ್ಲಿ ಶಾಂತರಸ")

ರಾಜ್ಯ ಸರ್ಕಾರದಿಂದ ಅಜೀವ ಗೌರವ ಮಾಸಿಕ ವೇತನ.

೧೯೭೯ "ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ"ದ ಸ್ಥಾಪನೆ.

೧೯೮೦ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ : ಪ್ರಾಚೀನ ಕನ್ನಡ ವ್ಯಾಕರಣಗಳು' ಪುಸ್ತಕಕ್ಕೆ

೧೯೮೨ ಗೋಕಾಕ್ ವರದಿ ಹೋರಾಟದಲ್ಲಿ ಪಾಲ್ಗೊಂಡು, ನಗರದ ಸಾಹಿತಿ ಕಲಾವಿದರ ಬಳದದ ಚಟುವಟಿಕೆಗಳ ಸಹಾಯಕ್ಕಾಗಿ 'ಕನ್ನಡಮ್ಮನ ಕೊರಗು' ಪುಸ್ತಕವನ್ನು ಪ್ರಕಟಿಸಿ ದಾನ ಮಾಡಿದ್ದು.

೧೯೮೩ ನಗರದ ಉದಯಭಾನು ಕಲಾಸಂಘದ ವತಿಯಿಂದ ರಾಜ್ಯ ಮಟ್ಟದ ಸನ್ಮಾನ ಮತ್ತು "ಆಸ್ವಾದ" ಅಭಿನಂದನ ಗ್ರಂಥ ಹಾಗೂ "ಮೈವೆಂಸೀ ರಾಘವ" ಅಭಿನಂದನ ಸಂಚಿಕೆಗಳ ಪ್ರಕಟನೆ.

೧೯೮೫ ಕರ್ನಾಟಕ ಸರ್ಕಾರದಿಂದ 'ರಾಜ್ಯ ಪ್ರಶಸ್ತಿ' ಮತ್ತು ಸುವರ್ಣ ಪದಕ.

೧೯೮೭ ಶ್ರೀ ಕೃಷ್ಣ ಬಾಲಲೀಲೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

೧೯೮೭ ಪತ್ನಿ ವಿಯೋಗ.

೯-೯-೧೯೮೯ ೮೦ನೇ ವರ್ಷಕ್ಕೆ ಪಾದಾರ್ಪಣೆ-'ಎಂ.ವಿ.ಸೀ.: ೮೦ ಸನ್ಮಾನ ಸಮಿತಿಯಿಂದ ಸನ್ಮಾನ ಮತ್ತು ಎಂ.ವಿ.ಸೀ ೮೦ ಪರಿಚಯ ಗ್ರಂಥ ಪ್ರಕಟನೆ.

೧೧-೩-೧೯೯೦ ಮಾದನ ಮಗಳು ಮರು ಮುದ್ರಣದ ಬಿಡುಗಡೆ, ಅಭಿನಂದನ ಸಮಿತಿಯ ಸಮಾಲೋಚನಾ ಸಭೆ.

೧೨-೩-೧೯೯೦ ನಿಧನ.

ಆ) ಎಂ.ವಿ.ಸೀ. ಕೃತಿಸೂಚಿ

೧. ಕಾವ್ಯ

೧. ಹಕ್ಕಿ ಹಾಡು: ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ೧೯೪೪ (ದೇವರಾಜ ಬಹದ್ದೂರ್ ಸಾಹಿತ್ಯ ನಿಧಿಯ ಬಹುಮಾನ, ೧೯೪೫, ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ ೧೯೪೫)

೨. ಆ ಚಿತ್ರಗಳು ಮತ್ತು ಇತರ ಕಥನ ಕವನಗಳು : ಸತ್ಯಶೋಧನ ಪ್ರಕಟನ ಮಂದಿರ, ೧೯೪೬ (ಆ ಚಿತ್ರಗಳು : ಬಿ.ಎಂ.ಶ್ರೀ. ರಜತೋತ್ಸವ ಸ್ವರ್ಣ ಪದಕ ಪಡೆದ ಕವಿತೆ, ೧೯೩೩)

೩. ರಾಗ: (ಪ್ರಣಯ ಗೀತೆಗಳು) ಸತ್ಯಶೋಧನ ಪ್ರಕಟನ ಮಂದಿರ, ೧೯೪೬

೪. ಅಶೋಕ ಚಕ್ರ: (ದೇಶಭಕ್ತಿ ಕವನಗಳು) : ಸತ್ಯಶೋಧನ ಪ್ರಕಟನ ಮಂದಿರ, ೧೯೪೭

೫. ವಿಶ್ವಜ್ಯೋತಿ ಬಾಪು : ಸತ್ಯಶೋಧನ ಪ್ರಕಟನ ಮಂದಿರ, ೧೯೪೮

೬. ರಾಷ್ಟ್ರರಥ: ಸತ್ಯಶೋಧನ ಪ್ರಕಟನ ಮಂದಿರ, ೧೯೫೧

೭. ರಾಷ್ಟ್ರದಿನೋತ್ಸವ ಗೀತೆ : ರಾಘವ ಪ್ರಕಾಶನ, ಬೆಂಗಳೂರು ೧೯೫೪

೮. ಮುಗಿಯದ ಮಾಯೆ: ರಾಘವ ಪ್ರಕಾಶನ, ೧೯೫೮ (ದೇವರಾಜ ಬಹದ್ದೂರ್ ಸಾಹಿತ್ಯ ನಿಧಿಯ ಬಹುಮಾನ)

೯. ಗೀತ ಭಾರತಿ: (ಆಯ್ದ ದೇಶಭಕ್ತಿ ಗೀತೆಗಳ ಸಂಕಲನ) ರಾಘವ ಪ್ರಕಾಶನ, ೧೯೬೯

೧೦. ಹಂಸಪಥ : ರಾಘವ ಪ್ರಕಾಶನ, ೧೯೮೦

೧೧. ಬೀಸಿ ಬಂದ ಗಾಳಿ: ರಾಘವ ಪ್ರಕಾಶನ, ೧೯೮೦

೧೨. ಮೊದಲ ಹೆಜ್ಜೆ: (ಪ್ರಾರಂಭದ ಕವನಗಳು) ರಾಘವ ಪ್ರಕಾಶನ, ೧೯೮೧

೧೩. ಕಾವ್ಯಾಲಾಪ: (೪೬ ಬಿಡಿ ಪದ್ಯಗಳ ಸಂಕಲನ: ೧೯೪೪, ಸುಮಾರು ೫೦೦ ಪದ್ಯಗಳ ವಿಸ್ತೃತ ಸಂಕಲನ–ರಾಘವ ಪ್ರಕಾಶನ, ೧೯೯೦

೧೪. ಸೌಂದರ್ಯ ಲಹರಿ: (ಶ್ರೀ ಶಂಕರಾಚಾರ್ಯ ರಚಿತ ಸಂಸ್ಕೃತ ಸೌಂದರ್ಯ ಲಹರಿಯ ಅನುವಾದ, ಷಟ್ಪದಿಯಲ್ಲಿ : ಅಪ್ರಕಟಿತ)

೧೫. ಪುರಾತನ ನಾವಿಕ : (ಕೋಲರಿಜ್ ಕವಿಯ Ancient Mariner ಕವನದ ಅನುವಾದ: ಅಪ್ರಕಟಿತ)

೨. ಮಕ್ಕಳ ಪದ್ಯಗಳು

೧೬. ಹೂವಾಡಗಿತ್ತಿ: ಕಾವ್ಯಾಲಯ, ಮೈಸೂರು (೧೯೪೬: ತೃತೀಯ ಆವೃತ್ತಿ ೧೯೬೮)

೧೭. ಹಾವಾಡಿಗ : ಕಾವ್ಯಾಲಯ, ಮೈಸೂರು : ೧೯೫೮ (ದ್ವಿ.ಆ.೧೯೬೮)

೧೮. ಕೋಡಂಗಿ : ಕಾವ್ಯಾಲಯ, ಮೈಸೂರು : ೧೯೭೯

ಸಣ್ಣಕಥೆ

೧೯. ಶಿಲಾಮುಖ : (ಹಾತಾರ್ನಿನ ಮೂರು ಕಥೆಗಳ ರೂಪಾಂತರ) : ಭಾರತೀ ಸಾಹಿತ್ಯ ಮಂದಿರ, ಬೆಂಗಳೂರು ೧೯೩೬

೨೦. ಯೌವನ ಸುಧೆ: (ಹಾತಾರ್ನಿನ ನಾಲ್ಕು ಕಥೆಗಳ ರೂಪಾಂತರ) ಸ್ವಂತ ಪ್ರಕಟನೆ, ೧೯೪೬

೨೧. ಮಾರ್ಗದರ್ಶನ : (೧೩ ಸಣ್ಣ ಕಥೆಗಳು) ಮನೋಹರ ಗ್ರಂಥಮಾಲೆ, ಧಾರವಾಡ ೧೯೪೦, (ದ್ವಿ.ಮು.೧೯೪೮)

೨೨. ರತಿದೇವಿ ಮತ್ತು ಇತರ ಕಥೆಗಳು: (೭ ಸಣ್ಣ ಕಥೆಗಳು) : ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ೧೯೪೫.

೨೩. ಕರುಣಾಲಹರಿ: (೧೧ ಸಣ್ಣ ಕಥೆಗಳು) ಶಾರದಾ ಮಂದಿರ, ಮೈಸೂರು, ೧೯೫೫

೨೪. ಬಿಸಿಲು–ಬೆಳದಿಂಗಳು: (ದ್ವಿ.ಮು.ರಾಘವ ಪ್ರಕಾಶನ ೧೯೫೪)

೨೫. ಜೀವನ ನಾಟಕ : (೧೧ ವ್ಯಕ್ತಿ ಕಥೆಗಳು) : ರಾಘವ ಪ್ರಕಾಶನ, ೧೯೬೧ (ರಾಜ್ಯ ಸರಕಾರದ ಪ್ರಶಸ್ತಿ)

೨೬. ಗುಂಡಿನೇಟು ಮತ್ತು ಇತರ ಕಥೆಗಳು: (ಪುಷ್ಕಿನ್ನನ ೫ ಕಥೆಗಳ ಅನುವಾದ) ಕರ್ನಾಟಕ ಸಂಘ, ಗೌ॥ ಕಾಲೇಜು ಬೆಂಗಳೂರು: ೧೯೬೬

೨೭. ನಿಲ್ದಾಣಗಳ ನಡುವೆ : (೨೫ ಸಣ್ಣ ಕಥೆಗಳು) : ರಾಘವ ಪ್ರಕಾಶನ ೧೯೭೪

೨೮. ಶೃಂಗಾರ ವಿಹಾರ : (ಕನ್ನಡ ಕಾವ್ಯಗಳಿಂದ ಆಯ್ದ ಪ್ರಣಯ ಪ್ರಸಂಗಗಳು) ರಾಘವಪ್ರಕಾಶನ, ೧೯೮೬

ಕಾದಂಬರಿ

೨೯. ಭಾಗ್ಯಲಕ್ಷ್ಮಿ: ಎಸ್.ಎಸ್.ಎನ್.ಬುಕ್ ಡಿಪೋ, ಬೆಂಗಳೂರು: ೧೯೪೨ (ದ್ವಿ.ಮು.೧೯೪೪)

೩೦. ರಾಬಿನ್‌ಸನ್ ಕ್ರೂಸೊ (೧) : ಎಸ್.ಎಸ್.ಎನ್.ಬುಕ್ ಡಿಪೋ, ಬೆಂಗಳೂರು ೧೯೪೮

೩೧. ಮಾದನ ಮಗಳು: ಮನೋಹರ ಗ್ರಂಥಮಾಲೆ, ಧಾರವಾಡ ೧೯೫೦, ದ್ವಿ.ಮು.ರಾಘವ ಪ್ರಕಾಶನ ೧೯೮೯ (ದೇವರಾಜ ಬಹುದ್ದೂರ್ ಸಾಹಿತ್ಯ ನಿಧಿ ಬಹುಮಾನ)

೩೨. ಸೌಭಾಗ್ಯವತಿ: ಎಸ್.ಎಸ್.ಎನ್.ಬುಕ್ ಡಿಪೋ ೧೯೫೧

೩೩. ನಂಜಿನ ಸವಿ: ಉಷಾ ಸಾಹಿತ್ಯ ಮಾಲೆ, ಮೈಸೂರು ೧೯೫೨

೩೪. ಸ್ನೇಹದ ಕಾಣಿಕೆ : ರಾಘವ ಪ್ರಕಾಶನ ೧೯೫೩

೩೫. ತಾಯ ಬಯಕೆ : ಸುಧಾ ಪ್ರಕಾಶನ ಬೆಂಗಳೂರು : ೧೯೫೪ (ದ್ವಿ.ಮು.ಶಾರದಾ ಪ್ರಕಟನಾಲಯ, ಬೆಂಗಳೂರು ೧೯೫೯)

೩೬. ಕುಂಕುಮ ಭಾಗ್ಯ: ಉಷಾ ಸಾಹಿತ್ಯ ಮಾಲೆ, ಮೈಸೂರು ೧೯೫೫

೩೭. ಜೀವನದ ಜೊತೆಗಾತಿ: ಶಾರದಾ ಪ್ರಕಟನಾಲಯ ೧೯೫೯

೩೮. ಜೂಡಿಲಕ್ಷ್ಮಿ: (ಇಂಗ್ಲಿಷಿನಿಂದ ಅನುವಾದ) ನ್ಯಾಷನಲ್ ಬುಕ್ ಟ್ರಸ್ಟ್, ದೆಹಲಿ ೧೯೬೫

೩೯. ಏಳು ಇಪ್ಪಾರಿನ ಮನೆ: (ಹಾತಾರ್ನಿನ ಕಾದಂಬರಿಯ ಅನುವಾದ) ಕಾವ್ಯಾಲಯ ೧೯೬೬

ಸಾಹಿತ್ಯ ಸಮೀಕ್ಷೆ

೪೦. ಹೊಸಗನ್ನಡ ಸಾಹಿತ್ಯ ಮತ್ತು ಇತರ ಲೇಕನಗಳು : ರಾಘವ ಪ್ರಕಾಸನ, ೧೯೫೮

೪೧. ಕನ್ನಡ ಜೀವನ ಚರಿತ್ರೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೩

೪೨. ಶಾಸ್ತ್ರ ಸಾಹಿತ್ಯ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೫

೪೩. ಉತ್ತರೋತ್ತರ ಕಾಲೀನ ಹರಿದಾಸರು ಮತ್ತು ಅನುಭಾವ ಕವಿಗಳು : ರಾಘವ ಪ್ರಕಾಶನ, ೧೯೮೮

೪೪. ಸಾಹಿತ್ಯ ಮತ್ತು ಚಿತ್ರಕಲೆ : ರಾಘವ ಪ್ರಕಾಶನ ೧೯೮೬

೪೫. ಜೈಮಿನಿ ಭಾರತ ಸಮೀಕ್ಷೆ : ರಾಘವ ಪ್ರಕಾಶನ ೧೯೮೬

ನಾಟಕ

೪೬. ಹೂವಿನ ಆಸೆ: ಭಾರತೀ ಸಾಹಿತ್ಯ ಮಂದಿರ ೧೯೩೬ (ದ್ವಿ.ಮು.೧೯೪೩)

೪೭. ತೆರೆಮರೆಯ ಚಿತ್ರಗಳು: ಕಾವ್ಯಾಲಯ ೧೯೪೧

೪೮. ಸ್ವಯಂವರ : ರಾಘವ ಪ್ರಕಾಶನ ೧೯೫೩

೪೯. ಕವಿಯ ಹೆಂಡತಿ : ರಾಘವ ಪ್ರಕಾಶನ ೧೯೫೫

೫೦. ತೊಟ್ಟಿಲು ತೂಗದ ಕೈ: ಶಾರದಾ ಪ್ರಕಟನಾಲಯ ೧೯೫೯ (ಮೈಸೂರು ಸರ್ಕಾರದ ಬಹುಮಾನ)

೫೧. ತಿರುಕಿಯ ಕನಸು: ಅಪ್ರಕಟಿತ

೫೨. ಕುಮಾರ ಗೌತಮ : ಹಂಸಧ್ವನಿ ಪ್ರಕಾಶನ, ಬೆಂಗಳೂರು ೧೯೭೯ (ಮಕ್ಕಳ ನಾಟಕ)

೫೩. ಕೈಕೋಲು : ಕಾವ್ಯಲಯ ೧೯೭೯ (ಮಕ್ಕಳ ನಾಟಕ)

೫೪. ಕರುಣೆಯ ಕುಡಿ: ರಾಘವ ಪ್ರಕಾಶನ ೧೯೮೦ (ಮಕ್ಕಳ ನಾಟಕ)

ಪ್ರಬಂಧಗಳು

೫೫. ಹಿಡಿಹೂವು: ರಾಘವ ಪ್ರಕಾಶನ ೧೯೪೬ (ಕನ್ನಡಮ್ಮನ ಕೊರಗು ಶೀರ್ಷಿಕೆಯಲ್ಲಿ ಪುನರ್ಮುದ್ರಿತ ೧೯೮೩)

೫೬. ಮುಗಿಲುಗಳು : ಎಸ್.ಎಸ್.ಎನ್. ಬುಕ್ ಡಿಪೋ, ೧೯೫೦ (ದ್ವಿ.ಮು.ಧೂಮಲೀಲೆ ಮತ್ತು ಮುಗಿಲುಗಳು : ರಾಘವ ಪ್ರಕಾಶನ, ೧೯೫೯)

೫೭. ಬಾಳಿನ ಬುತ್ತಿ: ಸಾಹಿತ್ಯ ಮಂದಿರ, ಬೆಂಗಳೂರು, ೧೯೫೭

೫೮. ಹಿತ ಚಿಂತನ: ರಾಘವ ಪ್ರಕಾಶನ ೧೯೮೮

೫೯. ಪ್ರತಿಮಾಗೃಹ : ರಾಘವ ಪ್ರಕಾಶನ ೧೯೯೦

ಅಲಂಕಾರಶಾಸ್ತ್ರ

೬೦. ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೦

೬೧. ಕನ್ನಡ ಸಾಹಿತ್ಯದಲ್ಲಿ ಶಾಂತರಸ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೦

ಸಂಪಾದಿತ ಕೃತಿಗಳು

೬೨. ಕವಿರಾಜಮಾರ್ಗ: ಕರ್ನಾಟಕ ಸಂಘ, ಗೌ॥ ಕಾಲೇಜು, ಬೆಂಗಳೂರು ೧೯೬೮, ಇದೇ ಗ್ರಂಥದ ವಿದ್ಯಾರ್ಥಿಗಳ ಆವೃತ್ತಿ:ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೫

೬೩. ಉದಯಾದಿತ್ಯಾಲಂಕಾರ : ಡಿ.ವಿ.ಕೆ.ಮೂರ್ತಿ, ಮೈಸೂರು ೧೯೭೯

೬೪. ಅರ್ಚನ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೧

೬೫. ಕೀರ್ತನ ಕುಸುಮಾಂಜಲಿ : ಬಿ.ಎಂ.ಶ್ರೀ.ಪ್ರತಿಷ್ಠಾನ, ಬೆಂಗಳೂರು ೧೯೮೦

೬೬. ಕವಿ ಕೆಳದಿ ವೆಂಕಣ್ಣನ ಕೃತಿಗಳು: (ಕೆಳದಿ ಗುಂಡಾಜೋಯಿಸರೊಂದಿಗೆ) ಕೆಳದಿ ಮ್ಯೂಸಿಯಂ, ಕೆಳದಿ ೧೯೮೦

೬೭. ಸೂತ ಭಾರತ: (ಶ್ರೀ ಕೃಷ್ಣ ಭಟ್, ಎಂ.ಜಿ.ಹೆಗಡೆ ಅವರೊಂದಿಗೆ) ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೨

೬೮. ಸರ್ವಜ್ಞ ವಚನಗಳು: (ಕೆ.ಆರ್.ಗಣೇಶ್ ಮತ್ತು ವಿ.ವೆಂಕಟರಾವ್ ಅವರೊಂದಿಗೆ) : ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೨

೬೯. ಕೃಷ್ಣದೇವರಾಯನ ದಿನಚರಿ : (ಡಾ|| ವಿ.ಎಸ್.ಎಸ್.ಆಚಾರ್ ಅವರೊಂದಿಗೆ) : ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೩

೭೦. ಧ್ರುವಚರಿತ್ರೆ: (ಡಾ||ಎನ್.ಎಸ್.ಲಕ್ಷ್ಮೀ ನಾರಾಯಣಭಟ್ಟರೊಂದಿಗೆ) ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೩.

೭೧. ಶ್ರೀ ಕೃಷ್ಣ ಬಾಲಲೀಲೆ: ಭಾಗ ೧ ಮತ್ತು ೨, ಬಿ.ಎಂ.ಶ್ರೀ. ಪ್ರತಿಷ್ಠಾನ ೧೯೮೭. ೮೯

೭೨. ವೀರ ಅಭಿಮನ್ಯು : ಕರ್ನಾಟಕ ಸಂಘ, ಗೌ||ಕಾಲೇಜು, ೧೯೬೦, (ಶ್ರೀಮತಿ ಎಂ.ಎಲ್.ಲಲಿತಮ್ಮನವರ ಜೊತೆ)

೭೩. ಮಣಿಹ: (ಸಿದ್ಧಯ್ಯ ಪುರಾಣಿಕ, ಡಾ|| ಶೇಷಶಾಸ್ತ್ರಿಗಳ ಜೊತೆಯಲ್ಲಿ), ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೨

೭೪. ಹಸ್ತಪ್ರತಿಶಾಸ್ತ್ರ: (ಡಾ||ಚಿದಾನಂದ ಮೂರ್ತಿಯವರ ಜೊತೆಯಲ್ಲಿ) ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೩

೭೫. ಚಂದ್ರಚೂಡಾಮಣಿ ಶತಕ: ಬಿ.ಎಂ.ಶ್ರೀ.ಪ್ರತಿಷ್ಠಾನ, ೧೯೮೮

೭೬. ಕುಮಾರವ್ಯಾಸ ಭಾರತ ಸಂಗ್ರಹ: ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೯

ಶಾಸ್ತ್ರ ಸಾಹಿತ್ಯ

೭೭. ಪ್ರಾಚೀನ ಕನ್ನಡ ವ್ಯಾಕರಣಗಳು : ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು, ೧೯೮೦, ದ್ವಿ.ಮು.೧೯೮೯

ಮಕ್ಕಳ ಸಾಹಿತ್ಯ (ಜೀವನ ಚರಿತ್ರೆ)

೭೮. ಯುಧಿಷ್ಠಿರ: ರಾಷ್ಟ್ರೋತ್ಥಾನ ಪರಿಷತ್ತು, ಬೆಂಗಳೂರು ೧೯೭೩ (ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)

೭೯. ಕವಿರನ್ನ: ರಾಷ್ಟ್ರೋತ್ಥಾನ ಪರಿಷತ್ತು, ೧೯೭೬

೮೦. ಕನ್ನಡದ ಕತೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೯

೮೧. ವೈಣಿಕ ವಿದ್ವಾನ್ ಎಲ್.ರಾಜಾರಾವ್: ಐ.ಬಿ.ಎಚ್.ಪ್ರಕಾಶನ, ಬೆಂಗಳೂರು ೧೯೮೩

೮೨. ಮಕ್ಕಳ ಸಾಹಿತ್ಯ (ಸಂಪಾದಿತ): ವಿಶ್ವಕನ್ನಡ ಸಮ್ಮೇಳನ ಪ್ರಕಟನೆ, ಕರ್ನಾಟಕ ಸರ್ಕಾರ ೧೯೮೬

ಜೀವನ ಚರಿತ್ರೆ

೮೩. ವಿವೇಕಾನಂದ : (ವೆಲ್ಲೂರಿನ ಶ್ರೀಮತಿ ಕೃಷ್ಣಕುಮಾರಿ ಅವರ ತೆಲಗು ಕೃತಿಯ ಅನುವಾದ) ವಿವೇಕ ಪಬ್ಲಿಷರ್ಸ್, ಬೆಂಗಳೂರು, ೧೯೫೧

೮೪. ಎ.ಆರ್.ರಾಜರಾಜವರ್ಮ: (ಕೆ.ಎಂ.ಜಾರ್ಜ್ ಅವರ ಇಂಗ್ಲೀಷ್ ಕೃತಿಯ ಅನುವಾದ) ಕೇಂದ್ರ ಸಾಹಿತ್ಯ ಅಕಾಡೆಮಿ, ದೆಹಲಿ, ೧೯೮೬

೮೫. ಮುದ್ದಣ: (ಇಂಗ್ಲೀಷ್) ಕೇಂದ್ರ ಸಾಹಿತ್ಯ ಅಕಾಡೆಮಿ, ದೆಹಲಿ, ೧೯೮೯

೮೬. ಟಿ.ಎಸ್.ವೆಂಕಣ್ಣಯ್ಯ: ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.೧೯೮೫

ಮರು ಮುದ್ರಣಗಳು, ಇತ್ಯಾದಿ

೮೭. ರಾಘವ ಕವನಕೋಶ: (ಹಂಸ ಪಥ, ಮುಗಿಯದ ಮಾಯೆ ಮತ್ತು ಗೀತ ಭಾರತಿ ಸಂಕಲನಗಳ ಕೂಡು ಸಂಪುಟ) ೧೯೬೯

೮೮. ರಸಮಂಜರಿ: (ಸಂಪಾದಿತ)

೮೯. ಗಂಡನನ್ನು ಗೆದ್ದವರು: (ಭಾಗ್ಯಲಕ್ಷ್ಮಿ ಮತ್ತು ಸೌಭಾಗ್ಯವತಿ ಕಾದಂಬರಿಗಳ ಕೂಡು ಸಂಪುಟ) ಗೀತಾ ಬುಕ್ ಹೌಸ್ ಮೈಸೂರು ೧೯೭೪

೯೦. ರಸಿಕತೆ: (ಲಲಿತ ಪ್ರಬಂಧ: ಮೂರು ಹೊಸ ಪ್ರಬಂಧಗಳ ಜೊತೆಗೆ ಹಳೆಯವು ಕೆಲವನ್ನು ಸೇರಿಸಿ ಪ್ರಕಟಿಸಿದ ಸಂಕಲನ) ಹಂಸಧ್ವನಿ ಪ್ರಕಾಶನ ೧೯೭೭

೯೧. ದಾದಿರನ್ನೆ (ಮಕ್ಕಳಿಗಾಗಿ ಕಥನ ಕವನ: ಆ ಚಿತ್ರಗಳು ಮತ್ತು ಇತರ ಕವನ ಸಂಕಲನಗಳಿಂದ ಆಯ್ದವು) ಹಂಸಧ್ವನಿ ಪ್ರಕಾಶನ, ೧೯೭೯

೯೨. ಕಾವ್ಯ ಪ್ರದೀಪಿಕೆ: (ಲೇಖಕರು: ಎಂ.ವಿ.ಸೀ., ಜಿ.ವಿ., ಕ.ವೆಂ., ಕಾವ್ಯ ಸಮೀಕ್ಷೆ) ಕರ್ನಾಟಕ ಸಂಘ, ಗೌ॥ಕಾಲೇಜು, ಬೆಂಗಳೂರು ೧೯೬೭

೯೩. ಬಿರಿಮೊಗ್ಗು: (ವಿದ್ಯಾರ್ಥಿಗಳ ಬರಹ) ಸಂಪಾದಿತ: ಕರ್ನಾಟಕ ಸಂಘ ಗೌ॥ ಕಾಲೇಜು, ಬೆಂಗಳೂರು,

೯೪. ಸೊಡರು: (ವಿದ್ಯಾರ್ಥಿಗಳ ಕವನ ಸಂಕಲನ) ಸಂಪಾದಿತ: ಕರ್ನಾಟಕ ಸಂಘ ಗೌ॥ ಕಾಲೇಜು, ಬೆಂಗಳೂರು,

೯೫. ವಿಕಾಸ: ಮೂರು ಸಂಚಿಕೆಗಳು: ವಿದ್ಯಾರ್ಥಿಗಳ ಪ್ರಬಂಧಗಳು, ಸಂಪಾದಿತ: ಕರ್ನಾಟಕ ಸಂಘ ಗೌ॥ ಕಾಲೇಜು, ಬೆಂಗಳೂರು,

೯೬. ವಿಕಾಸ, ಮೂರು ಸಂಚಿಕೆಗಳು: ವಿದ್ಯಾರ್ಥಿಗಳ ಪ್ರಬಂಧಗಳು, ಸಂಪಾದಿತ: ಕರ್ನಾಟಕ ಸಂಘ ಗೌ॥ ಕಾಲೇಜು, ಬೆಂಗಳೂರು,

೯೭. ಚಿನ್ನದ ಬೆಳಸು: ಸಂಪಾದಿತ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ವರ್ಣ ಮಹೋತ್ಸವದ ಪ್ರಕಟನೆ, ಕ.ಸಾ.ಪ., ೧೯೭೦

೯೮. ಕೌಸ್ತುಭ: ಸಂಪಾದಿತ: ಕನ್ನಡ ಮತ್ತು ಇಂಗ್ಲಿಷಿನಲ್ಲಿ : ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಪ್ರಕಟನೆ, ಕ.ಸಾ.ಪ., ೧೯೭೭

೯೯. ಆಕಾಶಯಾನ: (ಕೆ.ಪಿ.ರಾವ್ ಅವರ ಆಂಗ್ಲ ಕಿರುಹೊತ್ತಿಗೆಯ ಅನುವಾದ) ಮೈಸೂರು ವಿಶ್ವವಿದ್ಯಾನಿಲಯ, ೧೯೪೪

೧೦೦. ಧೀಮಂತ (ಡಿ.ವಿ.ಜಿ.ಸಂಸ್ಮರಣ ಸಂಪುಟ) : ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು ೧೯೮೮

ಎಂ.ವಿ.ಸೀ ಅವರನ್ನು ಕುರಿತು ಬಂದಿರುವ ಗ್ರಂಥಗಳು

೧. ಅಸ್ವಾದ: ಅಭಿನಂದನಗ್ರಂಥ, ಉದಯಭಾನು ಕಲಾ ಸಂಘ, ಕೆಂಪೆಗೌಡ ನಗರ, ಬೆಂಗಳೂರು ೧೯೮೩

೨. 'ಮೈ ವೆಂ ಸೀ ರಾಘವ : ಕಲಾದರ್ಶನ ವಿಶೇಷ ಸಂಚಿಕೆ, ಉದಯಭಾನು ಕಲಾ ಸಂಘ, ಬೆಂಗಳೂರು ೧೯೮೩

೩. ಎಂ.ವಿ.ಸೀ ೮೦ : (ಪರಿಚಯ ಗ್ರಂಥ) ಎಂ.ವಿ.ಸೀ. ೮೦ ಸನ್ಮಾನ ಸಮಿತಿ, ಬೆಂಗಳೂರು ೧೯೮೯

೪. ಲೋಚನ : ಎಂ.ವಿ.ಸೀ ವಿಶೇಷಾಂಕ, ಬಿ.ಎಂ.ಶ್ರೀ. ಪ್ರತಿಷ್ಠಾನ, ಜೂನ್ ೧೯೯೧

೫. ಎಂ.ವಿ.ಸೀ. ಸಂಸ್ಮರಣೆ: ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ

೬. ಕದಂಬ : ಎಂ.ವಿ.ಸೀ. ಅವರ ಸಂಶೋಧನಾ ಲೇಖನಗಳ ಸಮಗ್ರ ಸಂಪುಟ: ಎಂ.ವಿ.ಸೀ. ಸಂಸ್ಮರಣ ಸಮಿತಿ.

೭) ಗ್ರಂಥ ಋಣ:

೧. ಅರ್ಚನ: ಎಂ.ವಿ.ಸೀತಾರಾಮಯ್ಯ, ೧೯೭೧, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಆಸ್ವಾದ: ಶ್ರೀವತ್ಸ, ಅನಂತಪದ್ಮರಾಭರಾವ್, ಎಚ್.ಎಂ.ರಂಗನಾಥ್, ೧೯೮೩, ಉದಯಭಾನು ಕಲಾಸಂಘ (ರಿ).

೩. ಕನ್ನಡ ಸಾಹಿತ್ಯಕೋಶ: ರಾಜಪ್ಪದಳವಾಯಿ, ಕದಿರು ಪ್ರಕಾಶನ, ೧೯೯೬, ಮೈಸೂರು.

೪. ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ: ಡಾ॥ಸಿ.ಬಿ.ಹೊನ್ನಯ್ಯ, ೨೦೦೫, ಜೈಭೀಂ ಪ್ರಕಾಶನ.

೫. ಕನ್ನಡ ಗ್ರಂಥಸಂಪಾದನೆ: ಡಾ॥ಡಿ.ಎಲ್.ಎನ್, ೧೯೬೪, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೬. ಕಲಾರಾಘವ: ಎಂ.ವಿ.ಸೀ ಸಂಸ್ಮರಣ ಸಂಚಿಕೆ, ಜಿ.ಎಸ್.ವೆಂಕಟರಾಜು, ಗೀತಾಚಾರ್ಯ.

೭. ಕೀರ್ತನ ಕುಸುಮಾಂಜಲಿ: ಎಂ.ವಿ.ಸೀ, ೧೯೮೦, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.

೮. ಲೋಚನ: ಎಂ.ವಿ.ಸೀ ವಿಶೇಷಾಂಕ, ೧೯೯೧, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.

೯. ಎಂ.ವಿ.ಸೀ ವ್ಯಕ್ತಿಚಿತ್ರ ಮತ್ತು ಸೂಕ್ತಿಗಳು: ಎಸ್.ವಿ.ಶ್ರೀನಿವಾಸರಾವ್, ೨೦೦೬, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.

೧೦. ಎಂ.ವಿ.ಸೀ ೮೦ (ಪರಿಚಯಗ್ರಂಥ): ಎಂ.ವಿ.ಸೀ ೮೦ ಸನ್ಮಾನ ಸಮಿತಿ, ೧೯೮೯, ಬೆಂಗಳೂರು.

೧೧. ಎಂ.ವಿ.ಸೀ. ಸಂಸ್ಮರಣೆ: ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ

೧೨. ಶ್ರೀವಿಜಯ ಕೃತ ಕವಿರಾಜಮಾರ್ಗಂ: ಎಂ.ವಿ.ಸೀ, ೧೯೯೪, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.

೧೩. ಶ್ರೀಕೃಷ್ಣ ಬಾಲಲೀಲೆ ಭಾಗ-೧, ಭಾಗ-೨, ಎಂ.ವಿ.ಸೀ, ೧೯೮೬, ೧೯೯೬, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.